## ಅಧ್ಯಾಯ 6

# ಕ್ರೈಸ್ತೀಯ ನಡೆ (ಭಾಗ 2)

5:2–6:10ರಲ್ಲಿ ಕ್ರೈಸ್ತೀಯ ನಡೆಯ ಕುರಿತಾಗಿ ಪೌಲನು ಮಾಡುವ ಚರ್ಚೆಯು ಬೇರೆ ಕ್ರೈಸ್ತರಿಗೆ ಸಹಾಯ ಮಾಡುವವರಾಗಿರಬೇಕೆಂದು ಅಪ್ಪಣೆಗಳನ್ನು ಕೊಡುವದರೊಂದಿಗೆ ಅಂತ್ಯಗೊಳ್ಳುತ್ತದೆ (6:1–10). ಅಪೊಸ್ತಲನು ತನ್ನ ಸ್ವಂತ ಕೈಯಿಂದ ಬರೆಯುವ ಮೂಲಕ, ಪತ್ರಿಯನ್ನು ತನ್ನ ಅಂತಿಮವಾದ ಮಾತುಗಳಿಂದ ಮುಕ್ತಾಯಗೊಳಿಸುತ್ತಾನೆ, ಕರ್ತನಿಗೆ ನಂಬಿಗಸ್ತರಾಗಿ ಇರುವಂತೆ ಗಲಾತ್ಯದವರನ್ನು ಪ್ರೋತ್ಸಾಹಿಸುತ್ತಾನೆ (6:11–18).

## ಒಬ್ಬರ ಭಾರವನ್ನು ಮತ್ತೊಬ್ಬರು ಹೊತ್ತುಕೊಳ್ಳುವದು (6:1-10)

**1ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ
ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ.
ನೀನಾದರೋ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು. 2ಒಬ್ಬರು
ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ.
3ಯಾವನಾದರೂ ಅಲ್ಪನಾಗಿದ್ದು ತಾನು ದೊಡ್ಡವನೆಂದು ಭಾವಿಸಿಕೊಂಡರೆ ತನ್ನನ್ನು ತಾನೇ
ಮೋಸಗೊಳಿಸಿದವನಾಗಿದ್ದಾನೆ. 4ಪ್ರತಿಯೊಬ್ಬನು ತಾನು ಮಾಡಿದ ಕೆಲಸವನ್ನು ಪರಿಶೋಧಿಸಲಿ;
ಆಗ ಅವನು ತನ್ನ ನಿಮಿತ್ತದಿಂದ ಹೆಚ್ಚಳಪಡುವದಕ್ಕೆ ಆಸ್ಪದವಾಗುವದೇ ಹೊರತು ಮತ್ತೊಬ್ಬರ
ನಿಮಿತ್ತದಿಂದಾಗುವದಿಲ್ಲ. 5ಯಾಕಂದರೆ ಪ್ರತಿಯೊಬ್ಬನು ಸ್ವಂತ ಹೊರೆಯನ್ನು
ಹೊತ್ತುಕೊಳ್ಳಬೇಕು.**

**6ದೇವರ ವಾಕ್ಯದಲ್ಲಿ ಉಪದೇಶಹೊಂದುವವನು ಉಪದೇಶಮಾಡುವವನಿಗೆ ತನಗಿರುವ
ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ. 7ಮೋಸಹೋಗಬೇಡಿರಿ; ದೇವರು ತಿರಸ್ಕಾರ
ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು. 8ತನ್ನ
ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು
ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು. 9ಒಳ್ಳೇದನ್ನು ಮಾಡುವದರಲ್ಲಿ
ಬೇಸರಗೊಳ್ಳದೆ ಇರೋಣ. ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು
ಕೊಯ್ಯುವೆವು. 10ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ
ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ.**

ಒಬ್ಬ ಲೇಖಕನಾಗಿ ಪೌಲನ ಅತಿ ಸಾಮಂಜಸ್ಯತೆಯುಳ್ಳ ಗುಣಸ್ವಭಾವಗಳಲ್ಲೊಂದು ಎಂದರೆ - ವಿವಿಧ ಉಪದೇಶಗಳು, ಪ್ರಶ್ನೆಗಳು, ಮತ್ತು ಬುದ್ಧಿವಾದಗಳನ್ನೊಳಗೊಂಡ ಮುಖ್ಯ ಭಾಗದ ಕುರಿತು ಚರ್ಚಿಸಿದ ಬಳಿಕ - ಆತನು ತನ್ನ ಎಲ್ಲಾ ಪತ್ರಿಕೆಗಳನ್ನು ಯಾವ ವ್ಯತ್ಯಾಸವೂ ಇಲ್ಲದೆ ಕೊನೆಯಲ್ಲಿ ಒಂದು “ಕಾರ್ಯರೂಪ”ದ ವಿಭಾಗ ಸೇರಿಸುವದರ ಮೂಲಕ ಅಂತ್ಯಗೊಳಿಸುತ್ತಿದ್ದನು. ತಾನು ಅವರಿಗೆ ಕಲಿಸಿರುವದನ್ನೆಲ್ಲಾ ಅಭ್ಯಾಸ ಮಾಡಿಕೊಳ್ಳುವಂತೆ

ತನ್ನ ವಾಚಕರನ್ನು ಆತನು ಸ್ಫೂರ್ತಿಗೊಳಿಸಲು ಅಪೇಕ್ಷಿಸಿದನು. 6:1-10ರಲ್ಲಿ, ಒಬ್ಬ ಆತ್ಮೀಕ ಮನಸ್ಸಿನ ಮನುಷ್ಯನು ಸಭೆ ಮತ್ತು ಲೋಕ ಎರಡರಲ್ಲೂ ಎದುರಿಸಬಹುದಾದ ವಿವಿಧ ಪರಿಸ್ಥಿತಿಗಳಲ್ಲಿ ಹೇಗೆ ಪ್ರತಿಕ್ರಿಯಿಸತಕ್ಕದ್ದೆಂಬುದನ್ನು ತೋರಿಸಿ ಕೊಡುವದಕ್ಕೆ ಸಾಗುತ್ತಾನೆ.

**ವಚನ 1.** ಮತ್ತೊಂದಾವರ್ತಿ, ಗಲಾತ್ಯದ ಕ್ರೈಸ್ತರನ್ನು ಪೌಲನು **ಸಹೋದರರೇ** ಎಂದು ಕರೆಯುತ್ತಾನೆ (1:2, 11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಭೆಯಲ್ಲಿದ್ದ ವೈಷಮ್ಯಗಳನ್ನು ಮತ್ತು ಅಸೂಯೆಗಳನ್ನು ಈಗಷ್ಟೆ ಖಂಡಿಸಿದವನಾಗಿ (5:26), ದೇವರ ಜನರ ವೈಶಿಷ್ಟ್ಯತೆಯಾಗಿರಬೇಕಾದ ಪರಸ್ಪರ ಕಾಳಜಿ ಮತ್ತು ಕಳಕಳಿಗಳನ್ನು ಪ್ರತಿಪಾದಿಸುತ್ತಾನೆ. ಆತನು ಜೊತೆಯ ಕ್ರೈಸ್ತನು **ದೋಷದಲ್ಲಿ ಸಿಕ್ಕಿ** ಬೀಳುವದನ್ನು ಕಲ್ಪಿಸಿಕೊಳ್ಳುತ್ತಾನೆ. "ಸಿಕ್ಕಿಬೀಳು" ಎಂಬುದು προλαμβάνω (*prolambanō*) ಎಂಬ ಗ್ರೀಕ್ ಪದದಿಂದ ಬರುತ್ತದೆ, ಅದನ್ನು ಇಲ್ಲಿ ಎರಡು ವಿಧದಲ್ಲಿ ಅರ್ಥಮಾಡಿಕೊಳ್ಳಬಹುದು: ಅದು ಒಬ್ಬ ಪಾಪವೊಂದಕ್ಕೆ "ಒಳಗಾಗುವದು" (KJV) ಎಂಬುದನ್ನು ಸೂಚಿಸಬಹುದು, ಅಥವಾ ಅದು ಒಬ್ಬನ ಪಾಪವು ಸಭೆಯ ಬೇರೆ ಸದಸ್ಯರಿಂದ "ಕಂಡುಹಿಡಿಯಲ್ಪಟ್ಟರೆ" (NRSV) ಎಂದರ್ಥವಾಗಿದೆ. ಬಹುಶಃ, ಇಲ್ಲಿ ಎರಡನೆಯದು ಕಂಡು ಬರುವದಾಗಿದೆ, ಆದಾಗ್ಯೂ ಮೊದಲನೆಯ ಅರ್ಥವು ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿರುತ್ತದೆ; ಬೇರೆ ಕ್ರೈಸ್ತರು ಮಧ್ಯಪ್ರವೇಶಿಸಬೇಕೆಂದರೆ ಅವರಿಗೆ ಪಾಪದ ಕುರಿತು ತಿಳಿದುಕೊಳ್ಳಬೇಕಾಗುವದು. "ದೋಷ" ಎಂಬುದಕ್ಕಿರುವ ಪದವು παράπτωμα (*paraptōma*) ಎಂಬುದು, ಇದು ಒಂದು "ತಪ್ಪು ಹೆಜ್ಜೆ" ಅಥವಾ ಒಂದು "ಪ್ರಮಾದ" ಎಂಬುದನ್ನು - ಅಂದರೆ, ಒಂದು "ಪಾಪ" ಅಥವಾ "ಅಪರಾಧವೆಸಗುವದು" - ಸೂಚಿಸುತ್ತದೆ. ಈ ಕಷ್ಟಕರವಾದ ವಿಷಯದ ಕುರಿತು ಮಾತಾಡುವ ವೇಳೆ ಪೌಲನು ಇಲ್ಲಿ ಜಾಗರೂಕತೆಯಿಂದ (ಮತ್ತು ಕಾಳಜಿಯಿಂದ) ಚರ್ಚಿಸುತ್ತಾನೆ. ಅದು ಒಬ್ಬ ಸಹೋದರ ಅಥವಾ ಒಬ್ಬ ಸಹೋದರಿ, ಕ್ರಿಸ್ತನ ದೇಹದಲ್ಲಿನ ಜೊತೆಯ ಸದಸ್ಯನ ಕುರಿತಾಗಿತ್ತಾದ್ದರಿಂದ ಆತನು ಆ ರೀತಿ ಮಾಡಿದನು.

ಇಲ್ಲಿ ಕಂಡು ಬರುವ ಭಾಷೆಯು ಯೋಹಾನ 7:53-8:11ರಲ್ಲಿ[1] ಕಂಡು ಬರುವ ಸ್ತ್ರೀಯನ್ನು ಜ್ಞಾಪಿಸುವದಾಗಿದೆ, ಆಕೆಯು "ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು [καταλαμβάνω, *katalambanō*]" (ಯೋಹಾನ 8:4). ಈ ಕಥೆಯಲ್ಲಿ ಯೇಸುವು ತೋರಿದ ಮನೋಭಾವವು ಯಾವದೇ ದೋಷದಲ್ಲಿ ಸಿಕ್ಕಿನ ಜೊತೆಯ ವಿಶ್ವಾಸಿಯನ್ನು ಕ್ರೈಸ್ತನು ಹೇಗೆ ಬುದ್ಧಿ ಹೇಳಿ ಸರಿ ದಾರಿಗೆ ತರುವದಕ್ಕೆ ಅಪೇಕ್ಷಿಸಬೇಕೆಂದು ಮಾದರಿಯನ್ನು ತೋರುವದಾಗಿದೆ. ಆ ಸ್ತ್ರೀಯ ಮೇಲೆ ದೋಷಾರೋಪ ಮಾಡಿದವರು ಶಾಸ್ತ್ರಿಗಳು ಮತ್ತು ಫರಿಸಾಯರು, ಇವರು ಮೋಶೆಯ ಧರ್ಮಶಾಸ್ತ್ರಕ್ಕಾಗಿ ವೈರಾಗ್ಯವುಳ್ಳವರಾಗಿದ್ದರು. ಅವರು ಹೀಗೆ ಹೇಳುವ ಮೂಲಕ ಯೇಸುವನ್ನು ಪರೀಕ್ಷಿಸಿದರು, "ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆಕೊಟ್ಟಿದ್ದಾನೆ; ಈಕೆಯ ವಿಷಯದಲ್ಲಿ ನೀನು ಏನು ಹೇಳುತ್ತೀ" (ಯೋಹಾನ 8:5). ಅವರಿಗೆ ಸ್ತ್ರೀಯ ಬಗ್ಗೆಯಾಗಲಿ ಅಥವಾ ಧರ್ಮಶಾಸ್ತ್ರದ ಬಗ್ಗೆಯಾಗಲಿ ಚಿಂತೆಯಿರಲಿಲ್ಲ; ಯೇಸುವನ್ನು ತಪ್ಪಿನಲ್ಲಿ ಸಿಕ್ಕಿಸಬೇಕೆಂಬುದೇ ಅವರ ಪ್ರಧಾನ ಉದ್ದೇಶವಾಗಿದೆ. ಆತನು ಸ್ತ್ರೀಯರ ಮೇಲೆ ಆರೋಪ ಮಾಡಿದವರ ಹೃದಯಗಳನ್ನು, ಅವರ ಪಾಪಗಳ ಇಡೀ ರಾಶಿಯೂ ಸೇರಿದಂತೆ ಎಲ್ಲವನ್ನೂ ಬಲ್ಲವನಾಗಿದ್ದನು - ಅವರ ಗುಪ್ತ ಪಾಪಗಳನ್ನು ಸಹ ಅರಿತವನಾಗಿದ್ದನು. ಆತನು ಅವರಿಗೆ ಈ ರೀತಿಯಲ್ಲಿ ಸವಾಲು ಹಾಕಿದನು, "ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲನ್ನು ಹಾಕಲಿ" (ಯೋಹಾನ 8:7). ಅವರೊಳಗೆ ಹಿರಿಯರು ಮೊದಲ್ಗೊಂಡು ಚಿಕ್ಕವರ ತನಕವೂ, ನಿಶ್ಶಬ್ದವಾಗಿ ಅಲ್ಲಿಂದ ಹೊರಟು ಹೋಗುವದೇ ಅತ್ಯಂಥ ನ್ಯಾಯಯುತವಾದದ್ದೆಂದು ನಿರ್ಧರಿಸಿಕೊಂಡಿದ್ದರು.

ಈ ಕಥೆಯಲ್ಲಿ ಏನು ಸಂಭವಿಸಿತೆಂಬುದನ್ನು ಅವಲೋಕಿಸುವ ವೇಳೆ ಮೂರು ಸತ್ಯಗಳು ಎದ್ದು ಕಾಣುತ್ತವೆ. ಮೊದಲನೆಯದಾಗಿ, ಪಾಪಿಯಾಗಿರುವ ಮನುಷ್ಯನು ತನ್ನ ನೆರೆಯವನ ಮೇಲೆ ಅಂತಿಮ ತೀರ್ಪನ್ನು ಘೋಷಿಸುವದಕ್ಕೆ ಯೋಗ್ಯನಾದವನಲ್ಲ. ಎರಡನೆಯದಾಗಿ, ಕಳೆದು ಹೋಗಿರುವವರನ್ನು ಹುಡುಕಿ ರಕ್ಷಿಸುವದಕ್ಕೆ ಬಂದ (ಲೂಕ 19:10) ನಮ್ಮ ನೀತಿಯುಳ್ಳ ಕರ್ತನು, ತನ್ನ ಮುಂದೆ ಅಪರಾಧವು ವ್ಯಕ್ತಿರೂಪದಲ್ಲಿ ನಿಂತಿದ್ದರೂ ಅಪರಾಧನಿರ್ಣಯಾತ್ಮಕ ತೀರ್ಪನ್ನು ಘೋಷಿಸಲು ನಿರಾಕರಿಸಿದನು. ಆ ಸ್ತ್ರೀಯ ಅಪರಾಧವು ಏನೇ ಆಗಿದ್ದರೂ ಮುಖ್ಯವಲ್ಲ ಎಂದು ಅದರರ್ಥವಾಗಿರಲಿಲ್ಲ; ಒಂದು ದಿನ, ಆಕೆಯು ಮಾತ್ರವಲ್ಲದೆ ಆಕೆಯ ಮೇಲೆ ತಪ್ಪು ಹೊರಿಸಿದವರು ಸಹ - ಮತ್ತು ನಾವು ಸಹ - ಆತನ ಮುಂದೆ ಅಂತಿಮ ನ್ಯಾಯತೀರ್ಪಿನ ವೇಳೆ ನಿಂತುಕೊಳ್ಳುವೆವು. ನಮಗೆ ಸಾಂತ್ವನಕರವೇನೆಂದರೆ, ನಮ್ಮ ನ್ಯಾಯಾಧಿಪತಿಯು ಹೆಚ್ಚು ಆಳವಾಗಿ ಬಯಸುವಂಥದ್ದು ನೀತಿವಂತರೆಂಬ ನಿರ್ಣಯಿಸುವದೇ, ಹೊರತು ಅಪರಾಧನಿರ್ಣಯವನ್ನಲ್ಲ ಎಂಬುದೆ. ವಾಸ್ತವಿಕದಲ್ಲಿ, ಇದು ನಮ್ಮ ಕರುಣೆಯುಳ್ಳ ವಿಮೋಚಕನಾದ ಯೇಸುವಿನ ಜೀವಿತ-ಉದ್ದೇಶವಾಗಿತ್ತು, ಆತನು ನಮ್ಮ ವಿಮೋಚನಾರ್ಥವಾಗಿ ಶಿಲುಬೆಯ ಮೇಲೆ ಅಂತಿಮ ಬೆಲೆಯನ್ನು ಕಟ್ಟಿದನು (ರೋಮಾ 8:32-39). ಮೂರನೆಯದಾಗಿ, ಯೇಸುವು ಸ್ತ್ರೀಯನ್ನು ಆತ್ಮೀಕವಾಗಿ ಆಕೆಯು ಮುಂಚೆ ಇದ್ದಂಥ ಸ್ಥಳದಲ್ಲಿಯೇ ಬಿಟ್ಟು ಬಿಡಲಿಲ್ಲ. ಬದಲಾಗಿ, ಆತನು ಆಕೆಯನ್ನು ಪಶ್ಚಾತ್ತಾಪ ಪಡುವಂತೆ ಕರೆದನು. ಆತನು ಆಕೆಗೆ ಹೀಗೆ ಹೇಳಿದನು, "ಹೋಗು, ಇನ್ನು ಮೇಲೆ ಪಾಪಮಾಡಬೇಡ" (ಯೋಹಾನ 8:11).

"ದೋಷದಲ್ಲಿ ಸಿಕ್ಕಿದ" ಮನುಷ್ಯನ ವಿಷಯದಲ್ಲಿ ಕ್ರಮ ಕೈಗೊಳ್ಳುವ ಜವಾಬ್ದಾರಿಯು ಯಾರ ಮೇಲಿರುತ್ತದೆಂದು ಪೌಲನು ಹೇಳಿದನು? "ಆತ್ಮನಿಂದ ನಡಿಸಿಕೊಳ್ಳುವವರು." ಒಬ್ಬ ಭಕ್ತಿಯುಳ್ಳ ಮನುಷ್ಯನ ಗುರಿಯು ಬೇರೆಯವರನ್ನು ಅಪರಾಧಿಗಳೆಂದು ನಿರ್ಣಯಿಸುವದಲ್ಲ. ಅಂತಹ ಮನೋಭಾವವೊಂದನ್ನು ಹೊಂದಿರುವವರು, ಅದನ್ನು ಅವರು ಗ್ರಹಿಸಿಕೊಂಡರೂ ಅಥವಾ ಗ್ರಹಿಸಿಕೊಳ್ಳದಿದ್ದರೂ ಸರಿಯೇ, ಅವರು ತಪ್ಪು ಹೊರಿಸುವವನಾದ ಸೈತಾನನ ಪಕ್ಷದವರಾಗಿದ್ದಾರೆ (ಪ್ರಕಟನೆ 12:10; ನೋಡಿರಿ ಯೋಬ 1:6-12). ದುಷ್ಟನ ಜೀವಿತ-ಉದ್ದೇಶವೇ ಇದಾಗಿರುತ್ತದೆ, ಮತ್ತು ಉತ್ತಮರಾದ ಜನರಲ್ಲಿ ಅವರ ವಿರುದ್ಧ ಸುಲಭವಾಗಿ ದೋಷಾರೋಪಗಳನ್ನು ಮಾಡುವದಕ್ಕೆ ಸಾಕಾಗುವಷ್ಟು ಪಾಪಗಳು ಯಾವಾಗಲೂ ಇದ್ದೇ ಇರುತ್ತವೆ.

ಯಾರಲ್ಲಿ ದೇವರಾತ್ಮನು ವಾಸವಾಗಿದ್ದಾನೋ ಆ ಆತ್ಮೀಕವಾಗಿರುವ ವ್ಯಕ್ತಿಯು, ಪಾಪದಲ್ಲಿ ಸಿಕ್ಕಿಬೀಳುವ ಒಬ್ಬ ಸಹೋದರನನ್ನು **ಶಾಂತಭಾವದಿಂದ ತಿದ್ದಿ ಸರಿಮಾಡ**ಬೇಕು ಎಂದು ಬೇಡಿಕೊಳ್ಳಲ್ಪಟ್ಟಿದ್ದಾನೆ. "ಸರಿಮಾಡು"ವದು (καταρτίζω, *katartizō*) ಎಂದರೆ ಒಂದನ್ನು ಅದಕ್ಕೆ ಮುಂಚೆ ಇದ್ದಂಥ ಕೆಲಸ ಮಾಡುವ ಸ್ಥಿತಿಗೆ ಪುನಃ ತರುವದು ಎಂದರ್ಥವಾಗಿದೆ. ಅದು ಮತ್ತಾಯ 4:21 ಮತ್ತು ಮಾರ್ಕ 1:19ರಲ್ಲಿ ಮೀನು ಹಿಡಿಯುವ ಬಲೆಗಳನ್ನು ಸರಿಪಡಿಸುತ್ತಿರುವದಕ್ಕೆ ಬಳಸಲ್ಪಟ್ಟಿದೆ. "ಶಾಂತಭಾವ" (πραΰτης, *prautēs*) ಎಂಬುದು, ಇದು "ಸಾಧುತ್ವ" (KJV) ಎಂದು ಸಹ ಅನುವಾದಿಸಲ್ಪಟ್ಟಿದ್ದು, ಇದು ದೇವರಾತ್ಮನಿಂದ ಉಂಟಾಗುವ ಫಲದಲ್ಲೊಂದಾಗಿ ಕಾಣಿಸಿಕೊಳ್ಳುವ ಅದೇ ಪದವಾಗಿರುತ್ತದೆ (5:23ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪೌಲನು ಪಾಪದಲ್ಲಿ ಸಿಕ್ಕಿರುವ ಒಬ್ಬ ಸಹೋದರನಿಗೆ ಬುದ್ಧಿಹೇಳಿ ಸರಿಮಾಡುವದಕ್ಕೆ ಬಯಸುವವರಿಗೆ ಒಂದು ಎಚ್ಚರಿಕೆಯ ಮಾತನ್ನು ನೀಡುತ್ತಾನೆ: **ನೀನಾದರೋ ದುಷ್ಪ್ರೇರಣೆಗೆ**

**ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.** ನಮ್ಮ ಪ್ರಧಾನ ವೈರಿ ಹಾಗೂ ಪಾಪವನ್ನು ಪ್ರಚೋದಿಸುವವನು ಆಗಿರುವ ಸೈತಾನನು, ದೇವರ ಸಮುದಾಯದೊಳಗಿನ ತಮ್ಮ ತುರ್ತು ಕರ್ತವ್ಯಗಳನ್ನು ನಿರ್ವಹಿಸುವದರಲ್ಲಿ ಸಹ ಜನರನ್ನು ಹೇಗೆ ಪಾಪ ಮಾಡುವಂತೆ ಶೋಧಿಸಬೇಕೆಂದು ಬಲ್ಲವನಾಗಿದ್ದಾನೆ. ಅಂಥ ಪರಿಸ್ಥಿತಿಗಳಲ್ಲಿ ಒಬ್ಬನು ಯಾವ ಪಾಪ ಮಾಡುವಂತೆ "ಶೋಧಿಸಲ್ಪಡುವ" ಸಾಧ್ಯತೆಯಿದೆ? ಗರ್ವವನ್ನು ತೋರ್ಪಡಿಸುವದು ಮತ್ತು ತನ್ನ ಸ್ವಂತ ನೀತಿಯಲ್ಲಿ ಕೊಚ್ಚಿಕೊಳ್ಳುವದು ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರಬಹುದಾಗಿದೆ. Kenneth L. Bolesನು ಗಮನಕ್ಕೆ ತರುವದೇನೆಂದರೆ "ಆತ್ಮೀಕವಾಗಿ ನಡಿಸಿಕೊಳ್ಳುವ" ಕ್ರೈಸ್ತನ ಲಕ್ಷ್ಯವು "ದಂಡಿಸುವದು, ಶಿಕ್ಷಿಸುವದು, ಅಥವಾ ಪ್ರತೀಕಾರ ಸಲ್ಲಿಸುವದು ಅಲ್ಲ," ಆದರೆ ಬದಲಾಗಿ "ತಪ್ಪು ಮಾಡಿದ ಕುರಿಯನ್ನು ಕಾಪಾಡಿ ಪುನಃ ಮಂದೆಗೆ ಸೇರಿಸುವದೇ ಆಗಿರುತ್ತದೆ."[2] ಆ ಕಾರಣದಿಂದಲೇ ಆ ಕೆಲಸಕ್ಕೆ "ಶಾಂತಭಾವ" ಅಗತ್ಯವಿರುತ್ತದೆ.

**ವಚನ 2.** ತಪ್ಪು ಮಾಡುವವರನ್ನು ತಿದ್ದಿ ಸರಿಮಾಡಬೇಕೆಂದು ಅಪ್ಪಣೆಗಳನ್ನು ಕೊಡುವದರ ಜೊತೆಗೆ, ಪೌಲನು ಈ ಬುದ್ಧಿವಾದ ನೀಡುತ್ತಾನೆ: **ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ.** ಈ ವಚನವು ತನ್ನ ಹಿಂದಿನ ವಚನವನ್ನು ಸ್ವಾಭಾವಿಕವಾಗಿ ಹಿಂಬಾಲಿಸುವದಾಗಿರುತ್ತದೆ. ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಬೇಕೆಂಬ ವಿಚಾರವು ಭಾವನಾತ್ಮಕವಾಗಿ ಶಿಲುಬೆಯ ಮೇಲೆ ಯೇಸುವು ಹೊಂದಿದ ಮರಣಕ್ಕೆ ಸಂಬಂಧ ಪಡುತ್ತದೆ. ಖಂಡಿತವಾಗಿಯೂ, ಇದು ವ್ಯಾಪ್ತಿ, ಅಪಾರತೆ, ಅಥವಾ ಪರಿಣಾಮಗಳ ವಿಷಯದಲ್ಲಿ ನೋಡುವಾಗ ಅದಕ್ಕೆ ಹೋಲಿಕೆಯಾಗಲಾರದು. ಅಂತೂ, ಆತನು ಹೊತ್ತುಕೊಂಡ ಭಾರವು ನಾಶನದಲ್ಲಿದ್ದ ಇಡೀ ಲೋಕದ ಪಾಪವಾಗಿತ್ತು. ಆತನ ಶಿಲುಬೆಯು ಅಕ್ಷರಶಃ ಆಗಿತ್ತು, ಭಯಂಕರವಾಗಿ ಶಾರೀರಿಕ ಮಾತ್ರವಲ್ಲದೆ ಆತ್ಮೀಕ ಸಹ ಆಗಿತ್ತು. ದೇವರ ಪರಿಶುದ್ಧನು ಸ್ವತಃ ಪಾಪದ ನರಾವತಾರವೇ ಆಗಿ ಮಾರ್ಪಡುವ ಅನುಭವವನ್ನು ನಾವು ಊಹಿಸಿಕೊಳ್ಳಲು ಅಶಕ್ತರಾಗಿದ್ದೇವೆ. "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21). ಇದು ಎಲ್ಲಾ ಶಾಸ್ತ್ರಗಳಲ್ಲಿಯೇ ಅತ್ಯಂಥ ಆಶ್ಚರ್ಯಕರವಾದ ಹಾಗೂ ಗ್ರಹಿಸಲಸಾಧ್ಯವಾದ ಹೇಳಿಕೆಗಳೊಳಗೆ ಒಂದಾಗಿದೆ.

ಯೇಸುವಿನ ಸೇವೆಯ ವೇಳೆಯಲ್ಲಿ, ಆತನು ತನ್ನ ಶಿಷ್ಯರಿಗೆ ಹೊತ್ತುಕೊಳ್ಳುವಂತೆ ಕರೆ ನೀಡಲಿದ್ದಂಥ ರೂಪಕೋಕ್ತಿಯ ಶಿಲುಬೆಯ ಕುರಿತು - ಅದು ಅಪಹಾಸ್ಯ, ವೈರತ್ವ ಇವುಗಳನ್ನು ತನ್ನ ಸ್ವಂತ ಕುಟುಂಬದಲ್ಲಿ ಅನುಭವಿಸುವದಿರಬಹುದು, ಹಿಂಸೆ, ಪೀಡನೆ, ಅಥವಾ ಮರಣವನ್ನು ಅನುಭವಿಸುವದಿರಬಹುದು - ಮಾತಾಡುವದಕ್ಕೆ ಸಂಕೋಚ ಪಡಲಿಲ್ಲ. ಯೇಸುವು ಹೀಗೆ ಹೇಳಿದನು, "ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ" (ಮತ್ತಾಯ 10:38). ಕರ್ತನ ಮಾದರಿಯನ್ನು ಅನುಸರಿಸುವದರಿಂದ ಹೊತ್ತುಕೊಳ್ಳಬೇಕಾಗಿರುವ ಭಾರಗಳಿಗೆ ಗಲಾತ್ಯ 6:2 ಇನ್ನೊಂದು ಸೂಚ್ಯಾರ್ಥವಷ್ಟೇ ಆಗಿರುತ್ತದೆ. ಒಬ್ಬ ಕ್ರೈಸ್ತನು ತನ್ನ ಸಹೋದರನನ್ನು ಕುಗ್ಗಿಸುತ್ತಿರುವಂಥ ಆತನ ಭಾರಗಳನ್ನು ತಾನು ಹೊತ್ತುಕೊಳ್ಳುವದಕ್ಕೆ ಸಿದ್ಧನಿರತಕ್ಕದ್ದು. ಗ್ರೀಕ್ ಪದವಾದ βάρος (*baros*) ಎಂಬುದು ಭಾರ ಹಾಗೂ ಹೊರೆಯಾಗಿರುವಂಥದ್ದನ್ನು ಸೂಚಿಸುತ್ತದೆ. Robert L. Johnsonನು ಹೇಳಿದ್ದೇನೆಂದರೆ "ಪೌಲನ ಭಾಷೆಯು ಸಕಲ ವಿಧವಾದ ಭಾರವನ್ನೊಳಗೊಳ್ಳುವಷ್ಟು ವಿಶಾಲವಾಗಿರುತ್ತದೆ. ಯಾವದೇ ಸಂಕಷ್ಟ, ದುಃಖ, ಪಾಪ, ದುರ್ಬಲತೆ, ಅಥವಾ ವೈಯಕ್ತಿಕ ದೌರ್ಬಲ್ಯಗಳು ಇಲ್ಲಿ [ಆತನ] ತಾತ್ಪರ್ಯದಲ್ಲಿರಬಹುದಾಗಿದೆ."[3] ಇಲ್ಲಿ ಬುದ್ಧಿವಾದವು ಪರಸ್ಪರ

ಸಂಬಂದಾರ್ಥಕವಾಗಿದೆಯಾದರೂ ("ಒಬ್ಬರು ಮತ್ತೊಬ್ಬರ"), ಪೌಲನು ಮನಸ್ಸಿನಲ್ಲಿ ದುರ್ಬಲ ಸಹೋದರನು ಎದುರಿಸಿದ ಸಂಕಷ್ಟಗಳನ್ನು ಹೊಂದಿರಬಹುದಾಗಿದೆ.[4] ಯೇಸುವು ನಾಶನದಲ್ಲಿದ್ದ ಲೋಕವನ್ನು ವಿಮೋಚಿಸುವದಕ್ಕಾಗಿ ಮಾನವನಿಂದ ಜಯಿಸಲಾಗದ ಭಾರಗಳನ್ನು ಹೊತ್ತುಕೊಂಡಿದ್ದನಾದ್ದರಿಂದ, ನಾವು ಆತನನ್ನು ಅನುಸರಿಸುವದಕ್ಕೆ ಪ್ರಯತ್ನಿಸಬೇಕು ಮತ್ತು ನಮ್ಮ ಸಹೋದದರಿಗೆ ನಮ್ಮಿಂದ ಸಾಧ್ಯವಾದ ಸಹಾಯವನ್ನು ಮಾಡತಕ್ಕದ್ದು.

"ಕ್ರಿಸ್ತನ ನಿಯಮ" ಎಂಬ ಪದಗುಚ್ಛವು ಬಹಳಷ್ಟು ಚರ್ಚೆಯನ್ನು ಹುಟ್ಟಿಹಾಕಿರುತ್ತದೆ. ಪೌಲನು ಈಗಾಗಲೇ "ಕ್ರಿಸ್ತ ಯೇಸುವಿನವರು ತಮ್ಮ ಶರೀರಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು" (5:24) ಎಂದು ಹೇಳಿದ್ದನು. ಈ ಕಾರಣಕ್ಕಾಗಿ, ಯೇಸುವನ್ನು ನಿಜಕ್ಕೂ ಹಿಂಬಾಲಿಸುವದಕ್ಕೆ ಬಯಸುವವನು ತನ್ನ ಮಾನವ ಅಂತಃಪ್ರೇರಣೆಗಳಿಂದ ನಿಗ್ರಹಿಸಲ್ಪಡುವದಿಲ್ಲ. ಬೇರೊಂದು ಸ್ಥಳದಲ್ಲಿ ಪೌಲನು ಬರೆದದ್ದೇನೆಂದರೆ ಕ್ರೈಸ್ತರು "ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ" (ಕೊಲೊಸ್ಸೆ 3:9, 10). ಈ "ನೂತನಸ್ವಭಾವ"ವೇ ಕಷ್ಟದಲ್ಲಿರುವ ಒಬ್ಬ ಸಹೋದರ ಅಥವಾ ಸಹೋದರನಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ಆಜ್ಞೆ ಮಾಡುವದಾಗಿದೆ.

"ನಿಯಮ" (νόμος, *nomos*) ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವಿಕೆಗಳು ಯಾವಾಗಲೂ ಒಂದೇ ಸೂಚ್ಯಾರ್ಥವನ್ನು ಒಳಗೊಂಡಿರುವದಿಲ್ಲ. ಒಂದು ಸಾಮಾನ್ಯವಾದ ಅರ್ಥವು "ಮೋಶೆಯ ಧರ್ಮಶಾಸ್ತ್ರ" ಎಂಬುದು. ಈ ವಿಷಯದಲ್ಲಿ, "ನಿಯಮ"ವು ಇಬ್ರಿಯ ಬೈಬಲಿನ ಒಂದು ಉಪವಿಭಾಗವಾಗಿ "ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಪುಸ್ತಕಗಳು" (ಲೂಕ 16:16) ಮತ್ತು "ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ" (ಲೂಕ 24:44) ಎಂಬಂತಹ ಪದಗುಚ್ಛಗಳಲ್ಲಿ ಕಾಣಿಸಿಕೊಳ್ಳುತ್ತದೆ. ಈ ಮಾತುಗಳು ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಹಳೆಯ ಒಡಂಬಡಿಕೆಗೆ ಸಂಬಂಧಿಸಿರುತ್ತವೆ.

ಹೇಗೂ, ಸುವಾರ್ತೆಯು ಬಹಳ ವ್ಯತ್ಯಾಸವಾದದ್ದು. ಯೆರೆಮೀಯನು ಮುಂದಾಗಿ ಕಂಡ ಹೊಸ ಒಡಂಬಡಿಕೆಯು ಇದಾಗಿದೆ. ಈ ಒಡಂಬಡಿಕೆಯ ಮೂಲಕ, ದೇವರು ತನ್ನ ನರ ಅಪರಾಧಗಳನ್ನು ಕ್ಷಮಿಸುವೆನೆಂದು ಮತ್ತು ಅವರ ಪಾಪಗಳನ್ನು ಇನ್ನು ನೆನಪಿಟ್ಟುಕೊಳ್ಳುವದಿಲ್ಲ ಎಂದು ಹೇಳಿದನು (ಯೆರೆಮೀಯ 31:34; ಇಬ್ರಿಯ 8:12). ಧರ್ಮಶಾಸ್ತ್ರವು ಕ್ಷಮಾಪಣೆಯನ್ನು ಸಂಪೂರ್ಣವಾಗಿ ಸಾಧಿಸುವದಕ್ಕಾಗಲಿಲ್ಲ ಯಾಕೆಂದರೆ "ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿ[ತ್ತ]ಲ್ಲಾ" (ಇಬ್ರಿಯ 10:4). ಕ್ರಿಸ್ತನ ರಕ್ತವು ಮಾತ್ರವೇ, ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಬಹು ವಿಫುಲವಾಗಿ ಸ್ಪಷ್ಟಗೊಳಿಸಿದ ಪ್ರಕಾರವೇ, ಪಾಪಿ ಜನರನ್ನು ಪರಿಶುದ್ಧಗೊಳಿಸಲು ಶಕ್ತವಾಗಿರುತ್ತದೆ (ನೋಡಿರಿ ಇಬ್ರಿಯ 10:10, 14).

"ಕ್ರಿಸ್ತನ ನಿಯಮ" ಎಂಬುದನ್ನು ಬಹುಶಃ "ಪ್ರೀತಿಯ ನಿಯಮ" (ನೋಡಿರಿ 5:14) ಎಂದು ಅರ್ಥಮಾಡಿಕೊಳ್ಳತಕ್ಕದ್ದು, ಅದು ತನ್ನ ಮಕ್ಕಳಿಗೆ ದೇವರು ಅನುಗ್ರಹಿಸಿರುವ ಸಕಲ ವರಗಳಲ್ಲಿಯೇ ಅತಿ ಶ್ರೇಷ್ಠವಾದದ್ದು (1 ಕೊರಿಂಥ 12:31–13:13). ಯೇಸುವು ತನ್ನ ಸೇವೆಯ ವೇಳೆಯಲ್ಲಿ ಎತ್ತಿ ಹಿಡಿದ ನಿಯಮವು ಇದೇ ಆಗಿರುತ್ತದೆ. ಧರ್ಮಶಾಸ್ತ್ರದಲ್ಲಿ ಅತಿ ದೊಡ್ಡ ಕಟ್ಟಳೆಯು ಯಾವದು ಎಂದು ಪ್ರಶ್ನಿಸಲ್ಪಟ್ಟಾಗ, ಆತನು ಹೀಗೆ ಉತ್ತರಿಸಿದನು,

> . . . ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದಂದರೆ - ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಗ್ರಂಥಕ್ಕೂ ಆಧಾರವಾಗಿವೆ (ಮತ್ತಾಯ 22:37-40; ನೋಡಿರಿ ಯಾಜಕಕಾಂಡ 19:18; ಧರ್ಮೋಪದೇಶಕಾಂಡ 6:5).

ಹೊಸ ಒಡಂಬಡಿಕೆಯು ಪ್ರೀತಿ, ಅದರ ಗುಣಗಳು ಹಾಗೂ ಜೀವಿತದಲ್ಲಿ ಹೇಗೆ ಕಾಣಿಸುತ್ತದೆಂಬ ಕುರಿತಾಗಿ ಬಹಳಷ್ಟು ಬೋಧನೆಯನ್ನೊಳಗೊಂಡಿದೆ; ಆದರೆ ಅದು ಗೊಲ್ಗೊಥಾ ಬೆಟ್ಟದಲ್ಲಿ ಭಯಂಕರವಾದ ಶಿಲುಬೆಯ ಮೇಲೆ ಯೇಸುವು ತನ್ನ ಪ್ರಾಣವನ್ನು ಅರ್ಪಿಸುವದರಲ್ಲಿ ಕಂಡು ಬಂದಷ್ಟು ಸ್ಫುಟವಾಗಿ ಬೇರೆ ಇನ್ನೆಲ್ಲಿಯೂ ಕಂಡು ಬಂದಿರುವದಿಲ್ಲ. ಈ ವಿಮೋಚನಾತ್ಮಕ ಪ್ರೀತಿಯು ಆತನ ಶಿಷ್ಯರ ಜೀವಿತಗಳನ್ನು ರೂಪಾಂತರಗೊಳಿಸತಕ್ಕದ್ದು. ಯೋಹಾನನು ಇದನ್ನು ಈ ವಿಧವಾಗಿ ಹೇಳಿದನು:

> ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ. ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ? (1 ಯೋಹಾನ 3:16, 17).

ಯೋಹಾನನ ಬರಹಗಳು ಪ್ರೀತಿ ಮತ್ತು ಅದು ಸಹೋದರರ ನಡುವೆ ಹೇಗೆ ಕಾಣುತ್ತದೆಂಬುದರ ಕುರಿತು ಹೇಳುವದಕ್ಕೆ ಬಹಳಷ್ಟನ್ನು ಹೊಂದಿರುತ್ತವೆ, ಆದರೆ ಆತನು ಬರೆದ ಬೇರೆ ಯಾವ ವಾಕ್ಯಭಾಗವೂ ಇದರಷ್ಟು ಗಲಾತ್ಯ 6ನೇ ಅಧ್ಯಾಯದಲ್ಲಿರುವ ಪೌಲನ ಸಂದೇಶಕ್ಕೆ ಸಮಾನಾರ್ಥವುಳ್ಳದ್ದಾಗುವದಿಲ್ಲ.

ಮೊದಲ ಕೆಲವು ವಚನಗಳಲ್ಲಿ, ಪಾಪದಲ್ಲಿ ಬಿದ್ದಿರುವ ಸಹೋದರನ ವಿಷಯದಲ್ಲಿ ಒಬ್ಬನು ನಡೆದುಕೊಳ್ಳಬೇಕಾದ ವಿಧದ ಕುರಿತಾಗಿ ತಿಳಿಯಪಡಿಸುತ್ತಾನೆ. ಹೋರಾಡುತ್ತಿರುವ ಕ್ರೈಸ್ತನನ್ನು ಶಾಂತಭಾವದಿಂದ ನಡಿಸಿಕೊಳ್ಳಬೇಕು, ಇದು ಪವಿತ್ರಾತ್ಮನ ಬಲವನ್ನು ಕಾರ್ಯವನ್ನು ತೊಡಗಿಸುವಂತಹ ದೇವರಾತ್ಮನ ಒಂದು ಫಲವಾಗಿರುತ್ತದೆ. ಸಹಾಯ ಮಾಡುವದಕ್ಕೆ ಅಪೇಕ್ಷಿಸುವವರು ತಮ್ಮ ಸ್ವಂತ ಹೃದಯಗಳನ್ನು ಕಾಪಾಡಿಕೊಳ್ಳತಕ್ಕದ್ದು, ಹೀಗೆ ಯಾವ ಪ್ರೀತಿಯಿಲ್ಲದ ಮನೋಭಾವಗಳೂ ಅವರನ್ನು ವಶಪಡಿಸಕೊಳ್ಳುವದಿಲ್ಲ. ಇದನ್ನು ಮಾಡಲು ವಿಫಲರಾಗುವದು ಪಾಪ ಮಾಡಿದಂತೆ ಮತ್ತು ಅವರು ಆತನೊಂದಿಗೆ ಒಟ್ಟಾಗಿ ಕೂಡಿ ಬರುವದರ ಇಡೀ ಉದ್ದೇಶವನ್ನೇ ಭಂಗಪಡಿಸಿದಂತೆ ಆಗುವದು.

**ವಚನ 3.** ಪೌಲನು ಆತ್ಮೀಕ ಗರ್ವವನ್ನು ಹೊಂದಿರಬಾರದೆಂದು ಎಚ್ಚರಿಸುತ್ತಾನೆ. ಪಾಪವನ್ನು ಮಾಡಿರುವ ಸಹೋದರನೊಬ್ಬನಿಗೆ ಸಹಾಯವನ್ನು ಮಾಡುವದಕ್ಕೆ ಪ್ರಯತ್ನಿಸುವವರು ತಾವು ಅವನಿಗಿಂತಲೂ ಶ್ರೇಷ್ಠರೆಂಬ ಅನಿಸಿಕೆಯನ್ನುಂಟು ಮಾಡುವದಕ್ಕೆ ತಮ್ಮ ಅಹಂಭಾವಕ್ಕೆ ಅವಕಾಶವನ್ನು ಕೊಡಕೂಡದು. **ಯಾವನಾದರೂ ಅಲ್ಪನಾಗಿದ್ದು ತಾನು ದೊಡ್ಡವನೆಂದು ಭಾವಿಸಿಕೊಂಡರೆ ತನ್ನನ್ನು ತಾನೇ ಮೋಸಗೊಳಿಸಿದವನಾಗಿದ್ದಾನೆ.** "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23); ಕ್ಷಮಾಪಣೆ

ಹಾಗೂ ರಕ್ಷಣೆಗೋಸ್ಕರವಾಗಿ ಎಲ್ಲರೂ ಯೇಸು ಕ್ರಿಸ್ತನ ಯಜ್ಞದ ಮೇಲೆಯೇ ಅವಲಂಭಿತರಾಗಿರುತ್ತಾರೆ. 3ನೇ ವಚನವು ಒಬ್ಬ ವ್ಯಕ್ತಿಯು ಹೇಗೆ ತನ್ನನ್ನು ಭಾವಿಸಿಕೊಳ್ಳತಕ್ಕದ್ದು ಮತ್ತು ಆತನು ನಿಜವಾಗಿಯೂ ಏನಾಗಿದ್ದಾನೆ ಎಂಬುದರ ನಡುವೆ ಒಂದು ತೀಕ್ಷ್ಣವಾದ ವಿರುದ್ಧ ಹೋಲಿಕೆ ಮಾಡುತ್ತದೆ.[5]

**ವಚನ 4.** "ತನ್ನನ್ನು ತೀರ್ಪು ಮಾಡಿಕೊಳ್ಳುವದಕ್ಕೆ ಬೇರೆಯವರ ತಪ್ಪುಗಳನ್ನು ಒಂದು ಮಾದರಿಯಾಗಿ ಮಾಡಿಕೊಂಡು" ಬಳಕೆ ಮಾಡುವದರ ಬದಲಾಗಿ,[6] **ಪ್ರತಿಯೊಬ್ಬನು ತಾನು ಮಾಡಿದ ಕೆಲಸವನ್ನು ಪರಿಶೋಧಿಸಲಿ.** ಈ ಸನ್ನಿವೇಶದಲ್ಲಿ, δοκιμάζω (*dokimazō*) ಎಂಬ ಗ್ರೀಕ್ ಪದದ ಅರ್ಥವು "ಪರೀಕ್ಷೆಗೊಡ್ಡು" ಅಥವಾ "ಸೂಕ್ಷ್ಮವಾಗಿ ಪರೀಕ್ಷಿಸು" ಎಂದಾಗಿದೆ. ಅಪೊಸ್ತಲನು ಇದೇ ಪದವನ್ನೇ ಬಳಕೆ ಮಾಡುತ್ತಾ ಹೇಳಿದ್ದೇನೆಂದರೆ ಒಬ್ಬ ಮನುಷ್ಯನು ಕರ್ತನ ಭೋಜನದಲ್ಲಿ ತಿನ್ನುವ ಮುಂಚೆ "ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿರಲಿ" (1 ಕೊರಿಂಥ 11:28). ಪೌಲನು "ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ" ಎಂದು ಹೇಳಿದ ಬುದ್ಧಿವಾದದಲ್ಲಿ ಸಹ ಈ ಪದವು ಕಾಣಿಸಿಕೊಳ್ಳುತ್ತದೆ (1 ಕೊರಿಂಥ 13:5). ಒಬ್ಬನು "ತನ್ನ ಕೆಲಸವನ್ನು ಪರಿಶೋಧಿಸ"ತಕ್ಕದ್ದು, ಅಂದರೆ ಆತನ ಕೃತ್ಯಗಳನ್ನು ಮತ್ತು ಸಾಧನೆಗಳನ್ನು ಪರಿಶೋಧಿಸಿಕೊಳ್ಳಬೇಕು. ಪೌಲನು ಹೇಳಿದ್ದೇನೆಂದರೆ, **ಆಗ ಅವನು ತನ್ನ ನಿಮಿತ್ತದಿಂದ ಹೆಚ್ಚಳಪಡುವದಕ್ಕೆ ಆಸ್ಪದವಾಗುವದೇ ಹೊರತು ಮತ್ತೊಬ್ಬರ ನಿಮಿತ್ತದಿಂದಾಗುವದಿಲ್ಲ.** NIVಯು ಹೀಗೆ ಹೇಳುತ್ತದೆ, "ಆಗ ಅವರು ಬೇರೆ ಇನ್ನಾರೊಂದಿಗಾದರೂ ಹೋಲಿಕೆ ಮಾಡಿಕೊಳ್ಳದೆ ತಮ್ಮಲ್ಲಿ ಮಾತ್ರವೇ ಹೆಚ್ಚಳಪಟ್ಟುಕೊಳ್ಳಬಹುದಾಗಿದೆ." NLTಯಲ್ಲಿ ಹೀಗಿರುತ್ತದೆ, "ಆಗ ಅವರು ಉತ್ತಮವಾಗಿ ನಿರ್ವಹಿಸಲ್ಪಟ್ಟ ಕೆಲಸವೊಂದಕ್ಕಾಗಿ ತೃಪ್ತೊಯನ್ನು ಪಡೆದುಕೊಳ್ಳುವರು, ಮತ್ತು ನೀವು ಬೇರೆ ಯಾರೊಂದಿಗೂ ಹೋಲಿಕೆ ಮಾಡಿಕೊಳ್ಳುವ ಅಗತ್ಯವಿರುವದಿಲ್ಲ." ಒಬ್ಬನಿಗೆ ಹೆಚ್ಚಳಪಟ್ಟುಕೊಳ್ಳುವ ಕಾರಣವು ಇರುವದೇ ಆಗಿದ್ದಲ್ಲಿ, ಆತನು ಅದನ್ನು ತನ್ನಷ್ಟಕ್ಕೇ ಇಟ್ಟುಕೊಳ್ಳಬೇಕು (ನೋಡಿರಿ 6:14).

**ವಚನ 5.** ಕ್ರೈಸ್ತರಿಗೆ "ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಬೇಕು" ಎಂದು ಕರೆಯಲಾಗಿದೆಯಾದರೂ (6:2), **ಪ್ರತಿಯೊಬ್ಬನು ಸ್ವಂತ ಹೊರೆಯನ್ನು ಹೊತ್ತುಕೊಳ್ಳಬೇಕು** ಎಂದು ಹೇಳಲಾಗಿರುತ್ತದೆ. ಪೌಲನು ಈ ವಿಭಾಗದಲ್ಲಿ "ಭಾರ" (*baros*) ಮತ್ತು "ಹೊರೆ" (φορτίον, *phortion*) ಎಂಬ ಎರಡು ಬೇರೆ ಬೇರೆ ಪದಗಳನ್ನು ಬಳಸಿದನು. *Baros* ಎಂಬುದು ಅನೇಕ ಸಾರಿ ಪೀಡಿಸುವಂತಹ ಭಾರ ಎಂಬ ವಿಚಾರವನ್ನು ಒತ್ತಿ ಹೇಳುತ್ತದೆ. ಆಂಗ್ಲದ "ಬೊರೊಮೀಟರ" ಎಂಬ ಪದದ ಅಕ್ಷರಶಃ ಅರ್ಥವು "ಒಂದು ಭಾರದ ಅಳತೆ ಎಂದಾಗಿದ್ದು," ಅದು ಒತ್ತಡದ ವಾತಾವರಣವನ್ನು ಅಳತೆ ಮಾಡುವದಕ್ಕೆ ಬಳಸುವ ಒಂದು ಸಾಧನವನ್ನು ಸೂಚಿಸುತ್ತದೆ. ಆಧುನಿಕ ಗ್ರೀಕ್ ಭಾಷೆಯಲ್ಲಿ, *baros* ಎಂಬ ಪದದ ಅರ್ಥದಲ್ಲಿನ ವ್ಯಾಪ್ತಿಯು ಗುರುತ್ವಾಕರ್ಷಣ, ನಿರ್ದಿಷ್ಟ ಗುರುತ್ವಾಕರ್ಷಣ, ಶಾರೀರಿಕ ಭಾರದ ಹೆಚ್ಚಳ, ಕೆಲಸದಿಂದಾದ (ಭಾರವಾದ ಹೊರೆ ಅಥವಾ ದೊಡ್ಡ ಪಾಲು) ಕಷ್ಟ (ಮತ್ತಾಯ 20:12ರಲ್ಲಿರುವ ಪ್ರಕಾರ), ಒಬ್ಬರಿಗೆ ಭಾರವಾಗುವಿಕೆ, ಜವಾಬ್ದಾರಿಯ ಭಾರ, ಮತ್ತು ತೆರಿಗೆ ಒತ್ತಡ ಎಂಬತಹ ಭಾವನೆಗಳನ್ನೊಳಗೊಂಡಂತೆ ಆಧುನಿಕ ಜಗತ್ತಿನ ಅಗತ್ಯತೆಗಳಿಗನುಗುಣವಾಗಿ ವಿಶಾಲಗೊಳಿಸಲ್ಪಟ್ಟಿರುತ್ತದೆ. ಇವುಗಳಲ್ಲಿ ಯಾವ ಅರ್ಥದಲ್ಲಿಯಾದರೂ, ಒಬ್ಬ ಆತ್ಮದ ಮೇಲೆ ಭಾರವನ್ನು ಹಾಕಿ ಚಿಂತೆ ಅಥವಾ ಶ್ರಮವುಂಟಾಗುವಂತೆ ಮಾಡುವ ಸಂಗತಿಗಳನ್ನು ಕಲ್ಪಿಸಿಕೊಳ್ಳುವದು ಕಷ್ಟಕರವಾಗಿರುವದಿಲ್ಲ.

*Phortion* ಎಂಬ ಪದವು ಹೊತ್ತುಕೊಂಡು ಹೋಗಲ್ಪಡುವ ಅಥವಾ ಸಾಗಾಟ ಮಾಡುವ ಸಂಗತಿಯೊಂದನ್ನು ಕುರಿತು ಒತ್ತಿ ಹೇಳುತ್ತದೆ, ಉದಾಹರಣೆಗೆ ಒಂದು ಹಡಗಿನ "ಸರಕು" (ಅಪೊಸ್ತಲರ ಕೃತ್ಯಗಳು 27:10). ಸನ್ನಿವೇಶಕ್ಕನುಗುಣವಾಗಿ, ಈ "ಹೊರೆ"ಯು ಭಾರವಾಗಿರಬಹುದು (ಮತ್ತಾಯ 23:4) ಅಥವಾ ಹಗುರವಾಗಿರಬಹುದು (ಮತ್ತಾಯ 11:30). ಸ್ಪಷ್ಟವಾಗಿ, ಈ ಕೆಲವೊಂದು ಬಳಕೆಗಳಲ್ಲಿ, *phortion* ಎಂಬುದು *baros* ಎಂಬುದಕ್ಕೆ ಸಮಾನಾರ್ಥವುಳ್ಳದ್ದಾಗಿದೆ; ಆದರೆ ಬೇರೆ ಕೆಲವು ಕಡೆಗಳಲ್ಲಿ ಅದು ಆ ರೀತಿಯಾಗಿರುವದಿಲ್ಲ. ಪೌಲನು ಈ ಎರಡು ಬೇರೆ ಬೇರೆ ಪದಗಳನ್ನು ಬಳಸುವ ಮೂಲಕ ಈ ಸನ್ನಿವೇಶದಲ್ಲಿ ಒಂದು ವ್ಯತ್ಯಾಸವನ್ನು ತೋರಿಸುತ್ತಿರುವಂತೆ ಕಾಣಿಸುತ್ತದೆ. ಇದು ನಿಜವೇ ಆಗಿರುವದಾದರೆ, *baros* ಎಂಬುದು ಕುಗ್ಗಿಹೋಗುವಂತೆ (ಒಬ್ಬರೇ ಹೊರುವದಕ್ಕೆ ಅತ್ಯಂಥ ಭಾರವಾಗಿರುವ) ಮಾಡುವ ಜೀವನದ ಸಮಸ್ಯೆಗಳನ್ನು ಪ್ರತಿನಿಧಿಸಿದರೆ, *ಫೊರ್ಟಿಯನ್* ಎಂಬುದು ನಮ್ಮ ವೈಯಕ್ತಿಕ ಜವಾಬ್ದಾರಿಗಳನ್ನು (ನಮ್ಮ ಸಾಮಾನ್ಯ ಕರ್ತವ್ಯಗಳನ್ನು) ಸೂಚಿಸುತ್ತದೆ. *Phortion* ಗ್ರೀಕ್ ಭಾಷೆಯಲ್ಲಿ ಕೆಲವು ಸಾರಿ ಒಬ್ಬ ಮನುಷ್ಯನು ಹೊರುವ ಬೆನ್ನಿನ ಮೇಲಿನ ಹೊರೆಯನ್ನು ಸೂಚಿಸುತ್ತದೆಂಬ ವಾಸ್ತವಾಂಶವು ಈ ಅಭಿಪ್ರಾಯಕ್ಕೆ ಬೆಂಬಲವನ್ನು ಒದಗಿಸುತ್ತದೆ.[7] ಆದದರಿಂದ J. B. Phillipsನು ಗಲಾತ್ಯ 6:5ನೇ ವಚನಕ್ಕೆ ಈ ಭಾವಾನುವಾದವನ್ನು ಒದಗಿಸುತ್ತಾನೆ: "ಯಾಕೆಂದರೆ ಪ್ರತಿಯೊಬ್ಬನು 'ತನ್ನ ಹೊರೆಯನ್ನು ತಾನೇ ಬಾಹುಗಳ ಮೇಲೆ ಹೊತ್ತುಕೊಳ್ಳಬೇಕು.'"

ಈ ಅರ್ಥನಿರೂಪಣೆಯ ವಿಭಿನ್ನತೆಯು ಏನೆಂದರೆ 6:5ನೇ ವಚನವು ಅಂತಿಮ ನ್ಯಾಯತೀರ್ಪನ್ನು ದೃಷ್ಟಿಯಲ್ಲಿ ಹೊಂದಿರುತ್ತದೆ. ಗ್ರೀಕ್ ವಾಕ್ಯದೊಳಗೆ ಕಾಲರೂಪಗಳಲ್ಲಿ ಬದಲಾವಣೆಯಾಗುವದರ ಮೇಲೆ ಈ ತಿಳುವಳಿಕೆಯು ಆಧಾರವಾಗಿರುತ್ತದೆ. ಎರಡೂ ವಚನಗಳಲ್ಲಿ, "ಹೊತ್ತುಕೊಳ್ಳಲಿ" ಎಂಬ ಕ್ರಿಯಾಪದವು βαστάζω (*bastazō*) ಎಂಬುದರಿಂದ ಬಂದಿರುತ್ತದೆ. 2ನೇ ವಚನದಲ್ಲಿ ಆ ಕ್ರಿಯಾಪದದ ("ಹೊತ್ತುಕೊಳ್ಳಲಿ") ವರ್ತಮಾನಕಾಲರೂಪ ಇದ್ದರೆ, 5ನೇ ವಚನದಲ್ಲಿ ಒಂದು ಭವಿಷ್ಯತ್ಕಾಲರೂಪ ("ಹೊತ್ತುಕೊಳ್ಳಬೇಕು") ಇರುತ್ತದೆ. ಜೀವನದಲ್ಲಿನ ಕಷ್ಟಗಳ ಸಂದರ್ಭದಲ್ಲಿ ಕ್ರೈಸ್ತರು ಒಬ್ಬರಿಗೊಬ್ಬರು ಸಹಾಯವನ್ನು ಮಾಡಬೇಕಾದ ಹೊಣೆಯನ್ನು ಹೊಂದಿರುತ್ತಾರೆಂದು ಪೌಲನು ಹೇಳುತ್ತಾ ಬಂದಿರಬಹುದು, ಆದರೆ ಅಂತ್ಯದಲ್ಲಿ ಒಬ್ಬನ ಸ್ವಂತ ಕೃತ್ಯಗಳಿಗೆ ಅವನನ್ನೇ ಜವಾಬ್ದಾರನನ್ನಾಗಿ ಮಾಡಲಾಗುವದು. ಖಂಡಿತವಾಗಿಯೂ, ಈ ವಿಚಾರವು ಹೊಸ ಒಡಂಬಡಿಕೆಯ ಬೋಧನೆಯೊಂದಿಗೆ ಸಾಮಂಜಸ್ಯತೆಯಿಂದ ಇರುತ್ತದೆ. "ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರಕೊಡಬೇಕು" ಎಂಬುದನ್ನು ರೋಮಾ 14:12ನೇ ವಚನವು ಸೂಚಿಸುತ್ತದೆ. ಅಷ್ಟುಮಾತ್ರವಲ್ಲದೆ, 2 ಕೊರಿಂಥ 5:10 ಹೀಗೆ ಹೇಳುತ್ತದೆ, "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು."

**ವಚನನ 6.** 6:1-5ರಲ್ಲಿ, ಪೌಲನು ಪಾಪದೊಳಗೆ ಬಿದ್ದಿರುವ ಒಬ್ಬ ಸಹೋದರನ ಕಡೆಗೆ ಕರುಣೆಯುಳ್ಳ ಹೃದಯವನ್ನು ಹೊಂದಿರಬೇಕೇ, ಹೊರತು ಅಂತಹ ಸಂದರ್ಭವನ್ನು ಬಳಸಿಕೊಂಡು ಸ್ವ-ಏಳಿಗೆ ಮಾಡಿಕೊಳ್ಳಲು, ಪೈಪೋಟಿಗೆ, ಅಥವಾ ಹೆಚ್ಚಳಪಟ್ಟುಕೊಳ್ಳುವದಕ್ಕೆ ಬಳಸಿಕೊಳ್ಳಬಾರದೆಂಬುದರ ಕುರಿತಾಗಿ ಚರ್ಚಿಸುತ್ತಿದ್ದಾನೆ. 6:6-10ರಲ್ಲಿ, ಆತನು ಆತ್ಮನನ್ನನುಸರಿಸಿ ನಡೆಯುವದಕ್ಕೆ ಮತ್ತು ಜೊತೆಯ ಕ್ರೈಸ್ತರ ಬಗ್ಗೆ ಕಾಳಜಿ ಮಾಡುವದಕ್ಕೆ ಏನು

ಅಗತ್ಯವಿರುತ್ತದೆಂಬುದರ ಕುರಿತಾದ ಚರ್ಚೆಯನ್ನು ಮುಂದುವರೆಸುತ್ತಾನೆ. ಹೇಗೂ, ಆತನು ಕಾಳಜಿಯ ಕ್ಷೇತ್ರವನ್ನು ಬದಲಾಯಿಸಿ ದೇವರ ವಾಕ್ಯದ ಸೇವಕರಿಗೆ ಆರ್ಥಿಕ ಸಹಾಯವನ್ನು ಮಾಡುವದರ ಕಡೆಗೆ ತಿರುಗಿಸುತ್ತಾನೆ, ಆತನು ಹೇಳಿದ್ದೇನೆಂದರೆ **ದೇವರ ವಾಕ್ಯದಲ್ಲಿ ಉಪದೇಶಹೊಂದುವವನು ಉಪದೇಶಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ.**

ಪೌಲನು ವಿಶ್ವಾಸಿಗಳನ್ನು ತಮಗೆ ಸುವಾರ್ತೆಯನ್ನು ಬೋಧಿಸಿದವರಿಗೆ "ಪಾಲುಕೊಡಲಿ" ಎಂದು ಪ್ರೋತ್ಸಾಹಗೊಳಿಸುತ್ತಿದ್ದಾನೆ. ವಾಸ್ತವಿಕದಲ್ಲಿ, "ಉಪದೇಶಮಾಡುವವನಿಗೆ" ಎಂಬುದು ಅಸ್ಪಷ್ಟವಾಗಿದೆ. ಸಹಾಯ ಹೊಂದುವ ಬೋಧಕನು ಒಬ್ಬ ಅಪೊಸ್ತಲನಾಗಿರಬೇಕೋ, ಒಬ್ಬ ಪ್ರವಾದಿ, ಒಬ್ಬ ಹಿರಿಯ, ಒಬ್ಬ ಸುವಾರ್ತಿಕನೋ, ಅಥವಾ ಕೇವಲ ಸಭೆಯ ಒಬ್ಬ ಸದಸ್ಯನೋ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಲಿಲ್ಲ. ಅಲ್ಲದೆ ಒಬ್ಬ ಬೋಧಕನು ಪವಿತ್ರಾತ್ಮನ ವರವೊಂದನ್ನು ಹೊಂದಿರಬೇಕು ಅಥವಾ ತನ್ನ ಸ್ವಾಭಾವಿಕ ಪ್ರತಿಭೆಯ ಪ್ರಕಾರ, ಮುಂಚಿತವಾಗಿ ಶಿಕ್ಷಣವಿಲ್ಲದೆ, ಮತ್ತು ಅನುಭವವಿಲ್ಲದೆ ಕಲಿಸುವವನಾಗಿರಬೇಕೋ ಎಂಬುದನ್ನು ಸಹ ತಿಳಿಸಲಿಲ್ಲ. ಅಷ್ಟುಮಾತ್ರವಲ್ಲದೆ, ಈ ಜವಾಬ್ದಾರಿಯನ್ನು ನಿರ್ವಹಿಸುವಂತೆ ಬೋಧಕನು ಸಭೆಯಿಂದ ನೇಮಕಗೊಳಿಸಲ್ಪಟ್ಟವನಾಗಿ ಇರತಕ್ಕದ್ದೆಂಬುದಕ್ಕೆ ಸುಳಿವು ಕೊಡಲಿಲ್ಲ. ಬಹುಶಃ ಈ ಅಸ್ಪಷ್ಟತೆಯು ಉದ್ದೇಶಪೂರ್ವಕವಾಗಿಯೇ ಇರಬಹುದಾಗಿದೆ, ಹೀಗೆ ಈ ತತ್ವದ ಅನ್ವಯಿಕೆಗೆ ವಿಶಾಲತೆಯನ್ನು ಒದಗಿಸಲಾಗಿರುತ್ತದೆ.

ಅಪೊಸ್ತಲರು, ಹಿರಿಯರು, ಮತ್ತು ಸುವಾರ್ತಿಕರಿಗೆ ಹಣಸಹಾಯ ಮಾಡುವದರ ಕುರಿತು ಹೊಸ ಒಡಂಬಡಿಕೆಯೊಳಗೆ ಬೇರೆ ವಾಕ್ಯಭಾಗಗಳಲ್ಲಿ ಆಲೋಚಿಸಲಾಗಿರುತ್ತದೆ. ಯೇಸುವು ಹನ್ನೆರಡು ಮಂದಿ ಶಿಷ್ಯರನ್ನು ಒಂದು ಕ್ಲುಪ್ತಕಾಲ ಸೇವೆ ಮಾಡುವಂತೆ ಆದೇಶಿಸಿ ಕಳುಹಿಸಿದ ವೇಳೆ, ಅವರು ತಮ್ಮ ಊಟ ಹಾಗೂ ವಸತಿಗೋಸ್ಕರ ಅವರನ್ನು ಸೇರಿಸಿಕೊಳ್ಳುವ ಮನೆಯವರ ಮೇಲೆಯೇ ಅವಲಂಭಿತರಾಗಬೇಕಾಗಿತ್ತು. ಕರ್ತನು ವಿವರಿಸಿ ಹೇಳಿದ್ದೇನೆಂದರೆ "ಆಳು ಅಂಬಲಿಗೆ ಯೋಗ್ಯನಷ್ಟೆ" (ಮತ್ತಾಯ 10:10). ಆತನು ಎಪ್ಪತ್ತು ಮಂದಿ ಶಿಷ್ಯರು ಒಂದು ಅಲ್ಪಾವದಿ ಸೇವೆಗೋಸ್ಕರ ಆದೇಶಿಸಿ ಕಳುಹಿಸಲ್ಪಟ್ಟ ವೇಳೆ ಸಹ ಇದೇ ಸಂಗತಿಯನ್ನು ಅವರಿಗೆ ಹೇಳಿದನು: "ಆ ಮನೆಯಲ್ಲಿಯೇ ಇದ್ದುಕೊಂಡು ಅವರು ಕೊಡುವಂಥದನ್ನು ಊಟಮಾಡಿರಿ, ಕುಡಿಯಿರಿ. ಆಳು ತನ್ನ ಕೂಲಿಗೆ ಯೋಗ್ಯನಷ್ಟೆ" (ಲೂಕ 10:7). ಪೌಲನು ಸಾರುವವರು ತಮ್ಮ ಶ್ರೋತೃಗಳಿಂದ ಆರ್ಥಿಕ ಸಹಾಯವನ್ನು ಪಡೆಯತಕ್ಕದ್ದೆಂಬ ಹಕ್ಕನ್ನು ಸಮರ್ಥಿಸುತ್ತಾನೆ, ಆದಾಗ್ಯೂ ಆತನು ಸ್ವತಃ ಆ ಹಕ್ಕನ್ನು ಯಾವಾಗಲೂ ಬಳಸಿಕೊಳ್ಳಲಿಲ್ಲ.[8] ಆತನ ವಾದವು 1 ಕೊರಿಂಥ 9:1-18ರಲ್ಲಿ ಪೂರ್ಣ ಬೆಳವಣಿಗೆಯನ್ನು ಪಡೆದುಕೊಳ್ಳುತ್ತದೆ. ಆ ವಾಕ್ಯಭಾಗದೊಳಗೆ, ಆತನು ಹೀಗೆ ಹೇಳುತ್ತಾನೆ, "ಅದೇ ರೀತಿಯಾಗಿ ಕರ್ತನು ಸಹ ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು" (1 ಕೊರಿಂಥ 9:14). ಅಲ್ಲದೆ ಪೌಲನು 1 ತಿಮೊಥೆ 5:17ರಲ್ಲಿ ಬರೆದದ್ದೇನೆಂದರೆ, "ಚೆನ್ನಾಗಿ ಅಧಿಕಾರ ನಡಿಸುವ ಸಭೆಯ ಹಿರಿಯರನ್ನು, ಅವರೊಳಗೆ ವಿಶೇಷವಾಗಿ ಪ್ರಸಂಗದಲ್ಲಿಯೂ ಉಪದೇಶದಲ್ಲಿಯೂ ಕಷ್ಟಪಡುವವರನ್ನು ಇಮ್ಮಡಿಯಾದ ಮಾನಕ್ಕೆ ಯೋಗ್ಯರೆಂದು ಎಣಿಸಬೇಕು."

ಕ್ರಿಸ್ತನ ಸಂದೇಶವನ್ನು ಕಲಿಯುವವರು ಸಭೆಗೆ ದೇವರ ವಾಕ್ಯವನ್ನು ಕಲಿಸುವವರಿಗೆ ತಮ್ಮ ಸರಕುಗಳಲ್ಲಿ "ಪಾಲುಕೊಡಬೇಕು" (κοινωνέω, *koinōneō*) ಎಂದು ಕರೆಯಲ್ಪಟ್ಟಿರುತ್ತಾರೆ. ಸುವಾರ್ತೆಯಲ್ಲಿ ಈ ವಿಧವಾದ ಪಾಲುಗಾರಿಕೆಯ ಫಲಿತದಿಂದಾಗಿ ಬೇರೆಯವರು ಸುವಾರ್ತೆಯನ್ನು ಕೇಳಿ ಕ್ರಿಸ್ತನನ್ನು ಅರಿತುಕೊಳ್ಳುವಂತಾಗುವದು. ಅಂತಹ ಪಾಲು

ಕೊಡುವಿಕೆಯು ದೇವರ್ನು ಅನುಕರಣೆ ಮಾಡುವಿಕೆಯಾಗಿರುತ್ತದೆ, ಆತನು ನಮ್ಮೊಂದಿಗೆ ತನ್ನ ಪ್ರಿಯನಾದ ಮಗನವನ್ನು ಹಂಚಿಕೊಂಡನು.

**ವಚನ 7.** ಬಿತ್ತುವರು ಮತ್ತು ಕೊಯ್ಯುವದರ ಕುರಿತಾದ ಈ ವಚನಗಳು ವಾಚಕರಿಗೆ ಅವರ ಬೋಧಕರಿಗೆ ಅವರ ಕೆಲಸಕ್ಕೆ ತಕ್ಕ ಸಂಭಾವನೆ ಕೊಡುವಂತೆ ಸ್ಫೂರ್ತಿಗೊಳಿಸುವದಕ್ಕೆ ವಿನ್ಯಾಶಿಸಲ್ಪಟ್ಟಿರುವ ವಾದವೆಂದು ಪರಿಗಣಿಸಲ್ಪಟ್ಟಿರುತ್ತವೆ. ಬಳಿಕ ಪುನಃ, ಈ ವಚನಗಳನ್ನು ಹೆಚ್ಚಾಗಿ ಪ್ರೀತಿಯಿಂದ ಪ್ರೇರಣೆ ಹೊಂದಿ ಮಾಡಲ್ಪಡುವ ಸಕಲ ಭಕ್ತಿಯುಳ್ಳ ನಡವಳಿಕೆಯಿಂದ ಬರುವಂಥ ಆತ್ಮೀಕ ಸಮೃದ್ಧಿಯ ಕುರಿತಾದ ಸಾಮಾನ್ಯ ಹೇಳಿಕೆ ಎಂದು ಅರ್ಥಮಾಡಿಕೊಳ್ಳಬಹುದಾಗಿದೆ. ಅಂತೂ, ಈ ಸನ್ನಿವೇಶದಲ್ಲಿ "ಕ್ರಿಸ್ತನ ನಿಯಮ"ವು ನಿಜವಾಗಿಯೂ ಅದರ ಬಗ್ಗೆಯೇ ಆಗಿರುತ್ತದಷ್ಟೆ.

ಪೌಲನು **ಮೋಸಹೋಗಬೇಡಿರಿ** ಎಂದು ಎಚ್ಚರಿಕೆ ನೀಡುವದು ಶಾಸ್ತ್ರಗಳಲ್ಲಿ ಸರ್ವಸಾಮಾನ್ಯವಾಗಿರುತ್ತದೆ.[9] ವಂಚನೆಯು ಏದೆನ್ ತೋಟದಷ್ಟು ಪುರಾತನ ಕಾಲಕ್ಕೆ ವಿಸ್ತರಿಸುವದಾಗಿದೆ, ಅಲ್ಲಿ ಹವ್ವಳು ಸರ್ಪದಿಂದ ವಂಚನೆಗೊಳಗಾಗಿ ತನ್ನ ದೃಷ್ಟಿಯನ್ನು ಭೂಲೋಕದ ಅಂದ, ಶರೀರದಾಶೆ, ಮತ್ತು ಸ್ವಾರ್ಥ ಗರ್ವದ ಕಡೆಗೆ ತಿರುಗಿಸಿದ್ದಳು. ಆಕೆ ಮತ್ತು ಆದಾಮನು ದೇವರ ಆಜ್ಞೆಗೆ ಅವಿಧೇಯರಾದರು ಮತ್ತು ಕಠೋರವಾದ ಪರಿಣಾಮಗಳನ್ನು ಅನುಭವಿಸಿದರು. ಅವರು ದೇವರಿಂದ ಅಗಲಿಸಲ್ಪಟ್ಟರು, ಪರದೈಸದ ತೋಟದಿಂದ ಹೊರಗೆ ಹಾಕಲ್ಪಟ್ಟರು, ಮತ್ತು ಅಂತಿಮವಾಗಿ ಮರಣ ಹೊಂದಿದರು (ಆದಿಕಾಂಡ 3:1–24; 5:5).

**ದೇವರು ತಿರಸ್ಕಾರ ಸಹಿಸುವವನಲ್ಲ.** ಯಾವನೂ ಸಹ ನಿರ್ಭೀತಿಯಿಂದ ಪಾಪ ಮಾಡುವದಕ್ಕಾಗಲಿ ಅಥವಾ ದೇವರನ್ನು ಧಿಕ್ಕರಿಸಿ ದಂಡನೆಯನ್ನು ಅನುಭವಿಸದೆ ಹೋಗುವದಕ್ಕಾಗಲಿ ಸಾಧ್ಯವಿಲ್ಲ. "ತಿರಸ್ಕಾರ" ಎಂಬುದಕ್ಕಿರುವ ಗ್ರೀಕ್ ಪದದ (μυκτηρίζω, *muktērizō*) ಅಕ್ಷರಶಃ ಅರ್ಥವು "ಒಬ್ಬನನ್ನು ನೋಡಿ ಮೂಗು ಮುರಿಯುವದು"[10] ಎಂದಾಗಿದೆ. ಲೂಕ 23:35ರಲ್ಲಿ ಇದಕ್ಕೆ ಸಂಬಂಧಿಸಿದ ಒಂದು ಪದವು ಕಾಣಿಸಿಕೊಳ್ಳುತ್ತದೆ, ಅಲ್ಲಿ ಯೆಹೂದಿ ನಾಯಕರು ಶಿಲುಬೆಯ ಮೇಲೆ ನೇತಾಡುತ್ತಿರುವ ಯೇಸುವನ್ನು ನೋಡಿ "ಹಾಸ್ಯಮಾಡಿ[ದರು]." Ben Witherington IIIನು ಯೋಚಿಸಿದ್ದೇನೆಂದರೆ ಒಬ್ಬನನ್ನು ನೋಡಿ ಮೂಗು ಮುರಿಯುವದೆಂದರೆ ಆತನನ್ನು "ಅವಮಾನಪಡಿಸುವಿಕೆ" ಆಗಿರುತ್ತದೆ ಮತ್ತು ಆತನನ್ನು "ಒಬ್ಬ ದುರ್ಬಲನಾದವನೆಂದು, ತನ್ನ ಘನತೆಗಿಂತ ಕೆಳಮಟ್ಟದವನೆಂದು, ಮತ್ತು ಒಬ್ಬನ ಗೌರವನ್ನು ಹೊಂದಲು ಅಯೋಗ್ಯನು ಎಂದು ನಡೆದುಕೊಂಡಂತೆ ಆಗಿದೆ."[11]

**ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು** ಎಂಬುದು ಶಾರೀರಿಕ ಲೋಕಕ್ಕೆ ಸಂಬಂಧಿಸಿದ ತತ್ವವಾಗಿದ್ದು ಅದು ಆತ್ಮೀಕ ಮಂಡಲದಲ್ಲಿ ಸಹ ಸತ್ಯವಾಗಿರುತ್ತದೆ. ಸೃಷ್ಟಿಯ ಮೂರನೆಯ ದಿನದಲ್ಲಿ, ದೇವರು "*ತಮ್ಮತಮ್ಮ ಜಾತಿಯ ಪ್ರಕಾರ* ಬೀಜಬಿಡುವ ಕಾಯಿಪಲ್ಯದ ಗಿಡಗಳ"ನ್ನು ಉಂಟು ಮಾಡಿದನು (ಆದಿಕಾಂಡ 1:12; ಒತ್ತಿ ಹೇಳಿದ್ದು ನನ್ನದು). ಒಂದು ನಿರ್ದಿಷ್ಟ ಜಾತಿಯ ಬೀಜವು ಬಿತ್ತಲ್ಪಡುವಾಗ. ಅದೇ ಜಾತಿಯ ಬೆಳೆಯನ್ನು ಕೊಯ್ಯುವದು ಅನಿವಾರ್ಯವಾಗಿರುತ್ತದೆ (ನೋಡಿರಿ ಯೋಬ 4:8; ಜ್ಞಾನೋಕ್ತಿ 22:8).

ಪೌಲನ ಕಾಲದಲ್ಲಿ ಪ್ರಧಾನವಾಗಿದ್ದ ಕೃಷಿಯಾಧಾರಿತ ಆರ್ಥಿಕತೆಯಲ್ಲಿ, ಬಿತ್ತುವ ಮತ್ತು ಕೊಯ್ಯುವ ರೂಪಕೋಕ್ತಿಗಳು ಚೆನ್ನಾಗಿ ಅರ್ಥಮಾಡಿಕೊಳ್ಳಲಾಗುತ್ತಿತ್ತು. ಅಲ್ಲದೆ, ಪತ್ರಿಕೆಯಲ್ಲಿ ಈ ಅಂಶದ ಮೂಲಕವಾಗಿ, ಪೌಲನ ವಾಚಕರು ಈ ರೂಪಕೋಕ್ತಿಗಳನ್ನು ಅದರ ನಿಜವಾದ ಅರ್ಥಕ್ಕೆ ವರ್ಗಾಯಿಸುವದಕ್ಕೆ ಸಾಕಾಗುವಷ್ಟರ ಮಟ್ಟಿಗೆ ಕೇಳಿಸಿಕೊಂಡಿರಬಹುದಾಗಿದೆ. ಖಂಡಿತವಾಗಿಯೂ, ಕೃಷಿಯ ಹೊರತಾಗಿಯೂ ಬೇರೆ ಕೆಲವು ವೃತ್ತಿಗಳು ಅಸ್ತಿತ್ವದಲ್ಲಿದ್ದವು.

ಕ್ರೈಸ್ತರು ಮತ್ತು ಸಮುದಾಯದಲ್ಲಿನ ಜನರು ವರ್ತಕರಾಗಿ, ಬಡಗಿಯರಾಗಿ, ದರ್ಜಿಗಳಾಗಿ, ಬ್ಯಾಂಕರುಗಳಾಗಿ, ನ್ಯಾಯದೀಶರಾಗಿ, ರಾಜಕಾರಣಿಗಳಾಗಿ, ಶಿಕ್ಷಕರಾಗಿ, ಮನೆ ಕಟ್ಟುವವರಾಗಿ, ಮತ್ತು ಇನ್ನಿತರ ಉದ್ಯೋಗಗಳನ್ನು ಮಾಡುವವರಾಗಿ ದುಡಿಯುತ್ತಿದ್ದರು. ಅಷ್ಟಿದ್ದರೂ, ಗಲಾತ್ಯದಂತಹ ಪ್ರಾಂತ್ಯದ ಪಟ್ಟಣಗಳಲ್ಲಿ, ಬಹುಶಃ ಪೌಲನ ತಾತ್ಪರ್ಯವೇನೆಂಬುದನ್ನು ಅರ್ಥಮಾಡಿಕೊಳ್ಳದಷ್ಟರ ಮಟ್ಟಿಗೆ ಕೃಷಿಯ ಉತ್ಪನ್ನದ ಕುರಿತು ಅಜ್ಞಾನಿಗಳು ಒಬ್ಬನೂ ಇರಲಿಲ್ಲ.

ಈ ತತ್ವಕ್ಕೆ ವಿಶಾಲವಾದ ಅನ್ವಯಿಕೆ ಇರುತ್ತದಾದರೂ, ಪೌಲನು ಈಗಲೂ ಸುವಾರ್ತೆಯನ್ನು ಸಾರುವವರಿಗೆ ಪಾಲುಕೊಡುವದರ ಅವಶ್ಯಕತೆಯ ಕುರಿತು ಮಾತಾಡುತ್ತಿರಬಹುದಾಗಿದೆ (6:6). 2 ಕೊರಿಂಥ 9:6ರಲ್ಲಿ, ಆತನು ದಾರಾಳವಾಗಿ ಕೊಡಬೇಕೆಂದು ಪ್ರೋತ್ಸಾಹಿಸುವದಕ್ಕಾಗಿ ಬಿತ್ತುವ ಮತ್ತು ಕೊಯ್ಯುವ ಚಿತ್ರಣವನ್ನು ಬಳಸುತ್ತಾನೆ: “ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು ಎಂದು ತಿಳುಕೊಳ್ಳಿರಿ.” ಈ ಸನ್ನಿವೇಶದಲ್ಲಿ ಬೀಜದ ಮೊತ್ತದ ಮೇಲೆ ಒತ್ತು ಕೊಡಲಾಗಿರುತ್ತದೆ, ಆದರೆ ಗಲಾತ್ಯ 6:7ರಲ್ಲಿ ಯಾವ ಜಾತಿಯ ಬೀಜ ಎಂಬುದರ ಮೇಲೆ ಒತ್ತು ಕೊಡಲಾಗಿತ್ತು (ನೋಡಿರಿ ಮತ್ತಾಯ 13:24-30).

**ವಚನ 8.** 8ನೇ ವಚನದಲ್ಲಿ ಭಾಷೆಯಲ್ಲೊಂದು ಬದಲಾವಣೆ ಸಂಭವಿಸುತ್ತದೆ, ಬೀಜದ ವಿಧದ ಬದಲಾಗಿ ಹೊಲದ ವಿಧದ ಮೇಲೆ ಒತ್ತು ಕೊಡಲಾಗುತ್ತದೆ. ಬಿತ್ತುವವನಿಗೆ “ಎರಡು ಸಂಪೂರ್ಣ ಬೇರೆ ಬೇರೆಯಾದ ಹೊಲಗಳಲ್ಲಿ ಬೀಜವನ್ನು ಬಿತ್ತುವ, ಮತ್ತು ಆ ಹೊಲಗಳ ಸ್ವಭಾವಕ್ಕನುಗುಣವಾಗಿಯೇ ಆ ಎರಡು ಬೇರೆ ಬೇರೆ ಹೊಲಗಳಿಂದ ಒಂದು ಬೆಳೆಯನ್ನು ಕೊಯ್ಯುವ”[12] ಆಯ್ಕೆಯು ಕೊಡಲ್ಪಡುತ್ತದೆ. ಮೊದಲನೆಯ ಆಯ್ಕೆಯು ನಕಾರಾತ್ಮಕವಾದದ್ದು: **ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು.** ಚರ್ಚೆಯಲ್ಲಿರುವ ಹೊಲವು “ತನ್ನ ಶರೀರಭಾವ” ಆಗಿರುತ್ತದೆ. ಪೌಲನು ತನ್ನ ವಾಚಕರಿಗೆ ತಮ್ಮ ಜೀವಿತಗಳನ್ನು ಆಲೋಚಿಸಿಕೊಳ್ಳುವಂತೆ ಮತ್ತು ತಾವು “ಶರೀರಭಾವದ ಕರ್ಮಗಳ” (5:19-21) ಅನುಗುಣವಾಗಿ ಜೀವಿಸುತ್ತಿಲ್ಲವೆಂಬುದನ್ನು ಖಾತ್ರಿಪಡಿಸಿಕೊಳ್ಳಬೇಕೆಂದು ಕರೆ ನೀಡುತ್ತಾನೆ. ಒಬ್ಬನು ತನ್ನನ್ನು ಲೌಕಿಕ, ಪ್ರಾಪಂಚಿಕ, ಸ್ವ-ಚಿತ್ತದಂತೆ ಜೀವಿಸುವದಕ್ಕೆ ಒಪ್ಪಿಸಿಕೊಳ್ಳುವದು ಆತ್ಮೀಕವಾಗಿ ಸತ್ತಿರುವದಕ್ಕೆ ಸಮಾನವಾಗಿದೆ. ಆ ವಿಧದಲ್ಲಿ ಜೀವಿಸುವವರು “ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ” ಎಂದು ಈಗಾಗಲೇ ಹೇಳಿದ್ದನು (ಗಲಾತ್ಯ 5:21). ಆತನು ಇಲ್ಲಿ “ಅವರು ನಾಶನವನ್ನು ಕೊಯ್ಯುವರು” ಎಂದು ಹೇಳುತ್ತಾನೆ. ಇದು ನರಕದಲ್ಲಿ ನಿತ್ಯವಾದ ದಂಡನೆಯನ್ನು ಅನುಭವಿಸುವದನ್ನು ಸೂಚಿಸುವ ಇನ್ನೊಂದು ರೀತಿಯಾಗಿದೆ.

ಎರಡನೆಯ ಆಯ್ಕೆಯು ಸಕಾರಾತ್ಮಕವಾಗಿದೆ: **ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು.** ಈ ಪ್ರಕರಣದಲ್ಲಿ, ಹೊಲವು “ಆತ್ಮನು.” ಆತ್ಮನಿಂದ ನಡಿಸಿಕೊಳ್ಳುವ ವ್ಯಕ್ತಿಯು (5:16, 25), ತನ್ನ ಜೀವಿತದಲ್ಲಿ “ದೇವರಾತ್ಮನಿಂದ ಉಂಟಾಗುವ ಫಲ”ವನ್ನು ಹೊಂದಿದವನಾಗಿ (5:22, 23), ಪರಲೋಕದಲ್ಲಿ ಆತನು ದೇವರೊಂದಿಗೆ ನಿತ್ಯಜೀವವನ್ನು ಪಡೆದುಕೊಳ್ಳುವನು.

ಪೌಲನು “ಶರೀರಭಾವ” ಮತ್ತು “ಪವಿತ್ರಾತ್ಮನನ್ನುಸರಿಸುವಿಕೆ”ಗಳ ಮತ್ತು ಅವುಗಳ ಫಲಿತಾಂಶಗಳನ್ನು ರೋಮಾ 8:5-7ರಲ್ಲಿ ವಿರುದ್ಧ ಹೋಲಿಕೆಯನ್ನು ಸಹ ಮಾಡಿದನು:

> ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಭಾವದವುಗಳ ಮೇಲೆ ಮನಸ್ಸಿಡುವದು *ಮರಣ*;

> ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು *ಜೀವವೂ ಮನಶ್ಶಾಂತಿಯೂ* ಆಗಿದೆ. ಯಾಕಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ (ಒತ್ತಿ ಹೇಳಿದ್ದು ನನ್ನದು).

ಈ ವಾಕ್ಯಭಾಗವು ಗಲಾತ್ಯದಲ್ಲಿನ ಸಹೋದದರಿಗೆ ಈ ವಿಷಯದ ಕುರಿತು ಪೌಲನು ಏನು ಹೇಳಿದನೆಂಬುದನ್ನು ನಮಗೆ ಸ್ಫುಟವಾಗಿ ನೆನಪಿಸುತ್ತದೆ. ಆತನು ಶರೀರಭಾವದ ಮನಸ್ಸಿನ ಅವಿಧೇಯತೆಯ ಮನೋಭಾವದ ಕುರಿತು ನಿಖರವಾಗಿ ಇದನ್ನೇ ಹೇಳಿದನು:

> ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ. ಯಾಕಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ. ಆದರೆ ನೀವು ಆತ್ಮನಿಂದ ನಡಿಸಿಕೊಳ್ಳುವವರಾದರೆ ನೇಮನಿಷ್ಠೆಗಳಿಗೆ ಅಧೀನರಲ್ಲ (5:16-18).

ಎರಡು ಸನ್ನಿವೇಶಗಲ್ಲಿರುವ ಸಾಮ್ಯತೆಗಳು ಮನಃಸೆಳೆಯುವಂಥವುಗಳಾಗಿವೆ. ಎರಡೂ ವಾಕ್ಯಭಾಗಗಳು ಚರ್ಚೆಯಲ್ಲಿರುವ ವಿವಿಧ "ಕಟ್ಟಳೆಗಳಿಗೆ" ಅವಿಧೇಯತೆಯುಳ್ಳ ಮನಸ್ಸು ಹೇಗೆ ಪ್ರತಿಕ್ರಿಯಿಸುತ್ತದೆಂಬುದನ್ನು ಬಣ್ಣಿಸುತ್ತವೆ. ಅದು ತನ್ನ ಲೌಕಿಕ, ಪ್ರಾಪಂಚಿಕ ಬಯಕೆಗಳಲ್ಲಿ ಹಸ್ತಕ್ಷೇಪ ಮಾಡುವ ಯಾವದನ್ನೇ ಆಗಲಿ ತಿರಸ್ಕರಿಸುವದಾಗಿದೆ. ಶರೀರಭಾವದ ಮನಸ್ಸು ಮೂಲಭೂತವಾಗಿ ಧರ್ಮಶಾಸ್ತ್ರವಿರೋಧಿ, ಸ್ವಚಿತ್ತದಂತೆ ನಡೆಯುವ ಮನಃಸ್ಥಿತಿಯುಳ್ಳದ್ದು ಆಗಿದೆ. ಅಉ ದೇವರ ಕಡೆಗೆ ಹಗೆತನವುಳ್ಳದ್ದು ಮತ್ತು ಆತನ ಧರ್ಮಶಾಸ್ತ್ರಕ್ಕೆ ಅಧೀನವಾಗದ್ದು ಆಗಿರುತ್ತದೆ. ಈ ಮನಃಸ್ಥಿತಿಯು ತನ್ನ ಸ್ವಂಥ ಮೊಂಡುತನದ ಮತ್ತು ಉಬ್ಬಿಕೊಂಡಿರುವ *ಸ್ವಾರ್ಥಕ್ಕೆ* ಅಡ್ಡ ಬರುವ ಯಾವುದನ್ನೇ ಆಗಲಿ ತಿರಸ್ಕರಿಸುತ್ತದೆ! ಆ ವ್ಯಕ್ತಿಯು ಯಾವಾಗಲೂ ಹಿತವೆನಿಸದವನು, ಕಿರಿಕಿಯುಂಟು ಮಾಡುವವನು, ಅಥವಾ ಬೇಸರ ಹುಟ್ಟಿಸುವವನಾಗಿರುತ್ತಾನೆಂದು ಇದರರ್ಥವಲ್ಲ. ಈತನು ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಲು ತನ್ನನ್ನು ಉತ್ತೇಜಿಸಿಕೊಳ್ಳಬಹುದು ಅಥವಾ ಒಂದು ವೃತ್ತಿಯ, ಸಾಮಾಜಿಕ, ರಾಜಕೀಯ, ಅಥವಾ ಆರ್ಥಿಕ ಗುರಿಯಂತಹ ಸ್ವಾರ್ಥ ಆಕಾಂಕ್ಷೆಯನ್ನು ನೆರವೇರಿಸಿಕೊಳ್ಳಲು ಬಲಿಷ್ಠ ಜನರ ಕಟಾಕ್ಷವನ್ನು ಗೆದ್ದುಕೊಳ್ಳಲು ಪ್ರಯತ್ನಿಸಬಹುದಾಗಿದೆ. ಆತನ ವಿಧಾನಗಳು ಅನೇಕ ವಿಧವಾಗಿರಬಹುದು, ಆದರೆ ಆತನ ಲಕ್ಷ್ಯವು ಯಾವಾಗಲೂ ಸ್ವಾರ್ಥಪರ ಮತ್ತು "ಶರೀರಭಾವ" (ಅಂದರೆ, ಈ ಲೋಕಕ್ಕೆ ಸಂಬಂಧಿಸಿದ್ದು) ಆಗಿರುತ್ತದೆ.

**ವಚನ 9. ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ** (μὴ ἐγκακῶμεν, *mē enkakōmen*) ಎಂಬುದು ಉತ್ತಮಪುರುಷ ಬಹವನಚದಲ್ಲಿದೆ, ಇದು ಆತನ ಶ್ರೋತೃಗಳ ಜೊತೆಯಲ್ಲಿ ಲೇಖಕನನ್ನು (ಅಥವಾ ಮಾತಾಡುತ್ತಿರುವವನನ್ನು) ಒಳಗೊಂಡಿರುವ ಒಂದು ರೂಪವಾಗಿದೆ. ಈ ಬುದ್ಧಿವಾದದ ಮಾತುಗಳಲ್ಲಿ ಪೌಲನು ಗಲಾತ್ಯದವರೊಂದಿಗೆ ತನ್ನನ್ನು ಸೇರ್ಪಡೆಗೊಳಿಸಿಕೊಳ್ಳುತ್ತಾನೆ. "ಬೇಸರಗೊಳ್ಳು" ಎಂಬುದು ἐγκακέω (*enkakeō*) ಎಂಬ ಶಬ್ದಾಕೋಶಾತ್ಮಕ ರೂಪದ ಪದದಿಂದ ಬಂದಿರುತ್ತದೆ. ಅದನ್ನು "ಅಸಹನೆಗೊಳ್ಳು" (NRSV) ಅಥವಾ "ಆಯಾಸಗೊಳ್ಳು" (NLT) ಎಂದು ಸಹ ಅನುವಾದಿಸಬಹುದು. ಇಲ್ಲಿ ವಿಚಾರವು "ಒಬ್ಬನ ಉತ್ಸಾಹವನ್ನು ಕಳಕೊಳ್ಳುವದು," "ನಿರಾಶೆಗೊಳ್ಳುವದು"[13] ಎಂದಾಗಿದೆ.

**ಒಳ್ಳೇದನ್ನು ಮಾಡುವದರಲ್ಲಿ** ಎಂಬ ಪದಗುಚ್ಛವು ಆರಂಭದಲ್ಲಿ ಎಷ್ಟೊಂದು ಜೈವಿಕವಾಗಿ ಕಾಣಿಸುತ್ತದೆಂದರೆ ಅದು ಹೆಚ್ಚುಕಡಿಮೆ ಯಾವುದಕ್ಕಾದರೂ ಅನ್ವಯಿಸಲ್ಪಡಬಲ್ಲದು. ಹೇಗೂ, ಈ ಸನ್ನಿವೇಶದಲ್ಲಿ, ಮುಖ್ಯವಾದ ಗಮನವು ಈಗಲೂ ಪವಿತ್ರಾತ್ಮನನ್ನುಸರಿಸಿ ನಡೆಯುವದರ ಮೇಲೆಯೇ ಇರುತ್ತದೆ (5:16, 18, 25; 6:8). ಪೌಲನು ಮನಸ್ಸಿನಲ್ಲಿ ಬೇರೆ ಯಾವದನ್ನಾದರೂ ಹೆಚ್ಚು ನಿರ್ದಿಷ್ಟವಾಗಿ ಹೊಂದಿದ್ದಲ್ಲಿ, ಅದು ಸಹ ತಕ್ಷಣದಲ್ಲಿರುವ ಸನ್ನಿವೇಶದಿಂದ ಬರುವದಾಗಿದೆ: ದೋಷದಲ್ಲಿ ಸಿಕ್ಕಿದವನನ್ನು ತಿದ್ದಿ ಸರಿಮಾಡುವದು (6:1), ಒಬ್ಬ ಭಾರವನ್ನು ಮತ್ತೊಬ್ಬರು ಹೊತ್ತುಕೊಳ್ಳುವದು (6:2), ಒಬ್ಬನು ತನ್ನ ಹೊರೆಯನ್ನು ಹೊತ್ತುಕೊಳ್ಳುವದು (6:5), ಮತ್ತು ವಾಕ್ಯವನ್ನು ಕಲಿಸುವವರಿಗೆ ಆರ್ಥಿಕವಾಗಿ ಸಹಾಯವನ್ನು ಮಾಡುವದು (6:6).

ಈ ಕೃಷಿಯಾಧಾರಿತ ಚಿತ್ರಣವನ್ನು ಮುಂದುವರೆಸುತ್ತಾ, ಪೌಲನು ಈ ಸ್ಫೂರ್ತಿಯನ್ನು ನೀಡುತ್ತಾನೆ: **ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು.** ಆತ್ಮೀಕ ಮನಸ್ಸಿನವರಾಗಿರುವದನ್ನು ಒಂದು ಜಗತ್ತಿನ ವ್ಯವಹಾರಕ್ಕೆ ದೂರವಾದ ರೀತಿಯಲ್ಲಿ, ಒಬ್ಬನು "ನಿಜವಾದ ಲೋಕ"ದಲ್ಲಿ ಏನೇ ಎದುರ್ಗೊಂಡರೂ ಸರಿಯೇ ವಿಚಲಿತವಾಗದೆ ಉಳಿಯುವಂಥ ಮೃದುವಾದ, ಸಮಾಧಾನದ ವರ್ತನೆಯುಳ್ಳವನಾಗಿ ಇರುವದು ಕ್ರೈಸ್ತನಿಗೆ ಸೀಮಿತವಾಗಿರುತ್ತದೋ ಎಂಬಂದತೆ ದೃಷ್ಟಿಸುವವರಾಗುವಂತಹ ಸ್ವಲ್ಪ ಮಟ್ಟಿನ ಅಪಾಯವಿರುತ್ತದೆ. ಹೇಗೂ, ಯಾವಾಗಲೂ ಪವಿತ್ರಾತ್ಮನ ಪ್ರೇರಣೆಯನ್ನು ಅನುಸರಿಸಿ ಕರ್ತನ ಚಿತ್ತವನ್ನು ಮಾಡುವದಕ್ಕೆ ಪರಿಶ್ರಮ ಪಡುವದು ಕಷ್ಟಕರ ಹಾಗೂ ದಣಿವುಂಟು ಮಾಡುವಂತದ್ದೆಂದು ಪೌಲನಿಗೆ ಗೊತ್ತಿದ್ದಷ್ಟು ಉತ್ತಮವಾಗಿ ಬೇರೆ ಇನ್ನಾರಿಗೂ ತಿಳಿದಿರಲಿಲ್ಲ. ಹಾಗಿದ್ದರೂ, ಪ್ರಯಾಸವು ಪ್ರತಿಫಲ ಉಂಟುಮಾಡುವಂಥದ್ದೆಂದು ಆತನು ನಂಬಿದ್ದನು: "ಕಷ್ಟಮಾಡಿದ" ರೈತನ ಹಾಗೆ (2 ತಿಮೊಥೆ 2:6), ಒಬ್ಬ ಕ್ರೈಸ್ತನು "ಬೇಸರಗೊಳ್ಳದೆ" (ἐκλύω, *ekluō*) - ಅಂದರೆ, "ನಿರಾಶೆಗೊಳ್ಳದೆ" (NKJV) ಅಥವಾ "ಬಿಟ್ಟುಬಿಡದೆ" (NIV) - ಇರುವದಾದಲ್ಲಿ ಅಂತಿಮವಾಗಿ ಒಂದು ಸಮೃದ್ಧವಾದ ಬೆಳೆಯನ್ನು "ಕೊಯ್ಯುವನು."

**ವಚನ 10.** ಪೌಲನು ಕ್ರೈಸ್ತ ನಡೆಯ ಕುರಿತಾದ ಈ ಪ್ರಧಾನ ವಿಭಾಗವನ್ನು (5:2-6:10), ಮಾತ್ರವಲ್ಲದೆ ಒಬ್ಬರ ಭಾರವನ್ನು ಮತ್ತೊಬ್ಬರು ಹೊರುವ ಕುರಿತಾದ ಚಿಕ್ಕದಾದ ಭಾಗವನ್ನು (6:1-10), ಒಂದು ಅಮೋಘವಾದ ಆದೇಶದೊಂದಿಗೆ ಮುಕ್ತಾಯಗೊಳಿಸುತ್ತಾನೆ. ಆತನು ಹೀಗೆ ಆರಂಭಿಸಿದನು, **ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ . . .** "ಸಮಯವಿರಲಾಗಿ" ಎಂಬುದಕ್ಕಿರುವ ಗ್ರೀಕ್ ಪದ καιρός (*kairos*) ಎಂಬುದು, 6:9ರಲ್ಲಿ "[ತಕ್ಕ] ಸಮಯ" ಎಂಬುದನ್ನು ಅನುವಾದಿಸಿರುವ ಅದೇ ಪದವಾಗಿದೆ. ಆ ವಚನದಲ್ಲಿ, ಈ ಪದವು ಕ್ರಿಸ್ತನು ಹಿಂದಿರುಗುವ ಬರುವ ವೇಳೆಯಲ್ಲಿನ ನಿತ್ಯವಾದ ಬೆಳೆಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಅದು ಆ ಪರಾಕಾಷ್ಠೆಯ ಘಟನೆಗೆ ನಡಿಸುವಂತಹ ದೇವರಿಂದ ಅನುಗ್ರಹಿಸಲ್ಪಟ್ಟಿರುವ ಕ್ಷಣಗಳಾಗಿವೆ.

ಪೌಲನು ತನ್ನ ಸಹೋದದರರಿಗೆ ಈ ಲೋಕದ ಜೀವನದ ಸಂಕ್ಷಿಪ್ತಕಾಲದ ಬಗ್ಗೆ ಮತ್ತು ಪ್ರತಿಯೊಂದು ಅಮೂಲ್ಯವಾದ ಕ್ಷಣದಲ್ಲಿ ಅಡಕವಾಗಿರುವ ಎಲ್ಲಾ ಸಂಭಾವ್ಯತೆಗಳ ಕುರಿತು ಜ್ಞಾಪಕಗೊಳಿಸಿದನು. ನಾವು ಕರ್ತನ ಸೇವೆಯನ್ನು ಮಾಡಿ ಆತನ ನಾಮಕ್ಕಾಗಿ ಫಲವನ್ನು ಕೊಡುವವರಾಗಬೇಕೆಂದು ನಮಗೆ ಸಮಯವು ಒದಗಿಸಲ್ಪಟ್ಟಿದೆ. ಸಮಯವನ್ನು ವ್ಯರ್ಥಮಾಡಿಕೊಳ್ಳುವದು ಭಯಂಕರ ಸಂಗತಿಯಾಗಿದೆ. ಸಮಯ ನಿರ್ವಹಣೆಯ ವಿಷಯವಾಗಿ, ಅಪೊಸ್ತಲನು ಎಫೆಸ 5:15, 16ರಲ್ಲಿ ಹೀಗೆ ಬರೆಯುತ್ತಾನೆ: "ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದರಾಗಿರದೆ ಜ್ಞಾನವಂತರಾಗಿರ್ರಿ. ಈ

ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ." ಈ ವಾಕ್ಯಭಾಗವು ಅಕ್ಷರಶಃ "ಹಿಂದಕ್ಕೆ ಖರೀದಿಸು" ಅಥವಾ "ಸಮಯವನ್ನು ವಿಮೋಚಿಸಿಕೊಳ್ಳುವದು" ಎಂಬುದನ್ನು ಸೂಚಿಸುತ್ತದೆ. ಆ ಪದಗುಚ್ಛದಲ್ಲಿ ಬಳಸಲ್ಪಟ್ಟಿರುವ ಕ್ರಿಯಾಪದವು ἐξαγοράζω (*exagorazō*) ಎಂಬುದು, ಇದು ἀγορά (*agora*) ಎಂಬ ನಾಮಪದದ ಮೇಲೆ ಆಧಾರವಾಗಿದ್ದು ಒಂದು "ಮಾರುಕಟ್ಟೆ" ಅಥವಾ "ವ್ಯಾಪಾರಸ್ಥಳ"ವನ್ನು ಸೂಚಿಸುತ್ತದೆ. ರೂಢಿಯಾಗಿ ಬಳಸುವ ಕ್ರಿಯಾಪದವಾದ ἀγοράζω (*agorazō*) ಎಂಬುದು ಅಕ್ಷರಶಃ "ವ್ಯಾಪಾರ-ಸ್ಥಳ ಮಾಡು," "ಖರೀದಿಸು," ಅಥವಾ "ಸರಕು ಕೊಂಡುಕೋ" ಎಂದು ಅನುವಾದಿಸಲ್ಪಟ್ಟಿದ್ದರೆ, ತೀಕ್ಷ್ಣಗೊಳಿಸಲ್ಪಟ್ಟ ರೂಪದ *exagorazō* ಎಂಬ ಪದವು "ಎಲ್ಲವನ್ನೂ ಖರೀದಿ[ಸುವದು]" ಅಥವಾ "ಸದುಪಯೋಗಪಡಿಸಿಕೊಳ್ಳುವದು" ಎಂಬುದಕ್ಕೆ ಸಂಬಂಧಿಸಿದ್ದಾಗಿದೆ (ಈ ಪ್ರಕರಣದಲ್ಲಿ, ಅದು "ಸಮಯ" ಅಥವಾ "ಸದಾವಕಾಶ" ಆಗಿರುತ್ತದೆ). ಸಮಯವು ಸ್ವತಃ ಜೀವನದ ಅತ್ಯಂಥ ಸಾರಭೂತ ಸಂಗತಿ, ಮತ್ತು ಬೇರೆಯವರ ಸೇವೆ ಮಾಡುವದಕ್ಕಾಗಿ ಮತ್ತು ರಕ್ಷಣೆಯ ಸುವಾರ್ತೆಯನ್ನು ಸಾರುವದಕ್ಕಾಗಿ ಅದನ್ನು ಜ್ಞಾನದಿಂದ ಬಳಸಿಕೊಳ್ಳತಕ್ಕದ್ದು. ಕ್ರೈಸ್ತರು ಎರಡನೆಯ ಬರೋಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಸುವಾರ್ತಾಸೇವೆಯನ್ನು ಮಾಡುವದಕ್ಕೆ ಅವಸರದ ಪ್ರಜ್ಞೆಯನ್ನು ಹೊಂದಿರತಕ್ಕದ್ದು.

ಪೌಲನು ತನ್ನ ಆದೇಶದಲ್ಲಿ ಹೀಗೆ ಹೇಳಿದನು, **ಮಾಡೋಣ . . .** ಇಲ್ಲಿ "ಒಳ್ಳೇದನ್ನು ಮಾಡು[ವದು]" ಎಂಬುದಕ್ಕಾಗಿ 6:9ರಲ್ಲಿದ್ದಂಥ ಗ್ರೀಕ್ ಪದಕ್ಕಿಂತಲೂ ಬೇರೆಯಾದ ಪದವು ಬಳಸಲ್ಪಟ್ಟಿದೆಯಾದರೂ, ಸಾರಭೂತವಾಗಿ ವಿಚಾರವು ಒಂದೇ ಆಗಿರುತ್ತದೆ: ಕ್ರೈಸ್ತರು ಬೇರೆಯವರಿಗೆ ಪ್ರಯೋಜನಾರ್ಥವಾದ, ಅವರ ಜೀವಿತಗಳನ್ನು ಉತ್ತಮಗೊಳಿಸುವಂತ ಕೆಲಸಗಳನ್ನು ಮಾಡುವಂತೆ ಕರೆಯಲ್ಪಟ್ಟಿದ್ದಾರೆ. "ಒಳ್ಳೇದನ್ನು" (ἀγαθός, *agathos*) ಮಾಡುವದು ಪವಿತ್ರಾತ್ಮನನ್ನನುಸರಿಸಿ ನಡೆಯುವದರ ಒಂದು ಫಲಿತವಾಗಿರುತ್ತದೆ. ಈ ಗ್ರೀಕ್ ಪದವು 5:22ರಲ್ಲಿ ದೇವರಾತ್ಮನಿಂದ ಉಂಟಾಗುವ ಫಲದ ಪಟ್ಟಿಯಲ್ಲಿರುವ "ಉಪಕಾರ" (ἀγαθωσύνη, *agathōsunē*) ಎಂದು ಅನುವಾದಿಸಲ್ಪಟ್ಟಿರುವ ಅದೇ ಪದಕುಟುಂಬಕ್ಕೆ ಸೇರಿದ್ದಾಗಿದೆ.

ಯೇಸುವು "ಸಮಸ್ತ ಲೋಕ"ಕ್ಕಾಗಿ (1 ಯೋಹಾನ 2:2) ಮರಣಿಸಿದ ಪ್ರಕಾರ ಮತ್ತು ಸುವಾರ್ತೆಯು "ಎಲ್ಲಾ ದೇಶಗಳ"ಗೋಸ್ಕರ (ಮತ್ತಾಯ 28:19) ಪ್ರಕಾರ, ಕ್ರೈಸ್ತರು **ಎಲ್ಲರಿಗೆ** ಒಳ್ಳೇದನ್ನು ಮಾಡಬೇಕೆಂದು ಕರೆಯಲ್ಪಟ್ಟಿದ್ದಾರೆ. ಸೇವೆಯ ಕಾರ್ಯಗಳು ನಮ್ಮ ವಶಕ್ಕೆ ಕೊಡಲ್ಪಟ್ಟಿರುವ ರಕ್ಷಣೆಯುಂಟು ಮಾಡುವಂಥ ನಂಬಿಕೆಯ ಕುರಿತಾಗಿ ಬೇರೆಯವರಿಗೆ ತಿಳಿಸುವದಕ್ಕೆ ಸದವಕಾಶದ ಬಾಗಿಲುಗಳನ್ನು ತೆರೆಯುವವು. ಪೇತ್ರನು ಕೊರ್ನೇಲ್ಯನ ಮನೆಯಲ್ಲಿ ಅನ್ಯಜನರಿಗೆ ಮೊದಲ ಸಂದೇಶವನ್ನು ಸಾರಿದ ವೇಳೆ, ಆತನು ಯೇಸುವು ಭೂಮಿಯಲ್ಲಿದ್ದಾಗ ಮಾಡಿದ ಸೇವೆಯ ಕುರಿತು ಹೇಳಿದನು - "ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು; ದೇವರು ಆತನ ಸಂಗಡ ಇದ್ದದರಿಂದ ಆತನು *ಉಪಕಾರಗಳನ್ನು ಮಾಡುತ್ತಾ* ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು" (ಅಪೊಸ್ತಲರ ಕೃತ್ಯಗಳು 10:38; ಒತ್ತಿ ಹೇಳಿದ್ದು ನನ್ನದು). ಯೆಹೂದ್ಯರಿಗಷ್ಟೇ ಅಲ್ಲ, ಆದರೆ "ಎಲ್ಲರಿಗೆ" ರಕ್ಷಣೆಯ ಸಂದೇಶವು ಸಾರಲ್ಪಡತಕ್ಕದ್ದು ಎಂಬುದಾಗಿ ಸ್ವತಃ ಪೇತ್ರನು ಆ ದಿನದ ವರೆಗೂ ಗ್ರಹಿಸಿಕೊಂಡಿರಲಿಲ್ಲ (ಅಪೊಸ್ತಲರ ಕೃತ್ಯಗಳು 10:34, 35).

"ಎಲ್ಲರಿಗೆ" ಕಾಳಜಿಯನ್ನು ತೋರಿಸುತ್ತಿರುವದರ ಮಧ್ಯದಲ್ಲಿ, ನಮ್ಮ ಜೊತೆಯ ಕ್ರೈಸ್ತರ

ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೆಗೆದುಕೊಳ್ಳಬೇಕು - **ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ**. ಒಂದು ಆತ್ಮೀಕ ಕುಟುಂಬದ ಭಾವನೆಯು ಯೇಸುವಿನ ಹೇಳಿಕೆಯಲ್ಲಿ ಕಂಡುಬರುತ್ತದೆ "ದೇವರ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು ಅಂದನು" (ಮಾರ್ಕ 3:35). ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಈ ಮುಂಚೆ, ಸುವಾರ್ತೆಗೆ ವಿಧೇಯರಾಗುವ ಮೂಲಕವಾಗಿ ವಿವಿಧ ಬಗೆಯ ಜನರು - ಯೆಹೂದ್ಯರು ಮತ್ತು ಅನ್ಯಜನರು, ದಾಸರು ಮತ್ತು ಸ್ವತಂತ್ರರು, ಪುರುಷರು ಮತ್ತು ಸ್ತ್ರೀಯರು - ದೇವರ ಕುಟುಂಬದೊಳಗೆ ಬಂದಿರುತ್ತಾರೆಂದು ಪೌಲನು ಸ್ಪಷ್ಟಪಡಿಸಿದನು. ಅವರು ತಮ್ಮ ನಂಬಿಕೆಯನ್ನು ಕ್ರಿಸ್ತನಲ್ಲಿಟ್ಟಿದ್ದರು ಮತ್ತು ಅವರ ಪಾಪಗಳ ನಿವಾರಣೆಗಾಗಿ ಆತನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು (ಗಲಾತ್ಯ 3:26-28). ಪ್ರತಿಯೊಬ್ಬನು ಪವಿತ್ರಾತ್ಮನ ವರವನ್ನು ಮತ್ತು ತಂದೆಗೆ ಬಾಧ್ಯರು ಎಂಬ ಒಂದು ಸವಲತ್ತನ್ನು ಹೊಂದಿಕೊಂಡಿದ್ದರು (4:6, 7).

"ಮನೆಯವರು" (οἰκεῖος, *oikeios*) ಎಂಬ ಗ್ರೀಕ್ ಪದದ ಒಂದು ಅಕ್ಷರಶಃ ಅನುವಾದವು ಎಂದರೆ "ಮನೆಗೆ ಸೇರಿರುವದು" ಎಂದಾಗಿದೆ. ಇದು ರಕ್ತಸಂಬಂಧದಿಂದ ಅಥವಾ ಬೇರೆ ಪರಿಸ್ಥಿತಿಗಳ ಮೂಲಕ ನೆಂಟಸ್ತಿಕೆಯುಳ್ಳವರನ್ನು ಸೂಚಿಸುತ್ತದೆ.[14] ಆ ಪದದ ಸಾಮಾನ್ಯ ಬಳಕೆಯು 1 ತಿಮೊಥೆ 5:8ರಲ್ಲಿ ಕಂಡು ಬರುತ್ತದೆ, ಆ ವಾಕ್ಯಭಾಗವು "ತನ್ನ ಮನೆಯವರನ್ನು" ಸಂರಕ್ಷಿಸಬೇಕೆಂದು ಒಬ್ಬನಿಗೆ ಬುದ್ಧಿವಾದ ಹೇಳುತ್ತದೆ. ಗಲಾತ್ಯ 6:10ರಲ್ಲಿ, ಮಾತ್ರವಲ್ಲದೆ ಎಫೆಸ 2:19ರಲ್ಲಿ ಒಂದು ಸಾಂಕೇತಿಕ ಬಳಕೆಯು ಕಾಣಿಸಿಕೊಳ್ಳುತ್ತದೆ. ಎರಡನೆಯ ವಾಕ್ಯಭಾಗದಲ್ಲಿ, ಅನ್ಯಜನರು ಯೆಹೂದ್ಯರೊಂದಿಗೆ ಕೂಡಿ ಬಂದು "ದೇವರ ಮನೆಯವರು" ಆಗಿರುತ್ತಾರೆಂಬುದಕ್ಕಾಗಿ ಪೌಲನು ಸಂಭ್ರಮಿಸಿದ್ದನು. ಇಲ್ಲಿ ದೇವರ ಆತ್ಮೀಕ ಕುಟುಂಬದ ಸದಸ್ಯರು "ಕ್ರಿಸ್ತನಂಬಿಕೆಯಿಂದ" ಒಂದುಗೂಡಿಸಲ್ಪಟ್ಟಿರುತ್ತಾರೆಂದು ಹೇಳಲಾಗಿದೆ. ಈ ಮಾತು ಕ್ರಿಸ್ತನಲ್ಲಿ ಕ್ರೈಸ್ತರಿಗೆ ಇರುವೇ ಏಕರೀತಿಯ ವಿಶ್ವಾಸವನ್ನು ಸೂಚಿಸಬಹುದಾಗಿದೆ, ಅದನ್ನು "ವಿಶ್ವಾಸಿಗಳ ಕುಟುಂಬ" (NIV) ಎಂಬ ಅನುವಾದದಲ್ಲಿ ಕಂಡುಬರುತ್ತದೆ. ಇನ್ನೊಂದು ಸಾಧ್ಯತೆಯೇನೆಂದರೆ "ಕ್ರಿಸ್ತನಂಬಿಕೆ" ಎಂಬುದು ಎಲ್ಲರೂ ಹಂಚಿಕೊಂಡಿರುವ ನಂಬಿಕೆ ವ್ಯವಸ್ಥೆಯನ್ನು - "ದೇವಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ" (ಯೂದನು 3) - ಸೂಚಿಸುತ್ತದೆ. ಇವೆರಡರಲ್ಲಿ ಹೇಗಿದ್ದರೂ, ಇಲ್ಲಿ ಉಲ್ಲೇಖವು ಸಭೆ ಕುರಿತಾಗಿರುತ್ತದೆ (1 ತಿಮೊಥೆ 3:15; 1 ಪೇತ್ರ 4:17).

## ಮುಕ್ತಾಯದ ಹೇಳಿಕೆಗಳು (6:11-18)

### "ನನ್ನ ಪತ್ರಿಕೆಯು ಪ್ರಾಮುಖ್ಯವಾದದ್ದು!" (6:11)

**11ಇಗೋ, ಸ್ವಂತ ಕೈಯಿಂದ ಎಂಥಾ ದೊಡ್ಡ ಅಕ್ಷರಗಳಲ್ಲಿ ನಿಮಗೆ ಬರೆಯುತ್ತಾ ಇದ್ದೇನೆ.**

ಪತ್ರಿಕೆಯನ್ನು ಮಕ್ತಾಯಗೊಳಿಸುವ ಸಮೀಪದಲ್ಲಿ, ಅಪೊಸ್ತಲನು ತಾನು ಬರೆಯುತ್ತಿರುವ ಸಂಗತಿಯ ಕಡೆಗೆ - ಪರಿವಿಡಿಯ ಕಡೆಗಲ್ಲ, ಆದರೆ ಸ್ವತಃ ದಸ್ತಾವೇಜಿನ ಕಡೆಗೆ - ವಿಶೇಷ ಗಮನವನ್ನು ಕೊಡುವಂತೆ ಕೇಳುತ್ತಾನೆ.

**ವಚನ 11. ಬರೆಯುತ್ತಾ ಇದ್ದೇನೆ** ಎಂಬ ಪದಗುಚ್ಛವು ಗ್ರೀಕ್ ವಾಕ್ಯದಲ್ಲಿ, ἔγραψα (*egrapsa*)[15] ಎಂಬ ಒಂದು ಏಕ ಕ್ರಿಯಾಪದದಿಂದ ಬಂದದ್ದಾಗಿದೆ, ಇದು ಹೆಚ್ಚು ಅಕ್ಷರಶಃವಾಗಿ

“ನಾನು ಬರೆದಿದ್ದೇನೆ” (KJV) ಎಂದು ಅನುವಾದಿಸಲ್ಪಟ್ಟಿದೆ. ಒಂದು ಪತ್ರವನ್ನು (ಅಥವಾ ಪತ್ರಿಕೆಯನ್ನು) ಮುಗಿಸುವ ವೇಳೆಯಲ್ಲಿ “ಪತ್ರಾತ್ಮಕ ಅನಿಶ್ಚಿತ ಭೂತಕಾಲ”ವನ್ನು ಬಳಕೆ ಮಾಡುವದು ಗ್ರೀಕರೊಳಗಿದ್ದ ಒಂದು ಸಂಪ್ರದಾಯಬದ್ಧ ಆಚಾರವಾಗಿತ್ತು. ಭೂತಕಾಲರೂಪವನ್ನು ಬಳಸುವ ಮೂಲಕ, ತನ್ನ ಪತ್ರಿಕೆಯನ್ನು ಓದಲಿದ್ದವರನ್ನು ಕಲ್ಪಿಸಿಕೊಂಡವನಾಗ, ಲೇಖಕನು ತನ್ನನ್ನು ಮುಂಬರುವ ಕಾಲದೊಳಗೆ ತೋರಿಸಿಕೊಳ್ಳುತ್ತಾನೆ. ವಾಚಕನು ಇದನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡನು, ಮತ್ತು ಲೇಖಕನು ಪತ್ರಿಕೆಯನ್ನು ಬರೆಯುತ್ತಿರುವದನ್ನು ಕಲ್ಪಿಸಿಕೊಳ್ಳುವವನಾಗಿ, ಆತನು ತನ್ನ ಆಲೋಚನೆಗಳನ್ನು ಕಾಲದೊಳಗೆ ಹಿಂದಕ್ಕೆ ತೋರಿಸಿಕೊಳ್ಳುವವನಾಗಿದ್ದನು. ಲೇಖಕನು ಒಬ್ಬ ಹಳೆಯ ಮಿತ್ರನಾಗಿದ್ದರೆ, ವಾಚಕನು ಆತನನ್ನು ಈ ವಿಧದಲ್ಲಿ ಯೋಚಿಸಿಕೊಳ್ಳಲು ಆದರಣೆಗೊಳ್ಳುತ್ತಿದ್ದನು. ಹಾಗಿದ್ದರೂ, ಪತ್ರಾತ್ಮಕ ಅನಿಶ್ಚಿತ ಭೂತಕಾಲದ ಬಳಕೆಯು ಸಂಬೋಧನೆಯ ಒಂದು ಸಂಪ್ರದಾಯಿಕ ವಿಧವಾಗಿತ್ತು; ಪತ್ರ ವ್ಯವಹಾರದಲ್ಲಿರುವವರ ನಡುವೆ ಒಂದು ಪ್ರೀತಿ ಹುಟ್ಟಿಸುವ ಸಂಬಂಧವು ಇರುವ ಹೊರತು ಇದು ಸ್ವಲ್ಪ ಅಥವಾ ಯಾವದೇ ಭಾವವನ್ನು ಪಡೆದುಕೊಳ್ಳುತ್ತಿರಲಿಲ್ಲ.[16]

ಪೌಲನು ಗಮನವನ್ನು ಸೆಳೆದ ವಾಸ್ತವಾಶಂವು ಏನೆಂದರೆ, ಆತನು ಈ ಪತ್ರಕೆಯ ಮುಕ್ತಾಯದಲ್ಲಿ, **ಸ್ವಂತ ಕೈಯಿಂದ ದೊಡ್ಡ ಅಕ್ಷರಗಳಲ್ಲಿ** ಬರೆಯುತ್ತಿದ್ದಾನೆ ಎಂಬುದೆ. ಒಬ್ಬ ನಕಲುಗಾರನಿಗೆ ಪತ್ರವನ್ನು ಹೇಳಿಸಿ ಬರೆಯುವದು ಪೌಲನ ಪದ್ಧತಿಯಾಗಿತ್ತು, ಆತನು ಪೌಲನ ಮಾತುಗಳನ್ನು ಕಾಗದದ ಮೇಲೆ ಬರೆಯುವ ವೃತ್ತಿಪರ ಬರಹಗಾರನಾಗಿರುತ್ತಿದ್ದನು. ಅಂಥ ವ್ಯಕ್ತಿಯೊಬ್ಬನು ರೋಮಾಪುರದವರಿಗೆ ಬರೆದ ಪತ್ರಿಕೆಯ ಅಂತ್ಯದ ವೇಳೆ ತನ್ನ ಗುರುತು ತಿಳಿಸಿದನು: “ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬ ನಾನು ನಿಮ್ಮನ್ನು ಕರ್ತನಲ್ಲಿ ವಂದಿಸುತ್ತೇನೆ”[17] (ರೋಮಾ 16:22; NIV). ಅಪೊಸ್ತಲನು ನಕಲುಗಾರನನ್ನು ಬಳಸಿಕೊಂಡನಾದರೂ, ಆತನು ಮುಕ್ತಾಯದ ಹೇಳಿಕೆಗಳನ್ನು ಸ್ವತಃ ಮಾತಿನಲ್ಲಿ ಬರೆಯುತ್ತಿದ್ದನು. ಬರಹಗಾರನ ಚಿಕ್ಕದಾದ, ನೀಟಾಗಿರುತ್ತಿದ್ದ ಕೈ-ಬರಹಕ್ಕೆ ಹೋಲಿಸಿದರೆ, ಆತನ ಪತ್ರಿಕೆಗಳು ದೊಡ್ಡಕ್ಷರ ಹಾಗೂ ಅಂದವಿಲ್ಲದಂತೆ ಇರುತ್ತಿದ್ದವು.[18] *ಆದಿ ಕ್ರೈಸ್ತತ್ವದ ಹಿನ್ನಲೆ*ಯಲ್ಲಿ, Everett Fergusonನು ಕ್ರಿ.ಶ. 66ರ, ಅಗಸ್ಟ್ 24ರ ದಿನಾಂಕವಿರುವ ಒಂದು ಪಾಪೀರಸ್ ಕಾಗದದ ಪತ್ರಿಕೆಯಿಂದ ಇದಕ್ಕೆ ಒಂದು ದೃಶ್ಯಾತ್ಮಕ ಉದಾಹರಣೆಯನ್ನು ಒದಗಿಸುತ್ತಾನೆ. ನಕಲುಗಾರನ ಕೈಬರಹವು ಸ್ಪಷ್ಟವಾಗಿದೆ ಮತ್ತು ಪತ್ರಿಕೆಯ ಮುಖ್ಯಭಾಗದಲ್ಲಿ ಸಾಮಂಜಸ್ಯತೆಯಿಂದಿದ್ದರೆ, ಲೇಖಕನ ಸುರುಳಿಯಾಕಾರದ ಅಕ್ಷರಗಳು ಅಡ್ಡಾದಿಡ್ಡಿಯಾಗಿರುತ್ತವೆ ಮತ್ತು ಅಂತ್ಯದಲ್ಲಿ ಬರೆಯಲ್ಪಟ್ಟಿರುತ್ತವೆ. ಪೌಲನ ಮಿಕ್ಕ ಪತ್ರಿಕೆಗಳ ಜೊತೆಯಲ್ಲಿ, ಗಲಾತ್ಯದವರಿಗೆ ಬರೆದ ಪತ್ರಿಕೆಯು ಬಹುಶಃ ಈ ಉದಾಹರಣೆಯನ್ನು ಹೋಲುವಂತೆಯೇ ಕಂಡಿರಬಹುದು.[19]

ನಕಲುಗಾರನನ್ನು ಬಳಸುವ ಮತ್ತು ಮುಕ್ತಾಯದಲ್ಲಿ ತನ್ನ ಸ್ವಂತ ಕೈಯಿಂದ ಬರೆಯುವ ರೂಢಿಯು ಪೌಲನ ಆರಂಭಿಕ ಸುವಾರ್ತಾ ಬದುಕಿನಲ್ಲಿಯೇ ಸಾಭಿತುಗೊಂಡಿತ್ತು. ಗಲಾತ್ಯದವರಿಗೆ ಪತ್ರಿಕೆಯು ಸುಮಾರು ಕ್ರಿ.ಶ. 48-49ರ ವೇಳೆ ಬರೆಯಲ್ಪಟ್ಟಿರುವದಾದರೆ, ಇದು ಹೊಸ ಒಡಂಬಡಿಕೆಯಲ್ಲಿ ಸಂರಕ್ಷಿಸಿಡಲ್ಪಟ್ಟಿರುವ ಅಪೊಸ್ತಲನಾದ ಪೌಲನ ಪತ್ರಿಕೆಗಳಲ್ಲಿಯೇ ಅತ್ಯಂಥ ಹಳೆಯ ಪತ್ರಿಕೆಗಳಲ್ಲೊಂದು ಎಂದಾಗುತ್ತದೆ. ಆದದರಿಂದ, ಮುಕ್ತಾಯ ಭಾಗವನ್ನು ತನ್ನ ಸ್ವಂತ ಕೈಯಿಂದ ಬರೆಯುವ ರೂಢಿಯು ಆತನು ಈ ಮುಂಚೆಯೇ ಪತ್ರದಲ್ಲಿ ವಿಸ್ತರಿಸಲ್ಪಟ್ಟಿತ್ತು. ಅಪೊಸ್ತಲನ ಪತ್ರವು ನಿಜವಾಗಿಯೂ ಆತನಿಂದಲೇ ಬಂದದ್ದಾಗಿತ್ತೆಂಬುದನ್ನು ಗುರುತಿಸುವದಕ್ಕೆ ಇದು ಪ್ರಾಮುಖ್ಯವಾಗಿತ್ತು (ನೋಡಿರಿ

2 ಥೆಸಲೋನಿಕ 2:1, 2). ಥೆಸಲೋನಿಕದವರಿಗೆ ಆತನು ಹೀಗೆ ಬರೆದನು, "ಪೌಲನೆಂಬ ನಾನು ಸ್ವಂತ ಕೈಯಿಂದ ವಂದನೆಯನ್ನು ಬರೆದಿದ್ದೇನೆ; ಎಲ್ಲಾ ಪತ್ರಿಕೆಗಳಲ್ಲಿಯೂ ಇದೇ ಗುರುತು; ಹೀಗೆಯೇ ನನ್ನ ಕೈಬರಹ" (2 ಥೆಸಲೋನಿಕ 3:17).[20] ಈ "ಗುರುತು" (σημεῖον, *sēmeion*, "ಸಹಿ") ಎಂಬುದು ಪ್ರಾಮಾಣೀಕರಿಸುವ ಸಂಗತಿಯಾಗಿತ್ತು. ಆತನು ಸ್ವತಃ ಪ್ರತಿಯೊಂದು ಪತ್ರಿಕೆಯಲ್ಲಿ ಮುಕ್ತಾಯದ ಹೇಳಿಕೆಗಳನ್ನು ಬರೆಯುತ್ತಿದ್ದನು, ಆದಾಗ್ಯೂ ಈ ಚಹರೆಯು ನಮಗೆ ಯಾವಾಗಲೂ ಸ್ಪಷ್ಟವಾಗುವದಿಲ್ಲ ಯಾಕೆಂದರೆ ನಮ್ಮ ಬಳಿಯಲ್ಲಿ ಮೂಲ ದಸ್ತಾವೇಜುಗಳು ("ಹಸ್ತಾಕ್ಷರಗಳು") ಇರುವದಿಲ್ಲ. ಪೌಲನು ಈ ಅಭ್ಯಾಸದ ಕುರಿತು ತನ್ನ ಇನ್ನು ಕೆಲವು ಪತ್ರಿಕೆಗಳನ್ನು ಒತ್ತಿ ಹೇಳುತ್ತಾನೆ.[21] ಆತನು ಉಳಿದ ಪತ್ರಿಕೆಗಳಲ್ಲಿ ಇದನ್ನು ಸ್ಪಷ್ಟವಾಗಿ ತಿಳಿಸಲಿಲ್ಲವೆಂದ ಮಾತ್ರಕ್ಕೆ "ಆತನು ಹಾಗೆ ಮಾಡಲಿಲ್ಲ ಎಂದರ್ಥವಾಗುವದಿಲ್ಲ, ಆದರೆ ಅದನ್ನು ಆತನು ಒತ್ತಿ ಹೇಳಲಿಲ್ಲ ಎಂಬುದೆ."[22]

## "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ" (6:12-16)

**12ಬಹಿರಾಚಾರಗಳಿಂದ ಮಾನಪಡೆಯಬೇಕೆಂದಿರುವವರು ಸುನ್ನತಿಮಾಡಿಸಿಕೊಳ್ಳಿರಿ ಎಂಬದಾಗಿ ನಿಮ್ಮನ್ನು ಬಲಾತ್ಕರಿಸುತ್ತಾರೆ. ತಮಗೆ ಕ್ರಿಸ್ತನ ಶಿಲುಬೆಯ ದೆಸೆಯಿಂದ ಹಿಂಸೆಯಾಗಬಾರದೆಂಬದೊಂದೇ ಅವರ ಉದ್ದೇಶ. 13ಸುನ್ನತಿಮಾಡಿಸಿಕೊಳ್ಳುವ ತಾವಾದರೂ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಿಲ್ಲ. ಅವರು ನಿಮ್ಮ ಶರೀರದ ವಿಷಯದಲ್ಲಿ ಹೆಚ್ಚಳಪಡುವದಕ್ಕಾಗಿ ನಿಮಗೆ ಸುನ್ನತಿಯಾಗಬೇಕೆಂದು ಅಪೇಕ್ಷಿಸುತ್ತಾರೆ. 14ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ. ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು, ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು. 15ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು. 16ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ ಅಂದರೆ ದೇವರ ಇಸ್ರಾಯೇಲ್ಯರಿಗೆ ಶಾಂತಿಯೂ ಕರುಣೆಯೂ ಆಗಲಿ.**

**ವಚನ 12.** ತನ್ನ ಪತ್ರಿಕೆಯನ್ನು ಅಂತ್ಯಗೊಳಿಸುವ ಮುನ್ನ, ಪೌಲನು ತನ್ನ ಗಮನವನ್ನು ಪುನಃ ಯೆಹೂದಿಕರಣಗೊಳಿಸುವವರ ಕಡೆಗೆ ಹರಿಸುತ್ತಾನೆ: **ಬಹಿರಾಚಾರಗಳಿಂದ ಮಾನಪಡೆಯಬೇಕೆಂದಿರುವವರು ಸುನ್ನತಿಮಾಡಿಸಿಕೊಳ್ಳಿರಿ ಎಂಬದಾಗಿ ನಿಮ್ಮನ್ನು ಬಲಾತ್ಕರಿಸುತ್ತಾರೆ.** ಆತನು ಯೆಹೂದಿ ಕ್ರೈಸ್ತರನ್ನು - ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಿಕೊಂಡಿದ್ದಂಥ ಆದರೆ ಈಗಲೂ ಅನ್ಯಜನಾಂಗದ ಕ್ರೈಸ್ತರಿಗೆ ಸುನ್ನತಿಯಾಗಬೇಕೆಂದು ವಾದಿಸುತ್ತಿದ್ದಂಥ ಯೆಹೂದ್ಯರು - ಆಗಿದ್ದರು.

ಗ್ರೀಕ್-ರೋಮನ್ ಜಗತ್ತಿನಲ್ಲಿ, ಅವಮಾನದ ವಿರುದ್ಧವಾಗಿ ಸನ್ಮಾನದ ಮೇಲೆ ಹೆಚ್ಚಿನ ಒತ್ತು ಕೊಡಲಾಗುತ್ತಿತ್ತು. ನಾಚಿಕೆಗೊಳಗಾಗುವದರ ಬದಲಾಗಿ, ಯೆಹೂದಿಕರಣಗೊಳಿಸುವವರು "ಮಾನಪಡೆಯಬೇಕೆಂದಿದ್ದರು" (εὐπροσωπέω, *euprosōpeō*). ಈ ಪದವು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ, ಮತ್ತು ಗ್ರೀಕ್ ಸಾಹಿತ್ಯದಲ್ಲಿ ಅದು ಅತ್ಯಂಥ ವಿರಳವಾಗಿರುತ್ತದೆ.[23] ಇದು "ಒಳ್ಳೇ" (εὖ, *eu*) ಮತ್ತು "ಮುಖ" (πρόσωπον, *prosōpon*) ಎಂಬ ಪದಗಳ ಸಂಯೋಜನೆಯಾಗಿದ್ದು ಅವುಗಳ ಒತ್ತು ಬಾಹ್ಯ ರೂಪದ

ಕುರಿತಾಗಿರುತ್ತದೆ. "ಶರೀರ" (*σάρξ*, *sarx*) ಎಂಬುದು ಇಲ್ಲಿ ಅಕ್ಷರಶಃವಾಗಿ ಬಳಸಲ್ಪಟ್ಟಿರುವಂತೆ ಕಾಣುತ್ತದೆ; ಯಾಕೆಂದರೆ ಅದಾದ ಬಳಿಕ "ಸುನ್ನತಿ" ಎಂಬ ಪದವು ಇರುತ್ತದೆ. ಯೆಹೂದಿಕರಣಗೊಳಿಸುವವರು "ಬಹಿರಾಚಾರಗಳಿಂದ ಮಾನಪಡೆಯಬೇಕೆಂದು" ಎಂಬುದು ಅನ್ಯಜನಾಂಗದ ಕ್ರೈಸ್ತರ ಸುನ್ನತಿಯ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತು. "ಬಲಾತ್ಕರಿಸು" (*ἀναγκάζω*, *anankazō*) ಎಂಬುದು 2:3 ಮತ್ತು 2:14ರಿಂದ ಪುನರಾವರ್ತಿಸಲ್ಪಟ್ಟಿದೆ; ಈ ವಚನಗಳು ಸುನ್ನತಿಯನ್ನು ಮತ್ತು ಯೆಹೂದ್ಯರ ಇತರೆ ಆಚಾರಗಳನ್ನು ಅನ್ಯಜನರು ಅಳವಡಿಸಿಕೊಳ್ಳಬೇಕೆಂದು ಪಟ್ಟು ಹಿಡಿಯುವದಕ್ಕೆ ಸಹ ಸಂಬಂಧಿಸಿರುತ್ತವೆ.

ಯೇಸುವನ್ನು ಮೆಸ್ಸೀಯನೆಂದು ನಂಬುವವರಾಗಿದ್ದ ಯೆಹೂದ್ಯರಿಗೆ ಈ ಅಕ್ಷರಶಃ ಸುನ್ನತಿಯು ಹೇಗೆ ಮುಖ್ಯವಾಗಬಲ್ಲದ್ದಾಗಿತ್ತು? ಅವರು ಈ ಚಿಕ್ಕ ಶಸ್ತ್ರಚಿಕಿತ್ಸೆಗೆ ಅಷ್ಟೊಂದು ಬಿಗಿಯಾಗಿ ಅಂಟಿಕೊಂಡು ಅದಕ್ಕೆ ತಮ್ಮನ್ನು ಒಪ್ಪಿಸಿಕೊಳ್ಳದ ಅನ್ಯಜನಾಂಗದ ಸಹೋದರರೊಂದಿಗೆ ಊಟ ಮಾಡುವದಕ್ಕೆ ನಿರಾಕರಿಸುವದಕ್ಕೆ ಹೇಗೆ ಸಾಧ್ಯವಾಗಿತ್ತು (ನೋಡಿರಿ 2:11-21)? ಅಂತೂ, ಈ ಅನ್ಯಜನರು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು ಮತ್ತು ಪಂಚಾಶತ್ತಮ ದಿನದಂದು ಪೇತ್ರನ ಸಂದೇಶಕ್ಕೆ ವಿಧೇಯತೆಯಿಂದ ಪ್ರತಿಕ್ರಿಯಿಸಿದ ಯೆಹೂದ್ಯರಿಗೆ ಅನುಗ್ರಹಿಸಲ್ಪಟ್ಟ ಅದೇ "ಪವಿತ್ರಾತ್ಮದಾನ"ವನ್ನು ಪಡೆದುಕೊಂಡಿದ್ದಾರೆ.[24]

ಈ ಪ್ರಶ್ನೆಗಳಿಗೆ ಉತ್ತರವು ಸಾಮಾನ್ಯವಾಗಿ ಮುಂದಿನ ಸಾಲಿನಿಂದ ಸಿಕ್ಕುತ್ತದೆ: **ತಮಗೆ ಕ್ರಿಸ್ತನ ಶಿಲುಬೆಯ ದೆಸೆಯಿಂದ ಹಿಂಸೆಯಾಗಬಾರದೆಂಬದೊಂದೇ ಅವರ ಉದ್ದೇಶ.** ಹೇಗೂ, ಈ ವಿವರಣೆಯು ಯೆಹೂದಿಕರಣಗೊಳಿಸುವವರಿಗೆ ಯಾರಿಂದ ಒಂದು ಬೆದರಿಕೆಯಿತ್ತೆಂದು ಅವರ ಗುರುತನ್ನು ನಿರ್ದಿಷ್ಟವಾಗಿ ತಿಳಿಸುವದಿಲ್ಲ. ಬಹಳ ಸಂಭಾವ್ಯವಾಗಿ, ಈ ಹಿಂಸಕರು ಯೇಸುವನ್ನು ಮೆಸ್ಸೀಯನೆಂದು ನಂಬದ ಯೆಹೂದ್ಯರಾಗಿದ್ದರು. ಅಂಥ ಮನುಷ್ಯರು ಯೆರೂಸಲೇಮಿನಲ್ಲಿ ಮಾತ್ರವೇ ಅಲ್ಲ, ಆದರೆ ಗಲಾತ್ಯದ ಪ್ರಾಂತ್ಯದಲ್ಲಿ ಸಹ ಪೌಲನ ಜೀವಕ್ಕೆ ಗಂಡಾಂತರವನ್ನು ಒಡ್ಡಿದ್ದರು (ಅಪೊಸ್ತಲರ ಕೃತ್ಯಗಳು 9:28-30; 13:44-52; 14:1-7, 19, 20). ಗಲಾತ್ಯದವರು ಸುನ್ನತಿಯನ್ನು ಮಾಡಿಸಿಕೊ*ಳ್ಳದೆಯೇ* ಕ್ರಿಸ್ತನ ಮರಣದ ಮೂಲಕವಾಗಿ ದೇವರಿಗೆ ಅಂಗೀಕರಿಸಲ್ಪಡುವರು ಎಂಬ ಪೌಲನ ಸಂದೇಶವನ್ನು ಅವರು ತಾತ್ಸಾರ ಮಾಡಿದರು (5:11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಈಗಿನ ಪ್ರಕರಣದಲ್ಲಿ, ಬೆದರಿಕೆಯು ಯೇಸುವಿನಲ್ಲಿ ನಂಬಿಕೆಯಿಲ್ಲದಿದ್ದ ಯೆರೂಸಲೇಮಿನಲ್ಲಿರುವ ಯೆಹೂದ್ಯರಿಂದ ಬಂದಿರಬಹುದಾಗಿದೆ. ಗಲಾತ್ಯದಲ್ಲಿರುವ ಅನ್ಯಜನಾಂಗದ ಕ್ರೈಸ್ತರನ್ನು ಸುನ್ನತಿ ಮಾಡಿಸಿಕೊಳ್ಳುವಂತೆ ಮನವೊಲಿಸಲು ಶಕ್ತರಾದಲ್ಲಿ, ಇದರಿಂದ ಯೆರೂಸಲೇಮಿನ ಸಭೆಯನ್ನು ಯೂದಾಯದಲ್ಲಿದ್ದ ಇತರ ಸಭೆಗಳನ್ನು ಸುನ್ನತಿಯಿಲ್ಲದರೊಂದಿಗೆ ಸಹವಾಸ ಇಟ್ಟುಕೊಂಡ ಕಾರಣದಿಂದ ಹಿಂಸೆ ಮಾಡಬಹುದಾದ ನಂಬಿಕೆಯಿಲ್ಲದ ಯೆಹೂದ್ಯರಿಂದ ಕಾಪಾಡಬಹುದೆಂದು ಯೆಹೂದಿಕರಣಗೊಳಿಸುವವರು ವಾದಿಸಿದರು.[25] ಯೆಹೂದಿಕರಣಗೊಳಿಸುವವರು ವಾಸ್ತವಿಕದಲ್ಲಿ ತಾವು ಯೆಹೂದಿಮತಕ್ಕೆ ಜನರನ್ನು ಮತಾಂತರಿಸುತ್ತಿದ್ದೇವೆಂದು ಯೆರೂಸಲೇಮಿನ ಅಧಿಕಾರಿಗಳಿಗೆ ವರದಿ ಮಾಡುವದಕ್ಕೆ ಸಾಧ್ಯವಾಗುತ್ತಿತ್ತು. ಈ ವಿಧದಲ್ಲಿ, ಅವರು "ಕ್ರಿಸ್ತನ ಶಿಲುಬೆಯ" ಪ್ರಭಾವವನ್ನು ಮಿತಿಗೊಳಿಸುವದಕ್ಕೆ ಪ್ರಯತ್ನಿಸಿದರು.

ಇನ್ನೊಂದು ಸಾಧ್ಯತೆಯು ಏನೆಂದರೆ, ಮುಂಚಿನದ್ದರಿಂದ ಪರಸ್ಪರ ಹೊರತಾಗಿರುವದಲ್ಲವಾದರೂ. ಈ ಹಿಂಸಕರು ಗಲಾತ್ಯದ ಪ್ರಾಂತ್ಯದಲ್ಲಿ ಜೀವಿಸಿದ್ದ ವಿಶ್ವಾಸವಿಲ್ಲದ ಯೆಹೂದ್ಯರಾಗಿರಬಹುದಾಗಿದೆ. ಯೆಹೂದಿಕರಣಗೊಳಿಸುವವರು ಸಭಾಮಂದಿರ

ಮತ್ತು ಸಭೆ ಎರಡರೊಂದಿಗೂ ತಮ್ಮ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಲು ಬಯಸಿದ್ದರು. ಅವರು ಸುನ್ನತಿ ಮಾಡಿಸಿಕೊಳ್ಳುವಂತೆ ಅನ್ಯಜನಾಂಗದ ಸಹೋದರರ ಮನವೊಲಿಸಲು ಆಶಕ್ತರಾದಲ್ಲಿ, ಅವರೊಂದಿಗೆ ತಮಗಿರುವ ಅನ್ಯೋನ್ಯತೆಯು (ಮೂಲತಃ "ಕ್ರಿಸ್ತನ ಶಿಲುಬೆಯ"ಯ ಮೂಲಕವಾಗಿ ಸ್ಥಾಪಿಸಲ್ಪಟ್ಟ) ನಂಬಿಕೆಯಿಲ್ಲದ ಯೆಹೂದ್ಯರಿಗೆ ಹೆಚ್ಚು ಸ್ವೀಕಾರರ್ಹವಾಗುವದು. ಈ ವಿಧದಲ್ಲಿ, ಯೆಹೂದಿಕರಣಗೊಳಿಸುವವರು ಎರಡೂ ಜಗತ್ತಿಗಳೊಂದಿಗೆ - ಯೆಹೂದಿಮತದಲ್ಲಿದ್ದ ಅವರ ಶ್ರೀಮಂತ ಪರಂಪರೆ ಮತ್ತು ಅವರು ಹೊಸದಾಗಿ ಕಂಡುಕೊಂಡಿದ್ದ ಕ್ರಿಸ್ತನಲ್ಲಿನ ನಂಬಿಕೆ - ಉತ್ತಮವಾಗಿ ಕಾಪಾಡಿಕೊಳ್ಳುವದಕ್ಕೆ ಶಕ್ತರಾಗುತ್ತಿದ್ದರು.

**ವಚನ 13.** ಪೌಲನು ಯೆಹೂದಿಕರಣಗೊಳಿಸುವವರ ನಿಲುವಿನ ನಿರರ್ಥಕತೆಯನ್ನು ತೋರಿಸಿ ಕೊಡುತ್ತಾ ಹೀಗೆ ಹೇಳಿದನು **ಸುನ್ನತಿಮಾಡಿಸಿಕೊಳ್ಳುವ ತಾವಾದರೂ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಿಲ್ಲ.** ಇಸ್ರಾಯೇಲ್ಯವು ತನ್ನನ್ನು ಸೀನಾಯಿ ಪರ್ವತದಲ್ಲಿ ಹೊಣೆಗೊಳಪಡಿಸಿಕೊಂಡ ಒಡಂಬಡಿಕೆಯು ಸಂಪೂರ್ಣ ವಿಧೇಯತೆಯನ್ನು ತೋರಿಸಲು ಕರೆ ನೀಡಿತ್ತು (ವಿಮೋಚನಕಾಂಡ 19:5-8; ನೋಡಿರಿ ಗಲಾತ್ಯ 5:3), ಆದಾಗ್ಯೂ ಅವರು ಎಂದಿಗೂ ಪೂರ್ಣ ವಿಧೇಯತೆಯನ್ನು ತೋರಿಸಲಾಗಲಿಲ್ಲ. ಮೊದಲ ಶತಮಾನದಲ್ಲಿನ ಯೆಹೂದ್ಯ ಕ್ರೈಸ್ತರ ವಿಷಯದಲ್ಲಿಯೂ ಅದು ಅಷ್ಟೇ ಸತ್ಯವಾಗಿತ್ತು; ಅವರು ಸಹ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯರಾಗಲಿಲ್ಲ.

ಅನ್ಯಜನಾಂಗದವರು ಧರ್ಮಶಾಸ್ತ್ರಕ್ಕೆ ಸಂಪೂರ್ಣ ವಿಧೇಯರಾಗಬೇಕೆಂಬುದನ್ನು ಯೆಹೂದಿಕರಣಗೊಳಿಸುವವರು ಬಯಸಿದ್ದರೆಂಬ ಕಾರಣದಿಂದಾಗಿ ಅವರಿಗೆ ಸುನ್ನತಿಯಾಗಬೇಕೆಂದು ವಾದಿಸಲಿಲ್ಲ; ಬದಲಾಗಿ, ಅವರು **ಶರೀರದ ವಿಷಯದಲ್ಲಿ ಹೆಚ್ಚಳಪಡೆಯಬೇಕೆಂದು** ಹಾಗೆ ಮಾಡುತ್ತಿದ್ದರೆಂಬುದಾಗಿ ವಾಕ್ಯಭಾಗವು ಹೇಳುತ್ತದೆ (6:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಶಾರೀರಿಕ ಮಾನದಂಡವು ಪವಿತ್ರಾತ್ಮನ ಮನಸ್ಸಿಗೆ ತದ್ವಿರುದ್ಧವಾಗಿರುತ್ತದೆ. ಯೆಹೂದಿಕರಣಗೊಳಿಸುವವರು ಗಲಾತ್ಯದಲ್ಲಿನ ಸಭೆಗಳಿಗೆ ದೊಡ್ಡ ಹಾನಿಯನ್ನು ಮಾಡುತ್ತಿದ್ದರು: ಅವರು ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟಿದ್ದ ಅನ್ಯಜನರನ್ನು ತಮ್ಮ ಮೂಲಪಿತೃಗಳ ಸಂಪ್ರದಾಯದಲ್ಲಿ ಭದ್ರತೆಯನ್ನು ಹುಡುಕಿಕೊಳ್ಳುವದಕ್ಕಾಗಿ ಅವರ ಆ ಅಮೂಲ್ಯವಾದ ವಿಮೋಚನೆಯನ್ನು ನಷ್ಟಪಡಿಸಿಕೊಳ್ಳುವ ಹಾಗೆ ಪ್ರಭಾವಗೊಳಿಸುತ್ತಿದ್ದರು. ಅನ್ಯಜನಾಂಗದ ಕ್ರೈಸ್ತರು ಸುನ್ನತಿಯನ್ನು ಮಾಡಿಸಿಕೊಳ್ಳುವದೆಂದರೆ ಕರ್ತನ ದಯೆಯನ್ನು ಮತ್ತು ಶಿಲುಬೆಯ ಮೇಲೆ ಆತನು ಕೊಂಡುಕೊಂಡಿದ್ದ ರಕ್ಷಣೆಯನ್ನು ತ್ಯಜಿಸಿ ಬಿಡುವಂತೆ ಆಗಿತ್ತು! ಪೌಲನು ಈ ಮುಂಚೆ ಅವರನ್ನು ಎಚ್ಚರಿಸಿದ್ದನು, "ನೀವು ಸುನ್ನತಿಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ" (5:2). ಯೆಹೂದಿಕರಣಗೊಳಿಸುವವರು ತಮ್ಮ ಕೃತ್ಯಗಳಿಂದಾಗುವ ಪೂರ್ಣ ಪರಿಣಾಮಗಳನ್ನು ಕುರಿತು ಗ್ರಹಿಸಿಕೊಳ್ಳದೆ ಇದ್ದಿರಬಹುದಾದರೂ, ಅವರ ಮನೋಭಾವವು ಲೌಕಿಕದ್ದಾಗಿತ್ತು ಮತ್ತು ಸ್ವಾರ್ಥದಿಂದ ಕೂಡಿತ್ತು - "ಬಹಿರಾಚಾರಗಳಿಂದ ಮಾನಪಡೆಯಬೇಕೆಂದು" ಎಂಬ ಪದಗುಚ್ಛದಲ್ಲಿ ಸೂಚಿಸಲ್ಪಟ್ಟಿರುವಂತೆ.

**ವಚನ 14.** ಶರೀರದ ವಿಷಯದಲ್ಲಿ ಹೆಚ್ಚಳಪಟ್ಟುಕೊಳ್ಳುತ್ತಿದ್ದ ಯೆಹೂದಿಕರಣಗೊಳಿಸುವವರಿಗೆ ತದ್ವಿರುದ್ಧವಾಗಿ, ಪೌಲನು ಒತ್ತು ಕೊಟ್ಟು ಹೇಳಿದ್ದೇನೆಂದರೆ, **ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ.** ಈ ಹೇಳಿಕೆಯ ವಿಪರ್ಯಾಸವು ಏನೆಂದರೆ ಗ್ರೀಕ್-ರೋಮನ್ ಜಗತ್ತಿನೊಳಗೆ ಸುಸಂಸ್ಕೃತ ಸಂಘದಲ್ಲಿ ಶಿಲುಬೆಗಳು ಮತ್ತು ಶಿಲುಬೆಗೇರಿಸಲ್ಪಡುವಿಕೆಗಳನ್ನು

ಪ್ರಸ್ತಾಪಿಸಲ್ಪಟ್ಟಿರಲಿಲ್ಲ. ಶಿಲುಬೆಯು ಒಂದು ಅವಮಾನ, ಶ್ರಮೆ, ಮತ್ತು ಮರಣದ ಸಂಕೇತವಾಗಿತ್ತು; ಶಿಲುಬೆಗೇರಿಸಲ್ಪಡುವಿಕೆಯು ದಾಸರಿಗೆ ಮತ್ತು ಅತ್ಯಂಥ ಕೆಟ್ಟ ಅಪರಾಧಿಗಳಿಗೆ ಮೀಸಲಾಗಿರುತ್ತಿತ್ತು. Ciceroನು ಒಂದು ಸಾರಿ ಹೇಳಿದ್ದೇನೆಂದರೆ "'ಶಿಲುಬೆ' ಎಂಬ ಪದವನ್ನೇ ರೋಮನ್ ನಾಗರಿಕನಾದ ವ್ಯಕ್ತಿಯಿಂದ ಮಾತ್ರವೇ ಅಲ್ಲ ಆದರೆ ಆತನ ಆಲೋಚನೆಗಳು, ಕಣ್ಣುಗಳು, ಹಾಗೂ ಆತನ ಕಿವಿಗಳಿಂದ [ಸಹ] ತೆಗೆದುಹಾಕಲ್ಪಡಬೇಕು."[26] ಯೆಹೂದ್ಯರಿಗೆ ಯೇಸುವಿನ ಶಿಲುಬೆಯು "ಒಂದು ವಿಘ್ನ" ಮತ್ತು ಅನ್ಯಜನರಿಗೆ "ಹುಚ್ಚುತನ" ಆಗಿತ್ತಾದರೂ, ಪೌಲನ ಹೆಚ್ಚಳಕ್ಕೆ ಯೋಗ್ಯವಾದದ್ದೆಂದರೆ ಅದೊಂದೇ ಆಗಿತ್ತು. ಆತನಿಗಾದರೋ, ಅದು "ದೇವರ ಶಕ್ತಿಯೂ ದೇವರ ಜ್ಞಾನವೂ" ಆಗಿತ್ತು (1 ಕೊರಿಂಥ 1:23, 24).

ಈ ಪತ್ರಿಕೆಯಲ್ಲಿ ಶಿಲುಬೆಯ ಕುರಿತಾಗಿ ಪೌಲನ ಅಂತಿಮ ಮಾತುಗಳು ಮನಃಸೆಳೆಯುವಂತಿವೆ: **ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು, ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು** (2:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಪೊಸ್ತಲನ ಇಡೀ ಜೀವನವನ್ನು ಮಾತ್ರವಲ್ಲದೆ ಆತನ ಮರಣವನ್ನು ಸಹ ಸಾರಾಂಶಗೊಳಿಸುವದಕ್ಕೆ ಈ ಮಾತುಗಳನ್ನು ಬಳಸಬಹುದಾಗಿದೆ. ಗ್ರೀಕ್ ವಾಕ್ಯದಲ್ಲಿ, "ಅದರ ಮೂಲಕ" ಎಂಬುದನ್ನು ಅನುವಾದಿಸಿರುವ ಪದಗುಚ್ಛವು δι' οὗ (*di' hou*). ಸಂಬಂಧಿತ ಸರ್ವನಾಮವಾದ "ಅದರ" (*hou*) ಎಂಬುದನ್ನು "ಆತನ" ಎಂದು ಅನುವಾದಿಸಬಹುದಾಗಿದೆ. ಆ ರೀತಿಯಾಗಿರುವದಾದಲ್ಲಿ, ಪೂರ್ವಗಾಮಿ ಪದಪುಂಜವು "ಕ್ರಿಸ್ತನು" ಎಂದಾಗುವದು. ಈ ತಿಳುವಳಿಕೆಯು NJBಯಲ್ಲಿ ಬೆಂಬಲವನ್ನು ಹೊಂದಿರುತ್ತದೆ: ". . . ನಮ್ಮ ಕರ್ತನಾದ ಯೇಸು ಕ್ರಿಸ್ತನು, ಆತನ ಮೂಲಕವಾಗಿ ಲೋಕವು ನನ್ನ ಪಾಲಿಗೆ ಶಿಲುಬೆಗೆ ಹಾಕಿಸಿಕೊಂಡಿತು." J. B. Lightfootನು ಗಮನಕ್ಕೆ ತಂದದ್ದೇನೆಂದರೆ ಸರ್ವನಾಮವು "ಶಿಲುಬೆ"ಯನ್ನು ಸೂಚಿಸುವ ಸಾಧ್ಯತೆಯಿರುತ್ತದೆ. ಪೌಲನು ಹೀಗೆ ಹೇಳುತ್ತಿರುವಂತೆ ಆತನು ಕಲ್ಪಿಸಿಕೊಳ್ಳುತ್ತಾನೆ, "'ಕ್ರಿಸ್ತನ ಶಿಲುಬೆಯು ಆತನಂತೆಯೇ ನನ್ನ ಶಿಲುಬೆಗೇರಿಸಲ್ಪಡುವಿಕೆಗೆ ಸಾಧನ; ಯಾಕೆಂದರೆ ನಾನು ಆತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದೇನೆ' [2:20]." Lightfootನು ಇನ್ನೂ ಅಭಿಪ್ರಾಯ ಪಟ್ಟದ್ದೇನೆಂದರೆ ಸರ್ವನಾಮವು ಕ್ರಿಸ್ತನನ್ನು ಸೂಚಿಸಿದ್ದರೆ, ಒಂದು ಬೇರೆಯಾದ ಗ್ರೀಕ್ ಅನ್ವಯವನ್ನು ಎದುರು ನೋಡಲಾಗುತ್ತದೆ, ಉದಾಹರಣೆಗೆ ἐν ᾧ (*en hō*, "ಆತನಲ್ಲಿ") ಅಥವಾ σὺν ᾧ (*sun hō*, "ಆತನೊಂದಿಗೆ").[27]

**ವಚನ 15.** ಯೆಹೂದಿಕರಣಗೊಳಿಸುವವರ ಕುರಿತಾದ ತನ್ನ ಚರ್ಚೆಯನ್ನು ಪೌಲನು ಮುಕ್ತಾಯಗೊಳಿಸುತ್ತಿರುವ ವೇಳೆ, ಆತನು ಹೀಗೆ ಬರೆದನು, **ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು.** ಕೆಲವರಿಗಾದರೋ, ಈ ಹೇಳಿಕೆಯು ಅವಶ್ಯಕತೆಗೆ ಮೀರಿದ್ದೆಂದು ಕಾಣಿಸಬಹುದು. ಹೇಗೂ, "ಸುನ್ನತಿ" ಎಂಬ ಒಂದೇ ಪದದಲ್ಲಿ, ಗಲಾತ್ಯದಲ್ಲಿನ ಸಭೆಗಳಿಗೆ ಅಧಿಕ ತೊಂದರೆಯನ್ನುಂಟು ಮಾಡಿದ ನಿರ್ದಿಷ್ಟವಾದ ಕಿರಿಕಿರಿಯನ್ನುಂಟು ಮಾಡುವ ಸಂಗತಿ ಇತ್ತು. ಅದು ಶಿಷ್ಯರಲ್ಲಿ ವಿಭಜನೆಯನ್ನುಂಟು ಮಾಡಿತ್ತು ಮತ್ತು ಹೆಚ್ಚುಕಡಿಮೆ ಅಲ್ಲಿದ್ದ ಸಹೋದರರಲ್ಲಿನ ಪರಸ್ಪರ ಪ್ರೀತಿಯನ್ನೇ ನಾಶಮಾಡಿತ್ತು. ಆದದರಿಂದ, ಕೊನೆಯದಾಗಿ ಇನ್ನೊಂದು ಸಾರಿ ಅದನ್ನು ಪ್ರಸ್ತಾಪಿಸುವದು ಅವಶ್ಯಕವೆಂದು ಅಪೊಸ್ತಲನು ಭಾವಿಸಿಕೊಂಡನು. ಪತ್ರಿಕೆಯಲ್ಲಿ ಈ ಮುಂಚೆ, ಆತನು ಹೀಗೆ ಬರೆದಿದ್ದನು,

ನೋಡಿರಿ, ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ - ನೀವು

> ಸುನ್ನತಿಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ. ಸುನ್ನತಿಮಾಡಿಸಿಕೊಳ್ಳುವ ಪ್ರತಿಯೊಬ್ಬನಿಗೆ - ನೀನು ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಮಾಡುವ ಹಂಗಿನಲ್ಲಿದ್ದೀ ಎಂದು ತಿರಿಗಿ ಪ್ರಮಾಣವಾಗಿ ಹೇಳುತ್ತೇನೆ. ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದುಹೋದರು. ನಾವೋ ದೇವರಾತ್ಮನ ಮೂಲಕ ನಂಬಿಕೆಯಿಂದ ನೀತಿವಂತರಾಗುತ್ತೇವೆಂಬುವ ನಿರೀಕ್ಷೆ ಸಫಲವಾಗುವದೆಂದು ಎದುರುನೋಡುತ್ತೇವೆ. ಕ್ರಿಸ್ತ ಯೇಸುವಿನಲ್ಲಿರುವವರಿಗೆ ಸುನ್ನತಿಯಾದರೂ ಪ್ರಯೋಜನವಿಲ್ಲ, ಆಗದಿದ್ದರೂ ಪ್ರಯೋಜನವಿಲ್ಲ. ಪ್ರೀತಿಯಿಂದ ಕೆಲಸ ನಡಿಸುವ ನಂಬಿಕೆಯಿಂದಲೇ ಪ್ರಯೋಜನವಾಗಿದೆ (5:2-6).

ಸ್ವತಃ ಸುನ್ನತಿಯೇ ತಪ್ಪು ಎಂದಾಗಿರಲಿಲ್ಲ. ಪೌಲನು ತಾನೇ ಯುವಕನಾದ ತಿಮೊಥೆಯನಿಗೆ ಆತನ ಕುಟುಂಬದ ಪರಿಸ್ಥಿತಿಯ ಕಾರಣದಿಂದ ಸುನ್ನತಿ ಮಾಡಿಸಿದ್ದನು; ಆತನ ತಾಯಿಯು ಒಬ್ಬ ಯೆಹೂದ್ಯಳಾಗಿದ್ದಳು, ಮತ್ತು ಆತನ ತಂದೆ ಒಬ್ಬ ಗ್ರೀಕನು (ಅಪೊಸ್ತಲರ ಕೃತ್ಯಗಳು 16:1-3). ಬೇರೆ ಪ್ರಕರಣಗಳಲ್ಲಿರುವಂತೆಯೇ, ಪೌಲನು ತಿಮೊಥೆಯನನ್ನು ಸುವಾರ್ತಾ ಪ್ರವಾಸದ ತಂಡದಲ್ಲಿ ಸೇರಿಸಿಕೊಳ್ಳುತ್ತಿದ್ದದ ಕಾರಣ, ಆತನು ಕೇವಲ "ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂಬ" ಕಾರಣಕ್ಕಾಗಿ "ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿ" ಇರುವದಕ್ಕೆ ಅಪೇಕ್ಷಿಸುತ್ತಿದ್ದಾನಷ್ಟೆ (1 ಕೊರಿಂಥ 9:19-22). ಆತನು ಯೆಹೂದ್ಯರಿಗಾಗಲಿ ಅಥವಾ ಅನ್ಯಜನರಿಗಾಗಲಿ ಬೇಸರವನ್ನುಂಟು ಮಾಡದೆ ಇರಬೇಕೆಂದು ಬಯಸಿದ್ದನು.[28]

ಸುನ್ನತಿಯನ್ನು ಮಾಡಿಸಿಕೊಳ್ಳಬೇಡವೆಂದು ಪೌಲನು ಒಬ್ಬ ಯೆಹೂದ್ಯನನ್ನು ನಿಷೇಧಿಸಿದ ಕುರಿತಾಗಿ ನಮಗೆ ಯಾವ ದಾಖಲೆಯೂ ಇರುವದಿಲ್ಲ. ಹೇಗೂ, ಗಲಾತ್ಯದವರು "ಕರ್ಮಗಳಿಂದ ನೀತಿವಂತರಾಗಬೇಕೆಂದು" ಹಾಗೆ ಮಾಡಿಸಿಕೊಂಡರೆ (5:4), ಅವರಿಗೆ "ಕ್ರಿಸ್ತನಿಂದ . . . ಏನೂ ಪ್ರಯೋಜನವಿಲ್ಲ" (5:2), ಅವರು "ಧರ್ಮಶಾಸ್ತ್ರದಲ್ಲಿ ಹೇಳಿರುವದನ್ನೆಲ್ಲಾ ಮಾಡುವ ಹಂಗಿನಲ್ಲಿದ್ದಾರೆ" (5:3), ಅವರು "ಕ್ರಿಸ್ತನಿಂದ ಅಗಲಿ ಹೋದರು," ಮತ್ತು "ಕೃಪಾಶ್ರಯದೊಳಗಿಂದ ಬಿದ್ದುಹೋದರು" (5:4) ಎಂದು ಅವರಿಗೆ ಹೇಳಿದ್ದನು.

ಪೌಲನ ಸಂದೇಶವು ಅಪಾರ್ಥಕ್ಕೆ ಅವಕಾಶವಿಲ್ಲದ್ದು. ಎರಡು ಒಡಂಬಡಿಕೆಗಳಿಗೆ ಅಧೀನರಾಗಿ ಜೀವಿಸುವದು ಅಸಾಧ್ಯವಾಗಿರುತ್ತದೆ, ವಿಶೇಷವಾಗಿ ದೇವರ ದೃಷ್ಟಿಯಲ್ಲಿ ನೀತಿವಂತಿಕೆಯ ಲಕ್ಷಣವನ್ನು ನಿರೂಪಿಸುವದರಲ್ಲಿ ಪರಸ್ಪರ ನಾಟಕೀಯವಾಗಿ ವಿರುದ್ಧವಾಗಿರುವ ಎರಡು ಒಡಂಬಡಿಕೆಗಳ ವಿಷಯದಲ್ಲಿ ಅದು ಅಸಾಧ್ಯ. ಶಾರೀರಿಕ ಸುನ್ನತಿಯು ಮೊದಲನೆಯ ಒಡಂಬಡಿಕೆಯ ಗುರುತು ಆಗಿತ್ತು, ಅದು ಯಾವ ಮನುಷ್ಯನಿಂದಲೂ ಕೈಕೊಂಡು ನಡೆಯಲಾಗದ ಧರ್ಮಶಾಸ್ತ್ರದ ಒಡಂಬಡಿಕೆಯಾಗಿತ್ತು. ವಾಸ್ತವಿಕದಲ್ಲಿ, ಇದು ಎಲ್ಲಾ ಮನುಷ್ಯರಿಗೆ ದಂಡನೆಯ ತೀರ್ಪಿಗೆ ಒಳಪಡಿಸುವಂತಹ ಧರ್ಮಶಾಸ್ತ್ರವಾಗಿತ್ತು. ಹೊಸ ಒಡಂಬಡಿಕೆಯು ಅಂತಿಮವಾಗಿ ಕ್ರಿಸ್ತನ ನಂಬಿಗಸ್ತಿಕೆಯ ಮೇಲೆ ಆಧಾರಗೊಳ್ಳುವಂಥ ನಂಬಿಕೆಯ (πίστις, *pistis*) ಮುಖಾಂತರ ದೊರಕುವ ಕೃಪೆಯ ಒಡಂಬಡಿಕೆಯಾಗಿದೆ. ಪೌಲನು ಧೈರ್ಯದಿಂದ ಹೇಳಿದ್ದೇನೆಂದರೆ, "ನಾನಂತೂ ದೇವರಿಗಾಗಿ ಜೀವಿಸುವದಕ್ಕೋಸ್ಕರ ಧರ್ಮಪ್ರಮಾಣದ ಮೂಲಕವಾಗಿ ಧರ್ಮಪ್ರಮಾಣದ ಪಾಲಿಗೆ ಸತ್ತೆನು. ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ

ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (2:19, 20).

ಗಲಾತ್ಯ 5 ಮತ್ತು 6 ಅಧ್ಯಾಯಗಳಲ್ಲಿ ಪೌಲನು ಎಲ್ಲದಕ್ಕಿಂತಲೂ ಮುಖ್ಯವಾಗಿ ಒತ್ತು ಕೊಟ್ಟು ಹೇಳುವ ವಿಚಾರವು ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಕುರಿತಾಗಿದೆ - ಒಂದು "ನೂತನ ಸೃಷ್ಟಿಯಾದ" ಕ್ರೈಸ್ತನ ಕುರಿತಾಗಿದೆ. ಒಬ್ಬ ವ್ಯಕ್ತಿಯು ತನ್ನ ಪೂರ್ವದ, ಸ್ವತಃ ಎಣಿಸಿಕೊಂಡ ಸಾರ್ವಭೌಮತೆಯನ್ನು ತ್ಯಜಿಸಿ ಬಿಟ್ಟು ಯೇಸು ಕ್ರಿಸ್ತನ ಯಜಮಾನತ್ವಕ್ಕೆ ದೀನತೆಯಿಂದ ಮೊಣಕಾಲೂರುವ (ವಾಸ್ತವಿಕದಲ್ಲಿ ಹೃದಯವನ್ನು ಬಾಗಿಸುವಾಗ) ವೇಳೆ (ನೋಡಿರಿ ಫಿಲಿಪ್ಪಿ 2:9-11) ಒಂದು ತೀವ್ರವಾದ ರೂಪಾಂತರವು ಉಂಟಾಗುತ್ತದೆ. ಒಬ್ಬ ಪಶ್ಚಾತ್ತಾಪ ಪಟ್ಟಿರುವ ವಿಶ್ವಾಸಿಯು ಕ್ರಿಸ್ತನಲ್ಲಿ ನೂತನ ವ್ಯಕ್ತಿಯಾಗುತ್ತಾನೆ ಮತ್ತು ಆತನು "ನೀರಿನಿಂದಲೂ ಆತ್ಮನಿಂದಲೂ" (ಯೋಹಾನ 3:5) ಹೊಸದಾಗ ಹುಟ್ಟುವಾಗ ಆತ್ಮೀಕವಾಗಿ ಸುನ್ನತಿ ಮಾಡಿಸಿಕೊಂಡವನಾಗುವನು.[29] ಪೌಲನು ಕೊಲೊಸ್ಸೆಯಲ್ಲಿರುವ ಕ್ರೈಸ್ತರಿಗೆ ಅವರು "ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದ್ದರು" ಎಂದು ಬರೆದನು. ಅವರು "ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ." ಈ ಹೃದಯದಲ್ಲಾಗುವ ಸುನ್ನತಿಯು ಅವರು "ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ" ಸಂಭವಿಸಿತ್ತು (ಕೊಲೊ 2:6, 11-13). ಅಷ್ಟುಮಾತ್ರವಲ್ಲದೆ, ಪೌಲನು ರೋಮಾಪುರದ ಕ್ರೈಸ್ತರಿಗೆ ಅವರು "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡ" ವೇಳೆ ಮತ್ತು "ಆತನ ಮರಣದಲ್ಲಿ" ಪಾಲುಗಾರರಾಗಲಿ ದೀಕ್ಷಾಸ್ನಾನಮಾಡಿಸಿಕೊಂಡ ವೇಳೆ, ಅವರು "ಜೀವಿತರಾಗಿ ಎದ್ದು ಹೊಸಬರಾಗಿ ನಡಕೊಳ್ಳಬೇಕೆಂದು" ಎಬ್ಬಿಸಲ್ಪಟ್ಟರು ಎಂದು ಹೇಳಿದನು (ರೋಮಾ 6:3, 4). "ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" ಎಂದು ಆತನು ಬರೆಯುತ್ತಾನೆ (2 ಕೊರಿಂಥ 5:17).

ನಮ್ಮೊಳಗೆ ಯಾರು ಈ ಪ್ರಕ್ರಿಯೆಯನ್ನು ಹಾದುಹೋಗಿರುತ್ತೇವೋ ಅವರು "ದೇವರ ಹೊಸ ಇಸ್ರಾಯೇಲ್," ಅಂದರೆ ಸಭೆಯಲ್ಲಿ ಭಾಗವಾಗಿದ್ದೇವೆ (6:16). ಪೇತ್ರನು ಯಾವ ಪರಲೋಕದ, ಮಹಿಮೆಗೊಂಡ ರಾಜ್ಯದ ಬಗ್ಗೆ ಬರೆದನೋ ಅದರಲ್ಲಿ ಅಂತಿಮವಾಗಿ ಪ್ರವೇಶಿಸುವೆವೆಂಬ ದೇವರ ವಾಗ್ದಾನದಲ್ಲಿ ಸಂಭ್ರಮಿಸಬಹುದು: "ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ; ಅವುಗಳಲ್ಲಿ ನೀತಿಯು ವಾಸವಾಗಿರುವದು" (2 ಪೇತ್ರ 3:13).

**ವಚನ 16.** ಪೌಲನು **ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರಿಗೆ ಶಾಂತಿಯೂ ಕರುಣೆಯೂ ಆಗಲಿ** ಎಂದು ಆಶೀರ್ವದಿಸುವದು ಚೆನ್ನಾಗಿ ಪರಿಶೀಲಿಸದ, ಅಸಮಂಜಸವಾದ ಹಿಂದಾಲೋಚನೆ ಆಗಿರಲಿಲ್ಲ. ಬದಲಾಗಿ, "ಶಾಂತಿಯೂ ಕರುಣೆಯೂ" ಎಂಬ ಉಲ್ಲೇಖವು ಆರಂಭಿಕ ವಂದನೆಗಳನ್ನು ಪ್ರತಿಫಲಿಸುವದಕ್ಕೆ ಬಳಸಲ್ಪಟ್ಟಿತ್ತು, ಅಲ್ಲಿ ಪೌಲನು ತನ್ನ ಗಲಾತ್ಯದ ವಾಚಕರಿಗಾಗಿ "ಕೃಪೆಯೂ ಶಾಂತಿಯೂ" ಉಂಟಾಗಲಿ ಎಂದು ಹಾರೈಸಿದ್ದನು (1:3).

ಪೌಲನು "ಈ ಸೂತ್ರಕ್ಕೆ ಸರಿಯಾಗಿ ನಡೆಯುವವರೆಲ್ಲರು" ಎಂಬುವರನ್ನು ಉಲ್ಲೇಖಿಸಿದಾಗ, ನಿಯಮ-ಪಾಲನೆ ಎಂಬಂತಹದ್ದರ ಬಗ್ಗೆ ಮಾತಾಡಲಿಲ್ಲ, ಆದರೆ ಬದಲಾಗಿ ಕ್ರೈಸ್ತನು ಹೇಗೆ ಜೀವಿಸತಕ್ಕದ್ದು ಎಂಬುದರ ಬಗ್ಗೆ ಮಾತಾಡಿದನು. "ನಡೆಯುವ" ಎಂಬುದಕ್ಕಿರುವ ಗ್ರೀಕ್ ಪದವು στοιχέω (*stoicheō*) ಎಂಬುದು, ಇದು ಹೊಸ ಒಡಂಬಡಿಕೆಯೊಳಗೆ ಒಬ್ಬನು ಹೇಗೆ ಜೀವಿಸುತ್ತಾನೆ ಅಥವಾ ತನ್ನ ಜೀವತದಲ್ಲಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದನ್ನು ಸೂಚಿಸಲು

ಬಳಸಲ್ಪಟ್ಟಿದೆ. ವಾಸ್ತವಿಕದಲ್ಲಿ, ಪೌಲನು ಹಿಂದಿನ ಅಧ್ಯಾಯದಲ್ಲಿ ಇದನ್ನು ಈ ವಿಧದಲ್ಲಿ ಬಳಸಿದನು: "ನಾವು ಆತ್ಮನಿಂದ ಜೀವಿಸುತ್ತಿರಲಾಗಿ ಆತ್ಮನನ್ನನುಸರಿಸಿ ನಡೆಯೋಣ" (5:25). ಸಮನಾರ್ಥಕ ಪಡವಾದ περιπατέω (*peripateō*) ಎಂಬುದು ಹಿಂದಿನ ಅಧ್ಯಾಯದಲ್ಲಿ ಕಾಣಿಸಿಕೊಳ್ಳುತ್ತದೆ: "ನಾನು ಹೇಳುವದೇನಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ [*peripateō*]; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವದಿಲ್ಲ" (5:16).

ಪೌಲನು "ಸೂತ್ರ" ಎಂಬ ಪದವನ್ನು ಬಳಸಿದ್ದರ ತಾತ್ಪರ್ಯವೇನಾಗಿತ್ತು? "ಸೂತ್ರ" ಎಂಬುದಕ್ಕಿರುವ (κανών, *kanōn*) ಎಂಬ ಗ್ರೀಕ್ ಪದವು ಮೂಲತಃ ಒಂದು "ಅಳತೆ ಕೋಲು" ಸೂಚಿಸುವದಾಗಿತ್ತು, ಆದರೆ ಅದು ಅನಂತರದಲ್ಲಿ ಒಂದು "ನಡವಳಿಕೆಯ ಸೂತ್ರ" ಅಥವಾ ಒಂದು "ತೀರ್ಪಿನ ಮಾನದಂಡ" ಎಂದು ಸೂಚಿಸುವದಾಗಿ ಬದಲಾಗಿತ್ತು.[30] ಗಲಾತ್ಯದ ಕ್ರೈಸ್ತರು ಯಾವ "ಸೂತ್ರ" ಅಥವಾ "ಮಾನದಂಡ"ವನ್ನು ಅನುಸರಿಸಿ ಜೀವಿಸಬೇಕೆಂದು ಪೌಲನ ಬಯಕೆಯಾಗಿತ್ತು? "ಈ ಸೂತ್ರ" ಎಂಬುದು ಹಿಂದಿನ ವಚನದಲ್ಲಿರುವ ಹೇಳಿಕೆಯೇ ಆಗಿರುತ್ತದೆಂದು ಕೆಲವರು ಭಾವಿಸುತ್ತಾರೆ: "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು" (6:15). ಇನ್ನು ಕೆಲವರು ತಕ್ಷಣದಲ್ಲಿ ಇರುವಂಥ ಸನ್ನಿವೇಶದಿಂದ ಹೆಚ್ಚುವರಿ ವಿವರಗಳನ್ನು ಅದರಲ್ಲಿ ಸೇರ್ಪಡೆಗೊಳಿಸುತ್ತಾರೆ. ಆದದರಿಂದ, "ಈ ಸೂತ್ರ" ಎಂಬುದನ್ನು ಈ ಕೆಳಗಿನ ವಿಧದಲ್ಲಿ ಸಾರಾಂಶಗೊಳಿಸಬಹುದು: ಒಬ್ಬನು ಶಿಲುಬೆಯ ಮೇಲಿನ ಯೇಸುವಿನ ಯಜ್ಞದಲ್ಲಿ ವಿಶ್ವಾಸಿಸಬೇಕು, ಅದು ಹೊಸ ಸೃಷ್ಟಿಯನ್ನು ಸಾಧ್ಯಗೊಳಿಸುತ್ತದೆ, ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಶಾರೀರಿಕ ಸುನ್ನತಿಯು ಅಪ್ರಸ್ತುತವಾದದ್ದು (6:12-15). ಈ ಮಾನದಂಡವನ್ನು ಅನುಸರಿಸುವವರು "ಆತ್ಮನಿಂದ ನಡಿಸಿಕೊಳ್ಳುವವ" ಮತ್ತು "ನೇಮನಿಷ್ಠೆಗಳಿಗೆ ಅಧೀನರಲ್ಲ" (5:18).

ಪೌಲನು **ದೇವರ ಇಸ್ರಾಯೇಲ್ಯರಿಗೆ** ಆಶೀರ್ವಾದ ಉಂಟಾಗಲಿ ಎಂದು ಹೇಳಿದಾಗ ಯಾರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನು? ಈ ಪ್ರಶ್ನೆಗೆ ನೀಡುವ ಉತ್ತರಗಳನ್ನು ಕೆಲವು ವ್ಯಾಖ್ಯಾನಕಾರರು ಸ್ಪಷ್ಟವಾಗಿರುವದಿಲ್ಲ. ಅವರು ನಿಖರತೆಯಿಲ್ಲದಿರುವದಕ್ಕೆ ಭಾಗಶಃ ಕಾರಣವು ಏನೆಂದರೆ, ತನ್ನ ಆಶೀರ್ವಾದಗಳನ್ನು ನುಡಿಯುವ ವೇಳೆ, ಅಪೊಸ್ತಲನು καί (*kai*) ಎಂಬ ಸಂಬಂಧಾವ್ಯಯದ ಮೂಲಕ ಎರಡು ಬಣ್ಣನೆಗಳನ್ನು ಒಂದಾಗಿ ಕೂಡಿಸುತ್ತಾನೆ ಎಂಬುದೆ, ಅದು ಸಾಮಾನ್ಯವಾಗಿ "ಮತ್ತು" ಎಂದು ಅನುವಾದಿಸಲ್ಪಡುತ್ತದೆ. NASBಯಲ್ಲಿ ಹೀಗೆ ಇರುತ್ತದೆ, "ಈ ಸೂತ್ರದ ಮೇಲೆ ನಡೆಯುವವರ ಮೇಲೆ ಶಾಂತಿಯೂ ಕರುಣೆಯೂ ಇರಲಿ, *ಮತ್ತು* ದೇವರ ಇಸ್ರಾಯೇಲ್ಯರ ಮೇಲೆ ಇರಲಿ" (ಒತ್ತಿ ಹೇಳಿದ್ದು ನನ್ನದು).[31] ವಾಕ್ಯಭಾಗವನ್ನು ಈ ವಿಧದಲ್ಲಿ ಅರ್ಥಮಾಡಿಕೊಳ್ಳುವವರಾಗಿ, ಪೌಲನು ಒಂದು ಗುಂಪಿನ ಬದಲಾಗಿ ಎರಡು ಬೇರೆ ಬೇರೆ ಗುಂಪುಗಳನ್ನು ಸೂಚಿಸಿ ಹೇಳುತ್ತಿದ್ದಾನೆಂದು ಕೆಲವರು ಯೋಚಿಸುತ್ತಾರೆ.

ಹೇಗೂ, *kai* ಎಂಬ ಸಂಬಂಧಾವ್ಯಯವು ಒಂದು ಸರಳವಾದ ಸಂಬಂಧಗೊಳಿಸುವದಕ್ಕಿಂತಲೂ ಇನ್ನು ಅನೇಕ ವಿಧಗಳಲ್ಲಿ ಕೆಲಸ ಮಾಡುತ್ತದೆ. ಈಗಿನ ಪ್ರಕರಣದಲ್ಲಿ, ವ್ಯಾಕರಣಕಾರರು "ಅರ್ಥವಿವರಕ *ಕಾಯ್*" ಅಥವಾ "ವಿವರಣಾತ್ಮಕ *kai*" ಎಂದು ಕರೆಯುವಂತದ್ದರ ಕುರಿತು ನಾವು ಚರ್ಚಿಸುತ್ತಿದ್ದೇವೆ. ಇದರ ಸರಳವಾಗಿ "ಅಂದರೆ" ಎಂಬ ಅರ್ಥವನ್ನು ಕೊಡುತ್ತದಷ್ಟೆ, ಹೀಗೆ ಸಂಬಂಧಾವ್ಯಯದ ನಂತರದಲ್ಲಿ ಬರವ ಪದವು ಅಥವಾ ಪರಿಚ್ಛೇದವು ಅದಕ್ಕೆ ಮುಂಚಿನದ್ದರ ಅರ್ಥವನ್ನು ವಿವರಿಸುವದಾಗಿರುತ್ತದೆ.[32] ಈ *kai* ಬಳಕೆಯ

ಬಗ್ಗೆ ಅರ್ಥಮಾಡಿಕೊಂಡರೆ, ಪೌಲನು ಉಲ್ಲೇಖ ಮಾಡಿದ್ದು ಸಭೆಯ ಕುರಿತು, ಅಂದರೆ ದೇವರ ಆತ್ಮೀಕ ಇಸ್ರಾಯೇಲಿನ ಕುರಿತು ಎಂಬುದು ಸ್ಪಷ್ಟಗೊಳ್ಳುತ್ತದೆ. "ದೇವರ ಇಸ್ರಾಯೇಲ್ಯರು" ಎಂಬುದರಲ್ಲಿ ನೀರಿನಿಂದಲೂ ಆತ್ಮನಿಂದಲೂ ಹುಟ್ಟಿರುವವರೆಲ್ಲರೂ - ಅವರು ಯೆಹೂದ್ಯರಾಗಲಿ ಅಥವಾ ಗ್ರೀಕರಾಗಲಿ, ದಾಸರಾಗಲಿ ಅಥವಾ ಸ್ವತಂತ್ರರಾಗಲಿ, ಪುರುಷರಾಗಲಿ ಅಥವಾ ಹೆಂಗಸರಾಗಲಿ - ಸೇರಿರುತ್ತಾರೆ. ಇವರು "ನೀವು ಕ್ರಿಸ್ತನವರಾಗಿದ್ದಾರೆ" ಮತ್ತು "ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದಾರೆ" (3:26-29).

*Kai* ಎಂಬುದು "ಮತ್ತು" ಎಂದಾಗಿರುತ್ತದೆಂಬ ಪ್ರಕರಣವನ್ನು ಚರ್ಚಿಸಿದ ಬಳಿಕ, R. Alan Coleನು ವಾದಿಸಿದ್ದೇನೆಂದರೆ "ದೇವರ ಇಸ್ರಾಯೇಲ್ಯರು" ಎಂಬುದನ್ನು ಸಭೆ ಎಂಬುದಾಗಿ ಅರ್ಥಮಾಡಿಕೊಳ್ಳತಕ್ಕದ್ದು. ಆತನು ಗಮನಕ್ಕೆ ತಂದದ್ದೇನೆಂದರೆ *kai* ಎಂಬುದನ್ನು "ಸಹ" ಎಂಬುದಕ್ಕೆ ಬದಲಾಗಿ "ಮತ್ತು" ಎಂದು ಅನುವಾದಿಸುವದಾದಲ್ಲಿ, ಪೌಲನು ದೇವರ ರಾಜ್ಯದೊಳಗೆ ಎರಡು ಭಿನ್ನ ಗುಂಪುಗಳು ಸಹಬಾಳ್ವೆ ನಡಿಸುತ್ತಿರುವದನ್ನು - "ಈ ಸೂತ್ರಕ್ಕೆ ಸರಿಯಾಗಿ ನಡೆಯುವವರು" (6:15ರಲ್ಲಿ ತಿಳಿಸಲಾಗಿರುವ ತತ್ವ) ಮತ್ತು ಅದಕ್ಕೆ ಸರಿಯಾಗಿ ನಡೆಯದವರು (ಹಳೆಯ ಒಡಂಬಡಿಕೆಯ "ಇಸ್ರಾಯೇಲ್ಯರು") - ಒಪ್ಪಿಕೊಳ್ಳುತ್ತಿದ್ದಾನೆ ಎಂದಾಗುತ್ತದೆ. ಇದು ಸತ್ಯವಾಗಿರಲು ಸಾಧ್ಯವಿಲ್ಲ, ಯಾಕೆಂದರೆ 6:15ರ ತತ್ವವನ್ನು ಅನುಸರಿಸಿ ನಡೆಯುವದಕ್ಕೆ ನಿರಾಕರಿಸುವವರು ಸ್ವಯಂಚಾಲಿತವಾಗಿ ತಮ್ಮನ್ನು ಆತನ "ಶಾಂತಿಯೂ ಕರುಣೆಯೂ" ಹೊಂದುವಂಥ ಆತ್ಮೀಕ ಇಸ್ರಾಯೇಲ್ಯರೊಳಗಿಂದ ಹೊರಗಿಟ್ಟುಕೊಳ್ಳುವರು. Coleನು ಇನ್ನೂ ವಿವರಿಸಿದ್ದೇನೆಂದರೆ, ಯೆಹೂದ್ಯ ಕ್ರೈಸ್ತರಿಗೆ ದೇವರ ರಾಜ್ಯದೊಳಗೆ ಅನ್ಯಜನರ ಪಕ್ಕದಲ್ಲಿ ಸ್ಥಳವಿತ್ತಾದರೂ, ಅವಿಶ್ವಾಸಿಗಳಿಗೆ (ಅವರು ಯೆಹೂದ್ಯರಾಗಿರಬಹುದು ಅಥವಾ ಅನ್ಯಜನರಾಗಿರಬಹುದು) ಯಾವ ಸ್ಥಳವೂ ಇರುವದಿಲ್ಲ. ಅಷ್ಟುಮಾತ್ರವಲ್ಲದೆ, ಯೆಹೂದಿಕರಣಗೊಳಿಸುವವರು ತಮ್ಮನ್ನು ಆತ್ಮೀಕ ಇಸ್ರಾಯೇಲ್ಯರೊಳಗಿಂದ ಹೊರಗಿಟ್ಟುಕೊಂಡಿದ್ದರು, ಯಾಕೆಂದರೆ ಅವರು 6:15ರಲ್ಲಿ ಸ್ಥಿರಪಡಿಸಲ್ಪಟ್ಟಿರುವ ತತ್ವವನ್ನು ಅನುಸರಿಸದವರಾಗಿದ್ದರು (ನೋಡಿರಿ ಫಿಲಿಪ್ಪಿ 3:2, 3).[34]

"ದೇವರ ಇಸ್ರಾಯೇಲ್ಯರು" ಎಂಬುದು ಸಭೆಗೆ ಸಮಾನವಾಗಿದೆ ಎಂಬ ಅರ್ಥನಿರೂಪಣೆಯು ಕ್ರಿ.ಶ. ಎರಡನೆಯ ಶತಮಾನದಷ್ಟು ಹಿಂದಕ್ಕೆ ಸಾಗುವದಾಗಿದೆ. ನಂಬಿಕೆಯಿಲ್ಲದ ಯೆಹೂದ್ಯರೊಂದಿಗೆ ತನ್ನ ಸಂವಾದದಲ್ಲಿ, Justin Martyrನು ಬರೆದದ್ದೇನೆಂದರೆ "ನಿಜವಾದ ಆತ್ಮೀಕ ಇಸ್ರಾಯೇಲ್ಯ"ವು "ಈ ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನ ಮುಖಾಂತರವಾಗಿ ದೇವರ ಬಳಿಗೆ ನಡಿಸಲ್ಪಟ್ಟಿರುವವರನ್ನು" ಒಳಗೊಂಡಿರುತ್ತದೆ.[35] ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿನ ಗಲಾತ್ಯದವರ ಕುರಿತು ವ್ಯಾಖ್ಯಾನಿಸುತ್ತಾ, John Chrysostomನು ಇದೇ ರೀತಿಯ ಸಂಬಂಧವನ್ನು ಕಲ್ಪಿಸುತ್ತಾನೆ: "ಈ ಸಂಗತಿಗಳನ್ನು [ಕ್ರಿಸ್ತನಲ್ಲಿರುವ ಕೃಪೆಯ ಹೊಸ ಕಾರ್ಯಗಳು] ಅನುಸರಿಸುವವರು ಶಾಂತಿಯನ್ನು ಮತ್ತು ಬಾಂಧವ್ಯವನ್ನು ಅನುಭವಿಸುವರು, ಮತ್ತು ಸೂಕ್ತವಾಗಿ 'ಇಸ್ರಾಯೇಲ್' ಹೆಸರಿನಿಂದ ಕರೆಯಲ್ಪಡಬಹುದಾಗಿದೆ."[36]

ಸಭೆಯನ್ನು "ದೇವರ ಇಸ್ರಾಯೇಲ್ಯರು" ಎಂದು ಕರೆಯುವ ಮೂಲಕ, ಪೌಲನು ಕ್ರಿಸ್ತನ ಮೂಲಕವಾಗಿ ಒಂದು ಹೊಸ ಜನಾಂಗವನ್ನು ಸೃಷ್ಟಿಸುವದರಲ್ಲಿ ದೇವರಿಗಿದ್ದ ಉದ್ದೇಶವನ್ನು ತೋರಿಸಿ ಕೊಟ್ಟನು.[37] ಈ ಭಾವನೆಯು ಯೆಹೂದಿ ನಾಯಕರಿಗೆ ಹೇಳಲ್ಪಟ್ಟ ಯೇಸುವಿನ ಪ್ರವಾದನೆಯೊಂದಿಗೆ ಸಂಬಂಧ ಪಡುವದಾಗಿದೆ: "ಆದದರಿಂದ ದೇವರರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು" (ಮತ್ತಾಯ 21:43). ಪೌಲನ ವಿಧದಂತೆಯೇ ಇರುವ ಒಂದು ವಿಧದಲ್ಲಿ, ಹೊಸ ಒಡಂಬಡಿಕೆಯ ಲೇಖಕರು ಈ ಹಿಂದೆ

ಇಸ್ರಾಯೇಲ್ಯರಿಗೆ ಅನ್ವಯವಾಗಿದ್ದಂಥ ಪದಗಳಿಂದ ಸಭೆಯನ್ನು ಬಣ್ಣಿಸಿರುತ್ತಾರೆ. ಉದಾಹರಣೆಗೆ, ಪೇತ್ರನು ಕ್ರೈಸ್ತರಿಗೆ ಹೀಗೆ ಹೇಳಿದನು, "ನೀವಾದರೋ . . . ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" (1 ಪೇತ್ರ 2:9). ಈ ಬಣ್ಣನೆಗಳನ್ನು ವಿಮೋಚನಕಾಂಡ 19:5, 6ರಿಂದ ಎರವಲು ಪಡೆಯಲಾಗಿದೆ, ಅಲ್ಲಿ ದೇವರು ಸೀನಾಯಿ ಪರ್ವತದಲ್ಲಿ ಇಸ್ರಾಯೇಲ್ಯರೊಂದಿಗೆ ಹಳೆಯ ಒಡಂಬಡಿಕೆಯನ್ನು ಮೋಶೆಯ ಮೂಲಕವಾಗಿ ಸ್ಥಿರಪಡಿಸಿಕೊಂಡನು.

ಪೇತ್ರನು ತನ್ನ ವಾಚಕರನ್ನು "ಪೊಂತ ಗಲಾತ್ಯ ಕಪ್ಪದೋಕ್ಯ ಆಸ್ಯ ಬಿಥೂನ್ಯ ಎಂಬ ಸೀಮೆಗಳಲ್ಲಿ *ಚದರಿರುವಂಥ* ಪ್ರವಾಸಿಗಳಾದ ದೇವಜನರಿಗೆ" ಎಂದು ಕರೆದನು (1 ಪೇತ್ರ 1:1; ಒತ್ತಿ ಹೇಳಿದ್ದು ನನ್ನದು). ಅದರ ಜೊತೆಗೆ, ಯಾಕೋಬನು ತನ್ನ ಯೆಹೂದಿ ಶ್ರೋತೃಗಳನ್ನು "ಅನ್ಯದೇಶಗಳಲ್ಲಿ *ಚದರಿರುವ* [ಇಸ್ರಾಯೇಲ್] ಹನ್ನೆರಡು ಕುಲದವರಿಗೆ" ಎಂದು ಕರೆದನು (ಯಾಕೋಬ 1:1; ಒತ್ತಿ ಹೇಳಿದ್ದು ನನ್ನದು). "ಚದುರಿರುವ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (διασπορά, *diaspora*) ಫಿಲಿಷ್ಟಿಯದ ಹೊರಗಡೆಯಲ್ಲಿ ಜೀವಿಸುತ್ತಿದ್ದ ಯೆಹೂದ್ಯರನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು. ಇದು ಹೊಸ ಒಡಂಬಡಿಕೆಯೊಳಗೆ ಈ ಅರ್ಥದೊಂದಿಗೆ "ಗ್ರೀಕರೊಳಗೆ ಚದರಿಕೊಂಡಿರುವ" ಎಂಬ ಪದಗುಚ್ಛದಲ್ಲಿ ಒಂದು ಸಾರಿ ಕಾಣಿಸಿಕೊಳ್ಳುತ್ತದೆ (ಯೋಹಾನ 7:35).

## "ನಾನೊಬ್ಬ ಅಪೊಸ್ತಲನು ಮತ್ತು ಕ್ರಿಸ್ತನ ಸೇವಕನು!" (6:17)

**17ಇನ್ನು ಮೇಲೆ ಯಾರೂ ನನ್ನನ್ನು ತೊಂದರೆಪಡಿಸಬಾರದು, ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ.**

**ವಚನ 17. *ಇನ್ನು ಮೇಲೆ*** (τοῦ λοιποῦ, *tou loipou* ಎಂಬುದನ್ನ "ಅಂತಿಮವಾಗಿ" (NIV1984) ಎಂದು ಅಥವಾ "ಮುಕ್ತಾಯಗೊಳಿಸುತ್ತಾ" (GNT) ಎಂದು ಅನುವಾದಿಸಬಹುದು. ಹೀಗಿರುವದಾದಲ್ಲಿ, ಪೌಲನು ತನ್ನ ಪತ್ರಿಕೆಯ ಮುಕ್ತಾಯದ ಮೂನ್ಸೂಚನೆಯನ್ನೇ ಇಲ್ಲಿ ನೀಡುತ್ತಿದ್ದಾನೆಂದಾಗಿರಬಹುದು. ಹಾಗಿದ್ದರೂ, ಬಹುಪಾಲು ಆಂಗ್ಲ ಆವೃತ್ತಿಗಳು ಈ ಪದಗುಚ್ಛವನ್ನು NASBಯಲ್ಲಿರುವ ರೀತಿಗೆ ಹೋಲುವಂತೆಯೇ ಅನುವಾದಿಸುತ್ತವೆ: "ಇನ್ನು ಮೇಲೆ" ಎಂಬುದು ಸರಿಯಾಗಿರುವದಾದರೆ, ತನ್ನ ವಿರೋಧಿಗಳು ಆತನಿಗೆ ವಿರುದ್ಧವಾಗಿ ಮಾಡುತ್ತಿದ್ದ ಆರೋಪಗಳನ್ನು ತಕ್ಷಣವೇ ನಿಲ್ಲಿಸಬೇಕೆಂಬುದು ಅಪೊಸ್ತಲನ ಬಯಕೆಯಾಗಿತ್ತು.

ಪೌಲನು ಹೀಗೆ ಹೇಳಿದನು, **ಯಾರೂ ನನ್ನನ್ನು ತೊಂದರೆಪಡಿಸಬಾರದು.** ಇಲ್ಲಿ ಯೆಹೂದ್ಯರ ಚಟುವಟಿಕೆಗಳ ಸೂಚಿಸಿ ಹೇಳಲಾಗಿರಬೇಕು, ಅವರು ಅಪೊಸ್ತಲನು ಮಾಡಿದ ಸೇವೆಯನ್ನು ಹೆಚ್ಚು ಕಷ್ಟಕರ ಹಾಗೂ ಒತ್ತಡದಿಂದ ಕೂಡಿರುವಂತೆ ಕಾರಣವಾಗಿದ್ದರು. ಅವರು ಆತನ ಮೇಲೆ ಸುಳ್ಳಾಗಿ ಅರೋಪ ಮಾಡಿದ್ದರು (ನೋಡಿರಿ 1:10-12), ಆತನ ವಿರುದ್ಧ ಕುತಂತ್ರಗಳನ್ನು ಬಳಸಿದರು (2:4), ಮತ್ತು ಪೌಲನು ಸ್ಥಾಪಿಸಿದ್ದ ಸಭೆಗಳನ್ನು ಅವರ ಸುಳ್ಳು ಸಿದ್ಧಾಂತದ ಬೋಧನೆಯ ಮೂಲಕ ಹೊಲಸುಗೊಳಿಸಿದ್ದರು (ನೋಡಿರಿ 4:11). ಅವರ ವಂಚನೆಯ ಚಟುವಟಿಕೆಗಳು ನಿಂತುಹೋಗತಕ್ಕದ್ದೆಂಬುದು ಆತನ ಬಯಕೆಯಾಗಿತ್ತು.

ಸ್ಫುಟವಾದ ಆದಾಗ್ಯೂ ಅಸಹಜವಾಗಿದ್ದ ಭಾಷೆಯನ್ನು ಬಳಸುವವನಾಗಿ, ಪೌಲನು ಏಕೆ ಯೆಹೂದಿಕರಣಗೊಳಿಸುವವರು ತಮ್ಮ ಹಾನಿಕರವಾದ ಕೃತ್ಯಗಳನ್ನು ನಿಲ್ಲಿಸಬೇಕೆಂಬುದಕ್ಕೆ ಕಾರಣವನ್ನು ತಿಳಿಸುತ್ತಾನೆ: **ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ.** ಪೌಲನು

ಸ್ವಾನುಕಂಪ ಪಟ್ಟುಕೊಳ್ಳುವದರ ಬದಲಾಗಿ, ಆದುಕೊಳ್ಳಲ್ಪಟ್ಟ ಒಬ್ಬ ಅಪೊಸ್ತಲನಾಗಿ ತಾನು ಯೇಸುವಿನ ಸಂಗಡ ಹೊಂದಿರುವ ಸಂಬಂಧದ ಕುರಿತು ಒತ್ತಿ ಹೇಳುತ್ತಿದ್ದಾನೆ. Richard N. Longeneckerನು ಹೀಗೆ ವಿವರಿಸಿದನು,

> ತಾನು ಕ್ರಿಸ್ತನ "ಮುದ್ರೆ ಹೊಂದಿದ ಮನುಷ್ಯ"ನಾದ್ದರಿಂದ ತನಗೆ ಇನ್ನು ಮೇಲೆ ತೊಂದರೆ ಕೊಡಕೂಡದೆಂದು ಎಚ್ಚರಿಸುತ್ತಾನೆ, ಆ ಬರೆಗಳು ಸಕಾರಾತ್ಮಕವಾಗಿ, ಆತನು ಕ್ರಿಸ್ತನ ಒಡೆಯತ್ವದಲ್ಲಿ ಹಾಗೂ ಭದ್ರತೆಯಲ್ಲಿ ಇದ್ದಾನೆಂಬುದನ್ನು ಸೂಚಿಸುತ್ತದೆ, ಮಾತ್ರವಲ್ಲದೆ ನಕಾರಾತ್ಮಕವಾಗಿ, ತನಗೆ ಕಿರುಕಳ ಕೊಡುವವರು ಕ್ರಿಸ್ತನಿಂದ ನ್ಯಾಯತೀರ್ಪಿಗೂ ಪ್ರತೀಕಾರಕ್ಕೂ ಗುರಿಯಾಗುವರು ಎಂಬುದೆ.[38]

ಒಂದು ವಿಧದಲ್ಲಿ, "ಯೇಸುವಿನ ಮುದ್ರೆಗಳು" ಎಂಬ ಪದಗುಚ್ಛವು ರೂಪಕೋಕ್ತಿಯಲ್ಲಿ ಕ್ರಿಸ್ತನ "ದಾಸನು" (δοῦλος, *doulos*) ಅಥವಾ "ಗುಲಾಮ" ಎಂಬ ಆತನ ಗುರುತನ್ನು ಸೂಚಿಸುತ್ತದೆ (ರೋಮಾ 1:1). ಪ್ರಾಚೀನ ಜಗತ್ತಿನಲ್ಲಿ ಒಬ್ಬ ಗುಲಾಮನು ಆತನ ಯಜಮಾನನ ಮುದ್ರೆಯನ್ನು ಬರೆಯ ಮೂಲಕ ಆತನ ಕೈ ಅಥವಾ ಹಣೆಯ ಮೇಲೆ ಹಾಕುವದು ಸರ್ವಸಾಮಾನ್ಯವಾಗಿತ್ತು.[39] ಹೇಗೂ, ಇನ್ನೊಂದು ಅರ್ಥದಲ್ಲಿ, ಭಾಷೆಯು ಅತ್ಯಂತ ಅಕ್ಷರಶಃ ಆಗಿರುತ್ತದೆ; ಪೌಲನು ಕ್ರಿಸ್ತನಿಗೆ ಸೇವೆ ಸಲ್ಲಿಸುವ ವೇಳೆ ಘೋರವಾಗಿ ಗಾಯಗೊಂಡಿದ್ದನು. ಯೇಸುವು ವೈಯಕ್ತಿಕವಾಗಿ ಆತನ ಮೇಲೆ ದಾಸನ ಮುದ್ರೆಯನ್ನು ಹಾಕಿರಲಿಲ್ಲ, ಹಾಗಿದ್ದಾಗ್ಯೂ ಆತನ ದೇಹದ ಮೇಲಿರುವ ಗಾಯದ ಗುರುತುಗಳು ಅವರ ಮಧ್ಯದಲ್ಲಿದ್ದ ಯಜಮಾನ-ದಾಸನ ಸಂಬಂಧಕ್ಕೆ ಸಾಕ್ಷಿಯಾಗಿದ್ದವು. ಹಿಂಸೆಯನ್ನು ಸಹಿಸಿಕೊಳ್ಳುವ ಮೂಲಕ, ಪೌಲನು ಹಲವಾರು ಸಂದರ್ಭಗಳಲ್ಲಿ ಕ್ರಿಸ್ತನ ಶ್ರಮೆಗಳಲ್ಲಿ ಭಾಗಿಯಾಗಿದ್ದನು (2 ಕೊರಿಂಥ 4:10; 6:4, 5; 11:23–28). ಗಲಾತ್ಯದವರಿಗೆ ಬರೆದ ಪತ್ರಿಕೆಯು ಮೊದಲನೆಯ ಸುವಾರ್ತಾ ಪ್ರಯಾಣ ಮುಗಿದ ತಕ್ಷಣದಲ್ಲಿ ಬರೆಯಲ್ಪಟ್ಟಿರುವದಾದರೆ (ನೋಡಿರಿ ಗಲಾತ್ಯ 1:6), ಪೌಲನು ಲುಸ್ತ್ರದಲ್ಲಿ ಕಲ್ಲೆಸೆಯಲ್ಪಟ್ಟ ಕಾರಣದಿಂದಾದ ಗಾಯದ ಗುರುತುಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಹೇಳಿರಬಹುದಾಗಿದೆ. ಆತನು ಮತ್ತು ಬಾರ್ನಬ ಗಲಾತ್ಯದ ಪ್ರಾಂತ್ಯದುದ್ದಕ್ಕೂ ಬಂದ ದಾರಿಯಲ್ಲಿ ಹಿಂದಕ್ಕೆ ಪ್ರಯಾಣಿಸಿದ್ದರಾದ್ದರಿಂದ, ಸಹೋದರರು ಆತನ ಶ್ರಮೆಯ ಪುರಾವೆಯನ್ನು ಕಂಡಿರಬಹುದಾಗಿದೆ (ಅಪೊಸ್ತಲರ ಕೃತ್ಯಗಳು 4:19–28).

"ಮುದ್ರೆಗಳು" ಎಂಬುದು ಗ್ರೀಕ್ ಪದವಾದ στίγμα (*stigma*) ಎಂಬುದರಿಂದ ಬರುತ್ತದೆ, ಅದು ಆಂಗ್ಲದಲ್ಲಿ ಅದೇ ಅಕ್ಷರಗಳೊಂದಿಗೆ ಕಾಣಿಸಿಕೊಳ್ಳುತ್ತದೆ. ಆಂಗ್ಲದ "ಸ್ಟಿಗ್ಮಾ" ಎಂಬ ಪದವನ್ನು "ಒಂದು ಬಿಸಿಯಾದ ಲೋಹದಿಂದ ಉಂಟಾಗಿರುವ ಕಲೆ," "ಒಂದು ಸುಡು ಮುದ್ರೆ," "ಒಂದು ಅವಮಾನ ಅಥವಾ ಅನುಮಾನದ ಗುರುತು," "ಒಂದು ಗುರುತಿಸುವ ವ್ಯಾಧಿ," ಮತ್ತು "ಒಂದು ವ್ಯಾಧಿಯ ನಿರ್ದಿಷ್ಟವಾದ ಲಕ್ಷಣ" ಎಂಬುದಾಗಿ ಅರ್ಥನಿರೂಪಣೆ ಮಾಡಲ್ಪಟ್ಟಿರುತ್ತದೆ. ಒಂದು ಕಳಂಕವು ವೈಶಿಷ್ಟ್ಯವಾಗಿ ಅವಮಾನದ ಸೂಚ್ಯಾರ್ಥಗಳನ್ನು ಹೊಂದಿರುತ್ತದೆ, ಅದು ಜನಾಂಗೀಯತೆ, ಸಾಮಾಜಿಕ ಸ್ಥಾನ, ವ್ಯಾಧಿ ಅಥವಾ ಒಬ್ಬನ ಗತಕಾಲದ ಕೃತ್ಯಗಳ ಮೇಲಾಗಲಿ ಆಧಾರವಾಗಿರಬಹುದಾಗಿದೆ. ಪೌಲನು ತನ್ನನ್ನು ಯೇಸುವಿನೊಂದಿಗೆ ಸಂಬಂಧಗೊಳಿಸಿದ ಮುದ್ರೆಗಳ ವಿಷಯದಲ್ಲಿ ಬೇರೆ ದೃಷ್ಟಿಕೋನವನ್ನು ಹೊಂದಿದ್ದನು. ಇತರರು ಅವುಗಳಿಗೆ ಜಿಗುಪ್ಸೆ ತೋರಿಸಿರಬಹುದಾದರೂ, ಆತನು ಕ್ರಿಸ್ತನ ದಾಸನಾಗಿ ಮಾಡಿದ ನಂಬಿಗಸ್ತಿಕೆಯ ಸೇವೆಗೆ ಈ ಮುದ್ರೆಗಳನ್ನು ಒಂದು ಸಾಕ್ಷಿಯಾಗಿ ಕಂಡನು.

ಪೌಲನ *stigma* ಗೋಚರವಾಗುವ ಪರಿಚಿದ ಪೆಟ್ಟುಗಾಯಗಳು, ಚಾಟಿ ಏಟುಗಳು, ಮತ್ತು

ಆತನ ದೇಹದಲ್ಲಿದ್ದ ಗಾಯದ ಗುರುತುಗಳನ್ನೊಳಗೊಂಡಿತ್ತು ಮತ್ತು ಆತನು ಕ್ರಿಸ್ತನ ಒಬ್ಬ ನಂಬಿಗಸ್ತ ದಾಸನಾಗಿ ಶ್ರಮೆಯನ್ನನುಭವಿಸಿದ್ದನೆಂಬುದನ್ನು ಪ್ರಾಮಾಣೀಕರಿಸಿತ್ತು (ಮತ್ತಾಯ 5:10, 11; ನೋಡಿರಿ ಯೆಶಾಯ 53:3-5). ಪೌಲನು ತನ್ನನ್ನು ಈ ಯಜಮಾನನ ದಾಸನೆಂದು ಎದ್ದು ಕಾಣುವಂತೆ ಮಾಡುವ ಈ ಮುದ್ರೆಗಳ ವಿಷಯದಲ್ಲಿ ನಾಚಿಕೊಳ್ಳುವವನಾಗಿರಲಿಲ್ಲ. ಬದಲಾಗಿ, ಇವುಗಳು ಗುರುತಿಸುವ ಮುದ್ರೆಗಳಾಗಿದ್ದವು; ಯಾಕೆಂದರೆ ಆತನು "ಕ್ರಿಸ್ತನನ್ನು ಸಂಪಾದಿಸಿಕೊಳ್ಳಬೇಕೆಂದು" ಮತ್ತು "ಕ್ರಿಸ್ತನಲ್ಲಿರುವವನಾಗಿ ಕಾಣಿಸಿಕೊಳ್ಳಬೇಕೆಂದು" ಎಲ್ಲವನ್ನೂ ನಷ್ಟವೆಂದೆಣಿಸಿಕೊಂಡಿದ್ದನು ಮತ್ತು ಅವುಗಳನ್ನು "ಕಸವೆಂದು" ಎಣಿಸಿದ್ದನು. ಆತನು "ನೇಮನಿಷ್ಠೆಗಳ ಫಲವಾಗಿರುವ ಸ್ವನೀತಿಯನ್ನಾಶ್ರಯಿಸದೆ" ಆತನು "ಕ್ರಿಸ್ತನನ್ನು ನಂಬುವದರಿಂದ ದೊರಕುವಂಥ ಅಂದರೆ ಕ್ರಿಸ್ತನ ಮೇಲಣ ನಂಬಿಕೆಯ ಆಧಾರದಿಂದ ದೇವರು ಕೊಡುವಂಥ ನೀತಿಯನ್ನೇ" ಆತನು ಆರಿಸಿಕೊಂಡಿದ್ದನು. ಆತನ ಬಯಕೆಯು ಕ್ರಿಸ್ತನನ್ನು ಮತ್ತು "ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸರೂಪನಾಗಬೇಕೆಂಬದೇ" ಆಗಿತ್ತು (ಫಿಲಿಪ್ಪಿ 3:7-10).

### "ಸಹೋದರರರೇ, ಕರ್ತನ ಕೃಪೆಯು ನಿಮ್ಮೊಂದಿಗಿರಲಿ!" (6:18)

**[18]ಸಹೋದರರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದೊಂದಿಗಿರಲಿ. ಆಮೆನ್.**

**ವಚನ 18.** ಪೌಲನು ತನ್ನ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಾ ಹೀಗೆ ಬರೆಯುತ್ತಾನೆ, **ಸಹೋದರರರೇ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದೊಂದಿಗಿರಲಿ. ಆಮೆನ್.** 6:16ರಲ್ಲಿ "ಶಾಂತಿಯೂ" ಎಂಬುದರ ಉಲ್ಲೇಖದಂತೆಯೇ, ಈ ಮಾತುಗಳು 1:3ರಲ್ಲಿ ಪೌಲನು ಆರಂಭದಲ್ಲಿ ಸಹೋದರರಿಗೆ ವಂದನೆಗಳನ್ನು ಹೇಳಿದ ನುಡಿಗಳನ್ನು ನೆನಪಿಗೆ ತರುತ್ತವೆ: "ತಂದೆಯಾದ ದೇವರಿಂದಲೂ ನಮ್ಮ *ಕರ್ತನಾದ ಯೇಸು ಕ್ರಿಸ್ತನಿಂದಲೂ* ನಿಮಗೆ *ಕೃಪೆಯೂ* ಶಾಂತಿಯೂ ಆಗಲಿ" (ಒತ್ತಿ ಹೇಳಿದ್ದು ನನ್ನದು). "ಆತ್ಮ" ಎಂಬ ಪದವು ಗಲಾತ್ಯದಲ್ಲಿರುವ ಈ ಸಭೆಗಳಲ್ಲಿನ ಸದಸ್ಯರೆಲ್ಲರನ್ನು ಸಂಬೋಧಿಸಲು ಬಳಸಿರುವ ಸಮುದಾಯವಾಚಕ ಬಹುವಚನವಾಗಿದೆ ಎಂಬುದು ಸ್ಪಷ್ಟವಿರುತ್ತದೆ. ಅಪೊಸ್ತಲನು ತನ್ನ ಪತ್ರಿಕೆಯನ್ನು ಒಂದು ಸಕಾರಾತ್ಮಕ ಟಿಪ್ಪಣಿಯೊಂದಿಗೆ ಮುಗಿಸುತ್ತಾನೆ, ಆತನ ಬುದ್ಧಿವಾದಗಳಿಗೆ ಅವರು ವಿಧೇಯರಾಗುವರೆಂದು ಎದುರುನೋಡುವವನಾಗಿ ಮುಗಿಸುತ್ತಾನೆ. ಆತನು ಕ್ರಿಸ್ತನ ಕೃಪೆಯ ಮೇಲೆ ಒತ್ತು ಕೊಟ್ಟು ಹೇಳಿದನು, ಅದರಲ್ಲಿಯೇ ಅವರು ವಿಶ್ವಾಸವನ್ನಿಡಬೇಕಾಗಿತ್ತು, ಮತ್ತು ಆತನು "ನಮ್ಮ ಕರ್ತನಾದ" ಉಲ್ಲೇಖಿಸಿ ಅವರನ್ನು "ಸಹೋದರರರೇ" ಎಂದು ಕರೆಯುವ ಮೂಲಕ ಅವರಿಗೆ ಭರವಸವನ್ನು ಒದಗಿಸುತ್ತಾನೆ. ಆತನು "ಆಮೆನ್" ಎಂದು ಹೇಳುವ ಮೂಲಕ ಪತ್ರಿಕೆಯನ್ನು ಮುಕ್ತಾಯಗೊಳಿಸುತ್ತಾನೆ.

## ಅನ್ವಯಿಸುವಿಕೆ

### ಸಹೋದರರನ್ನು ತಿದ್ದಿ ಸರಿಮಾಡುವ ಅಭ್ಯಾಸ (6:1)

6:1ರಲ್ಲಿ, ಪೌಲನು ಒಬ್ಬ ಕ್ರೈಸ್ತನು ಪಾಪದಲ್ಲಿ ಬಿದ್ದಿರುವ ಸಹೋದರನನ್ನು ತಿದ್ದಿ

ಸರಿಮಾಡುವಂತಹ ದೇವರ ಕೆಲಸವನ್ನು ಹೇಗೆ ನಡಿಸತಕ್ಕದ್ದೆಂಬುದರ ಕುರಿತು ಮುಖ್ಯವಾದ ಗಮನವನ್ನು ಹರಿಸುತ್ತಾನೆ. ಪಾಪವು ಏನೇ ಆಗಿದ್ದರೂ ಸರಿಯೇ, ತಿದ್ದಿ ಸರಿಮಾಡುವವನ ಮನೋಭಾವವು ಯೇಸುವಿನಲ್ಲಿಂಥ ಮನೋಭಾವವೇ ಆಗಿರತಕ್ಕದ್ದು, ಆತನು ನಾಶನದಲ್ಲಿರುವವರನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು. ಪ್ರೀತಿಯು ಎಲ್ಲಿ ಇರುತ್ತದೋ, ಅಲ್ಲಿ ಅಪರಾಧನಿರ್ಣಯ ಮಾಡಬೇಕೆಂಬ ಅಥವಾ ಒಬ್ಬನು ತನ್ನ ಪಾಪದಿಂದ-ಗಾಯಗೊಂಡಿರುವ ಸಹೋದರರನ್ನು ಓಡಿಸಬೇಕೆಂಬ ಬಯಕೆಯು ಇರುವದಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ತದ್ವಿರುದ್ಧವಾಗಿ, ಪ್ರೀತಿಯುಳ್ಳ ಕ್ರೈಸ್ತನೊಬ್ಬನು "ಅಂಥ ವ್ಯಕ್ತಿಯನ್ನುಶಾಂತಭಾವದಿಂದ ತಿದ್ದಿ ಸರಿಮಾಡಬೇಕೆಂಬ ತೀವ್ರಾಸಕ್ತಿಯೊಂದರಿಂದ" ಪ್ರೇರಿತನಾಗುವನು.[40]

ಪಾಪದ ಸಹೋದರನೊಬ್ಬನನ್ನು ತಿದ್ದಿ ಸರಿಮಾಡುವದಕ್ಕೆ ಪ್ರಯತ್ನಿಸುತ್ತಿರುವ ಒಬ್ಬ ಕ್ರೈಸ್ತನಿಗೆ ಯಾವ ಶೋಧನೆಗಳು ಅಪಾಯವೊಂದನ್ನು ತಂದೊಡ್ಡಬಹುದು? ಪೌಲನು ಅದನ್ನು ಹೇಳಲಿಲ್ಲ, ಆದರೆ ಅಂಥ ಅತಿ ಸೂಕ್ಷ್ಮವಾದ ಪರಿಸ್ಥಿತಿಯಲ್ಲಿ ಎದುರಾಗುವ ಹಲವಾರು ಪ್ರಲೋಭನೆಗಳನ್ನು ಕುರಿತು ಯೋಚಿಸಬಹುದು. ಅನೇಕ ಸಾಧ್ಯತೆಗಳ ನಡುವೆ, ಈ ಕೆಳಗಿನವುಗಳಿಂದ ದೂರವಿರತಕ್ಕದ್ದು:

- ಆತ್ಮೀಕ ಮತ್ತು ಪ್ರಾರ್ಥನಾಪೂರ್ವಕ ಸಿದ್ಧತೆಯನ್ನು ಮಾಡಿಕೊಳ್ಳಲು ವಿಫಲರಾಗುವದು.
- ತಿದ್ದಿ ಸರಿಮಾಡುವವನ ಲಕ್ಷ್ಯವನ್ನು ಮಂದಗೊಳಿಸುವಂತೆ ಪಾಪಿಯೊಂದಿಗಿರುವ ವೈಯಕ್ತಿಕ ಸಹಾನುಭೂತಿಯ ಸಂಬಂಧಗಳಿಗೆ ಅವಕಾಶ ಕೊಡುವದು. ದೋಷದಲ್ಲಿ ಸಿಕ್ಕುವ ಸಹೋದರನನ್ನು ಖಂಡಿಸುವವರು ಆತನ ಪಾಪವು ಸಭೆಗೆ ಮತ್ತು ಕರ್ತನ ಪರಿಶುದ್ಧ ನಾಮಕ್ಕೆ ಮಾಡುತ್ತಿರುವ ಹಾನಿಯನ್ನು ಕುರಿತು ಸಹ ವಿಶ್ಲೇಷಣೆ ಮಾಡಬೇಕಾಗುತ್ತದೆ.
- ಅಸಹನೆ ಅಥವಾ ಕೋಪ ಎಂಬುದಾಗಿ ವ್ಯಾಖ್ಯಾನಿಸಲ್ಪಡಬಹುದಾದ ರೀತಿಯಲ್ಲಿ ತೀವ್ರಾಸಕ್ತಿಯ ವೈರಾಗ್ಯ ಅಥವಾ ಸಿಟ್ಟನ್ನು ತೋರ್ಪಡಿಸುವದು. ಆ ರೀತಿಯಲ್ಲಿ ತೋರಿಸಿಕೊಳ್ಳುವದು ಪಾಪಿಯ ಹೃದಯವನ್ನು ಕಠಿಣಗೊಳಿಸಬಹುದು ಮತ್ತು ಆತನ ಕಡೆಯಿಂದ ವಿರೋಧ ಅಥವಾ ಅವಿಧೇಯತೆ ಉಂಟಾಗುವಂತೆ ಪ್ರಚೋದಿಸಬಹುದಾಗಿದೆ.
- ಬುದ್ಧಿಹೇಳುವವನು ಯಾವದೇ ರೀತಿಯಲ್ಲಿ ಗರ್ವ ಅಥವಾ ಸ್ವನೀತಿಯುಳ್ಳವನೆಂಬಂತೆ ಕಾಣಿಸಿಕೊಳ್ಳುವದು.
- ಇದರಲ್ಲಿ ಭಾಗಿಯಾಗಿರುವ ಎಲ್ಲರೂ ಪಾಪಿಗಳ ಒಂದು ತಂಡವಾಗಿದ್ದು ಸಮಾನವಾಗಿ ದೇವರ ಕೃಪೆ ಮತ್ತು ಕರುಣೆಗಳ ಮೇಲೆ ಅವಲಂಬಿತರೆಂಬುದನ್ನು ಮರೆತು ಬಿಡುವದು.

ಈ ಯಾವದೇ ಕ್ಷೇತ್ರದಲ್ಲಿ ವಿಫಲರಾಗುವದು ಸಭೆಯಲ್ಲಿ ದಾರಿತಪ್ಪಿರುವ ಸಹೋದರನೊಬ್ಬನನ್ನು ಸಂಧಿಸುವದಕ್ಕೆ ವಿಘ್ನವಾಗುವದು. ಇದು ಭಾಗಿಯಾಗಿರುವ ಎಲ್ಲರನ್ನು ದೀನಗೊಳಿಸುವಂಥ ಕೆಲಸವಾಗಿರತಕ್ಕದ್ದು. ತಪ್ಪಾದ ದಾರಿಯನ್ನು ಅನುಸರಿಸುವದು ನಂಬಿಗಸ್ತ ಕ್ರೈಸ್ತ ಸೇವೆ ಹಾಗೂ ಅನ್ಯೋನ್ಯತೆಗೋಸ್ಕರ ಒಂದು ಆತ್ಮವನ್ನು ಪುನಃ ಗೆದ್ದುಕೊಳ್ಳುವ ಸದವಕಾಶವನ್ನು ಹಾಳು ಮಾಡುವದಾಗಿದೆ.

ಈ ಸಲಹೆಗಳನ್ನು ಪಾಪದ ವಶಕ್ಕೊಳಗಾಗಿರುವ ಸದಸ್ಯನೊಬ್ಬನೊಂದಿಗಿನ ಆರಂಭಿಕ ಸಂಪರ್ಕದಲ್ಲಿ ಅನ್ವಯಿಸಿಕೊಳ್ಳತಕ್ಕದ್ದು ಮಾತ್ರವೇ ಅಲ್ಲ, ಆದರೆ ಅದಾದ ನಂತರದಲ್ಲಿನ ಎಚ್ಚರಿಕೆಗಳು ಹಾಗೂ ಬುದ್ಧಿವಾದಗಳನ್ನು ಹೇಳುವ ಸಂದರ್ಭಗಳಲ್ಲಿ ಸಹ ಅನ್ವಯಿಸಿಕೊಳ್ಳತಕ್ಕದ್ದು. ಅವರನ್ನು ಶಾಂತಭಾವದಿಂದ ನಡಿಸಿಕೊಳ್ಳುವದು ಯಾವಾಗಲೂ ಏಕರೀತಿಯಾಗಿರತಕ್ಕದ್ದು. ಒಬ್ಬ ತಪ್ಪು ಮಾಡಿದ ಕ್ರೈಸ್ತನನನ್ನು ದೇವರ ಹಾಗೂ ಸಭೆಯ ಕಾಳಜಿಯೊಂದಿಗೆ ಗದರಿಸತಕ್ಕದ್ದು, ಪಾಪಿಯ ರಕ್ಷಣೆಯನ್ನು ಅಪೇಕ್ಷಿಸುವ ಹಂಬಲಿಕೆಯುಳ್ಳ ಉದ್ದೇಶವು ಅದರಲ್ಲಿರತಕ್ಕದ್ದು. ನಾವು ಈ ಗುರಿಯನ್ನು ಎಷ್ಟೇ ಪ್ರೀತಿ ಹಾಗೂ ತಾಳ್ಮೆಯಿಂದ ತಲುಪುವದಕ್ಕೆ ಪ್ರಯತ್ನಿಸಿದಾಗ್ಯೂ, ಅಂತಿಮವಾಗಿ ಪ್ರತಿಕ್ರಿಯಿಸಬೇಕಾಗಿರುವಂಥದ್ದು ಪಾಪಿಯ ಹೃದಯವೇ ಆಗಿದೆ.

## ಅನ್ಯೋನ್ಯತೆಯಿಂದ ದೂರವಿರುವದು (6:1)

ಸಭೆಯು ಪಾಪ ಮಾಡಿರುವ ಸಹೋದರನನ್ನು ಅಥವಾ ಸಹೋದರಿಯನ್ನು ತಿದ್ದಿ ಸರಿಮಾಡುವದಕ್ಕೆ ಪ್ರಯತ್ನಿಸುವಾಗ, ಕೆಲವು ಸಾರಿ ಆ ವ್ಯಕ್ತಿಯು ಪಶ್ಚಾತ್ತಾಪ ಪಡುವದಕ್ಕೆ ನಿರಾಕರಿಸುತ್ತಾನೆ. ಅಂಥ ಪ್ರಕರಣಗಳಲ್ಲಿ, ಆ ಕ್ರೈಸ್ತನನ್ನು ಪುನಃ ಮಂದೆಗೆ ಸೇರಿಸಿಕೊಳ್ಳಲು ಸತತವಾದ ಪ್ರಯತ್ನಗಳನ್ನು ಮಾಡಬೇಕು. ಅವನು ಅಥವಾ ಅವಳು ಮೊದಲನೆಯ ಬುದ್ಧಿವಾದಕ್ಕೆ ಪ್ರತಿಕ್ರಿಯಿಸದಿದ್ದಲ್ಲಿ, ಇತರ ಜೊತೆ ಕ್ರೈಸ್ತರು ದಾರಿತಪ್ಪಿರುವ ಸದಸ್ಯನಿಗೆ ಪ್ರೀತಿಯಿಂದ ಬುದ್ಧಿ ಹೇಳಬೇಕು (ನೋಡಿರಿ ಮತ್ತಾಯ 18:15-17; ಯಾಕೋಬ 5:19, 20). ಎಲ್ಲಾ ಪ್ರಯತ್ನಗಳು ವಿಫಲವಾಗುವದಾದರೆ, ಸಭೆಯ ಶಿಸ್ತನ್ನು ಚಲಾಯಿಸಬೇಕು. ಈ ಆಜ್ಞೆಯು ಈಗಲೂ ಸಭೆಯ ಮೇಲೆ ಊರ್ಜಿತವಾಗಿರುತ್ತದೆ. ಇದು ಸಭೆಯ ನಾಯಕರ ಮೇಲೆ ಬೀಳುವಂಥ ಜವಾಬ್ದಾರಿ ಮಾತ್ರವೇ ಆಗಿರುವದಿಲ್ಲ, ಆದರೆ ಇಡೀ ಸಭೆಯ ಮೇಲೆ ಸಹ ಇರುವಂಥ ಜವಾಬ್ದಾರಿಯಾಗಿದೆ.[41] ಸದಸ್ಯರು ಈ ಕ್ರಮಕ್ಕೆ ಬೆಂಬಲ ನೀಡಲು ಮನಸ್ಸಿಲ್ಲವಾದರೆ, ಅದಕ್ಕಿರುವ ಉದ್ದೇಶವು ಭಂಗಪಡಿಸಲ್ಪಡುವದು.

ತನಗೆ ಮಾತ್ರವಲ್ಲ ಆದರೆ ಇಡೀ ಸಭೆಯ ಶುದ್ಧತೆ ಮತ್ತು ಸತ್ಯವಂತಿಕೆಗೆ ಸಹ ಗಂಡಾಂತರವನ್ನುಂಟು ಮಾಡುವಂಥ ಪಾಪವೊಂದರಲ್ಲಿ ಯಾವದೆ ಸದಸ್ಯನು ಜೀವಿಸುತ್ತಿರುವದಾದರೆ ಅಂಥವರೊಂದಿಗೆ ಅನ್ಯೋನ್ಯತೆಯನ್ನು ಇಟ್ಟುಕೊಳ್ಳಕೂಡದು. ಪೌಲನು ಕೊರಿಂಥದ ಸಭೆಯವರಿಗೆ ಹೀಗೆ ಕೇಳಿದನು, "ಸ್ವಲ್ಪ ಹುಳಿ ಕಲಸಿದರೆ ಕಣಿಕವೆಲ್ಲಾ ಹುಳಿಯಾಗುತ್ತದೆಂಬದು ನಿಮಗೆ ತಿಳಿಯದೋ?" (1 ಕೊರಿಂಥ 5:6). ಆ ವಾಕ್ಯಭಾಗದಲ್ಲಿನ ಸಹೋದರನ ಪಾಪವು ವಿವಾದಾತ್ಮಕವಾಗಿತ್ತು. ಆತನು ತನ್ನ ತಂದೆಯ ಹೆಂಡತಿಯೊಂದಿಗೆ ಲೈಂಗಿಕ ಸಂಬಂಧಗಳನ್ನಿಟ್ಟುಕೊಂಡಿದ್ದನು, ಆತನು ಮಾಡುತ್ತಿದ್ದ "ಅಂಥ ಜಾರತ್ವವು ಅನ್ಯಜನರಲ್ಲಿಯೂ ಇಲ್ಲ" (1 ಕೊರಿಂಥ 5:1). ತಾನು ಬಳಸಿದ ರೂಪಕೋಕ್ತಿಯ ವಿಷಯದಲ್ಲಿ ಯಾವದೇ ಸಂದೇಹವನ್ನು ಬಿಡದವನಾಗಿ, ಪೌಲನು "ನೀವು ಹುಳಿಯಿಲ್ಲದವರೆನಿಸಿಕೊಂಡದ್ದರಿಂದ ಹಳೆ ಹುಳಿಯನ್ನು ತೆಗೆದುಹಾಕಿ ಹೊಸ ಕಣಿಕದಂತಾಗಿರ್ರಿ" ಎಂದು ಅಪ್ಪಣೆ ಕೊಡುತ್ತಾನೆ (1 ಕೊರಿಂಥ 5:7). ಈ ಅರ್ಥವು ಗ್ರಹಿಸಿಕೊಳ್ಳಲ್ಪಟ್ಟಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು, ಆತನು ಸ್ಪಷ್ಟವಾಗಿ ಮಾತಾಡಿದನು, ತಾನು ಈ ಮುಂಚೆ ಸಹೋದರರಿಗೆ ಅವರು "ಜಾರರ ಸಹವಾಸ [συναναμίγνυμι, *sunanamignumi*] ಮಾಡಬಾರದೆಂದು" ಎಂಬುದನ್ನು ಜ್ಞಾಪಕಪಡಿಸುತ್ತಾನೆ (1 ಕೊರಿಂಥ 5:9). ಈ ಗ್ರೀಕ್ ಪದವು ಅಂಥ ವ್ಯಕ್ತಿಯೊಂದಿಗೆ ಅವರು "ಬೆರಕೆ" ಅಥವಾ "ವ್ಯವಹಾರಗಳನ್ನು ಇಟ್ಟುಕೊಳ್ಳುವದಾಗಲಿ"

ಇರಬಾರದು ಎಂಬ ವಿಚಾರವನ್ನು ವ್ಯಕ್ತಪಡಿಸುತ್ತದೆ.

*ಇಂದಿನ ಸಭೆಗಳಲ್ಲಿನ ಅನೇಕ ಸದಸ್ಯರು ಅಂತಹ ಸಾಮುದಾಯಿಕ ಅನ್ಯೋನ್ಯಯಿಂದ ದೂರವಿಟ್ಟುಕೊಳ್ಳುವಿಕೆಯನ್ನು ಎಂದಿಗೂ ಅನುಭವಿಸಿರುವದಿಲ್ಲ.* ಅವರು ಅನುಭವಿಸಿರುವದಾದಲ್ಲಿ, ಆ ಪರಿಸ್ಥಿತಿಯು ಹೆಚ್ಚುಕಡಿಮೆ ನಿಶ್ಚಿತವಾಗಿಯೂ ಯಾವದಾದರೂ ವಿವಾದಾತ್ಮಕವಾದ ಜಾರತ್ವವನ್ನೊಳಗೊಂಡಿರುತ್ತದೆ. ಹೇಗೂ, ಪೌಲನ ಉಪದೇಶಗಳು ಜಾರತ್ವವನ್ನೊಳಗೊಂಡ ಪ್ರಕರಣಗಳಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. "ಜಾರನು" ಎಂಬುದರ ಜೊತೆಗೆ, ಆತನು ಲೋಭಿ, ವಿಗ್ರಹಾರಾಧಕ, ಬೈಯುವವನು, ಕುಡಿಕ, ಸುಲುಕೊಳ್ಳುವವನು ಇವರನ್ನೆಲ್ಲಾ ಹೆಸರಿಸುತ್ತಾನೆ (1 ಕೊರಿಂಥ 5:11). ಆತನು ಅಪಾರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲದಂಥ ಒಂದು ವಾಗ್ದಂಡವನ್ನು ನೀಡುವ ಮೂಲಕ ಮುಕ್ತಾಯಗೊಳಿಸುತ್ತಾನೆ: "ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು" (1 ಕೊರಿಂಥ 5:13).

## ಒಂದು ವಿಶೇಷ ಅಧ್ಯಯನ: "ಕ್ರಿಸ್ತನ ನಿಯಮ" (6:2)

ಗಲಾತ್ಯ 6:2ರ ಹೊರತಾಗಿ, "ಕ್ರಿಸ್ತನ ನಿಯಮ" ಎಂಬ ಪದಗುಚ್ಛವು ಹೊಸ ಒಡಂಬಡಿಕೆಯೊಳಗೆ 1 ಕೊರಿಂಥ 9:21ರಲ್ಲಿ ಕಾಣಿಸಿಕೊಳ್ಳುತ್ತದೆ. NASBಯು ಕಡೆಯ ವಾಕ್ಯವನ್ನು ಹೀಗೆ ಅನುವಾದಿಸುತ್ತದೆ: "*ನಾನು ದೇವರ ನೇಮವಿಲ್ಲದವನಲ್ಲ, ಕ್ರಿಸ್ತ ನಿಯಮಕ್ಕೊಳಗಾದವನೇ*; ಆದರೂ ನಿಯಮವಿಲ್ಲದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮವಿಲ್ಲದವನಂತಾದೆನು" (ಒತ್ತಿ ಹೇಳಿದ್ದು ನನ್ನದು). NLTಯಲ್ಲಿ ಹೀಗಿರುತ್ತದೆ, ". . . ನಾನು ದೇವರ ನಿಮಯವನ್ನು ನಿರ್ಲಕ್ಷ್ಯಿಸುವದಿಲ್ಲ; ನಾನು ಕ್ರಿಸ್ತನ ನಿಯಮಕ್ಕೆ ವಿಧೇಯನಾಗುತ್ತೇನೆ." ಒಬ್ಬ ಯೆಹೂದಿ ಕ್ರೈಸ್ತನಾಗಿ, ಪೌಲನು ರಕ್ಷಣೆಯುಂಟು ಮಾಡುವ ಕ್ರಿಸ್ತನ ಸಂದೇಶದೊಂದಿಗೆ ಅನ್ಯಜನರನ್ನು ಸಂಧಿಸಿದನು. ಆತನು ತನ್ನನ್ನು "ದೇವರ ನಿಯಮವಿಲ್ಲದವನಲ್ಲ," ಆದರೆ ಬದಲಾಗಿ ಕ್ರಿಸ್ತನ ನಿಯಮಕ್ಕೊಳಗಾ"ವನೇ" ಎಂಬುದಾಗಿ ಪರಿಗಣಿಸಿಕೊಂಡಿದ್ದನು.[42]

1 ಕೊರಿಂಥ 9:21ರಲ್ಲಿನ "ಕ್ರಿಸ್ತನ ನಿಯಮಕ್ಕೊಳಗಾದವನು" (ἔννομος Χριστοῦ, *ennomos Christou*) ಎಂಬ ಪದಗುಚ್ಛವನ್ನು ಅನೇಕ ವ್ಯಾಖ್ಯಾನಕಾರರು "ಸುವಾರ್ತೆಗೊಳಪಟ್ಟವನು" ಎಂಬುದಾಗಿ ಅರ್ಥಮಾಡಿಕೊಂಡಿರುತ್ತಾರೆ. "ಕ್ರಿಸ್ತನ ನಿಯಮ" ಎಂಬುದು ಹೊಸ ಒಡಂಬಡಿಕೆಯ ಇಡೀ ಸಂದೇಶವೇ - ಹೊರತು ಯೇಸುವಿನ ಮರಣ. ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಕುರಿತಾದ "ತಿರುಳು ಸುವಾರ್ತೆ" ಅಲ್ಲ (1 ಕೊರಿಂಥ 15:1-4). ಈ ಅರ್ಥನಿರೂಪಣೆಯ ಪ್ರಕಾರ, ಅದು ಹೊಸ ಒಡಂಬಡಿಕೆಯಲ್ಲಿ ಅಡಕವಾಗಿರುವಂಥ ಸಕಲ ಆಶೀರ್ವಾದಗಳನ್ನು, ವಾಗ್ದಾನಗಳನ್ನು, ಜವಾಬ್ದಾರಿಗಳನ್ನು, ಮತ್ತು ಸಿದ್ಧಾಂತಗಳನ್ನು ಒಳಗೊಂಡಿರುತ್ತದೆ - ಯೇಸುವು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ ಸಂಪೂರ್ಣ "ಸತ್ಯ" (ಯೋಹಾನ 16:12, 13). ಹೇಗೂ, ಪೌಲನು "ಕ್ರಿಸ್ತನ ನಿಯಮ" ಎಂಬ ಪದಗುಚ್ಛವನ್ನು ಆ ಅರ್ಥದಲ್ಲಿ ಬಳಸಿದನೆಂಬುದು ಸಂದೇಹಕರವಾಗಿರುತ್ತದೆ. ಹೆಚ್ಚು ಸಂಭಾವ್ಯವಾಗಿ, ಆತನು ಹಳೆಯ ಒಡಂಬಡಿಕೆಯಾದ ಧರ್ಮಶಾಸ್ತ್ರದೊಂದಿಗೆ ವಿರುದ್ಧ ಹೋಲಿಕೆ ಮಾಡುವದಕ್ಕಾಗಿ "ನಿಯಮ" ಎಂಬುದನ್ನು ಬಳಸಿದನು.

ಅಲ್ಲದೆ, "ಒಳಗಾದವನು" ಎಂಬುದು ಈ ಗ್ರೀಕ್ ಪದಗುಚ್ಛವನ್ನು ಅನುವಾದಿಸುವರಲ್ಲಿ ಸೂಕ್ತವಾದ ಉಪಸರ್ಗವಾಗಿರದೆ ಇರಬಹುದಾಗಿದೆ. *Ennomos* ಎಂಬ ಪದವು ἐν (*en*,

"ಒಳಗೆ") ಮತ್ತು νόμος (*nomos*, "ಧರ್ಮಶಾಸ್ತ್ರ") ಎಂಬ ಎರಡು ಪದಗಳಿಂದ ಕೂಡಿರುತ್ತದೆ; ಅದನ್ನು "ಧರ್ಮಶಾಸ್ತ್ರದೊಳಗೆ ಇಟ್ಟುಕೊಳ್ಳುವದು," "ಪ್ರಾಮಾಣಿಕ," ನ್ಯಾಯವಾದವನು," ಮತ್ತು "ಧರ್ಮಶಾಸ್ತ್ರಕ್ಕೆ ಅಧೀನ" ಎಂದು ಅರ್ಥನಿರೂಪಣೆ ಮಾಡಲಾಗಿದೆ.[43] *Ennomos* ಎಂಬುದು ἄνομος (*anomos*, "ಧರ್ಮಶಾಸ್ತ್ರವಿಲ್ಲದಿರುವದು") ಎಂಬುದಕ್ಕೆ ವಿರುದ್ಧವಾಗಿರುತ್ತದೆ; ಇದರ ಅರ್ಥವು "ಧರ್ಮಶಾಸ್ತ್ರದ ಪ್ರಕಾರ" ಎಂದಾಗಿರುತ್ತದೆ. ಜನರ ವಿಷಯದಲ್ಲಿ ಇದು ಬಳಸಲ್ಪಡುವಾಗ, ಇದು "ನೀತಿವಂತರು" ಅಥವಾ "ಪ್ರಾಮಾಣಿಕರು" ಆಗಿರುವ ವ್ಯಕ್ತಿಗಳನ್ನು ಸೂಚಿಸುತ್ತದೆ.[44]

ಒಬ್ಬ ಲೇಖಕನಾಗಿ, ಪೌಲನು ತಾನು ಬಳಸುವ ಪದಗಳ ವಿಷಯದಲ್ಲಿ ಬಹಳ ಜಾಗರೂಕನಾಗಿರುತ್ತಿದ್ದನು. ಅನೇಕ ಸಂದರ್ಭಗಳಲ್ಲಿ, ಆತನು "ಧರ್ಮಶಾಸ್ತ್ರಾಧೀನ" ಅಥವಾ "ನಿಯಮಕ್ಕೊಳಗಾದವನು" ಎಂಬುದಾಗಿ ಮಾತಾಡಿದನು; ಮತ್ತು ತಾನು "ಕ್ರಿಸ್ತನ "ನಿಯಮಕ್ಕೊಳಗಾದವನು" ಎಂಬುದಾಗಿ ಹೇಳುವದಕ್ಕೆ ಬಯಸಿದ್ದರೆ, ಆತನು ಬಹಳ ಸುಲಭವಾಗಿ ὑπὸ νόμον (*hupo nomon*) ಅಥವಾ ಅದನ್ನು ಹೋಲುವಂತಹ ಪದಗುಚ್ಛವನ್ನು ಬಹಳ ಸುಲಭವಾಗಿ ಬಳಸಿರಬಹುದಿತ್ತು - ಆದರೆ ಆತನು ಇಲ್ಲಿ ಹಾಗೆ ಮಾಡಲಿಲ್ಲ. ಆತನು ಹೊಸ ಒಡಂಬಡಿಕೆಯಲ್ಲಿ ಕೇವಲ ಎರಡು ಸಾರಿ (ಅಪೊಸ್ತಲರ ಕೃತ್ಯಗಳು 19:39; 1 ಕೊರಿಂಥ 9:21) ಮತ್ತು LXXನಲ್ಲಿ ಒಂದು ಸಾರಿ ಮಾತ್ರವೇ ಕಾಣಿಸಿಕೊಳ್ಳುವಂತಹ ಈ ಸಾಮಾನ್ಯ ಬಳಕೆಯಲ್ಲಿ ಇಲ್ಲದ ಪದವನ್ನು ಏಕೆ ಆರಿಸಿಕೊಂಡನು?

*ಎರಡು ಒಡಂಬಡಿಕೆಗಳ ನಡುವಿನ ವ್ಯತ್ಯಾಸ.* ಗಲಾತ್ಯದವರಿಗೆ ಬರೆದ ಪತ್ರಿಕೆಯ ಪ್ರಧಾನ ವಿಷಯವಾಗಿರುವಂತಹ, ಅಂದರೆ ಧರ್ಮಶಾಸ್ತ್ರ ಹಾಗೂ ಸುವಾರ್ತೆಯ ವಿಷಯದ ಕಡೆಗೆ ಪೌಲನಿಗಿರುವ ಮನೋಭಾವದಲ್ಲಿಯೇ ಪ್ರಾಥಮಿಕ ಉತ್ತರವನ್ನು ಕಂಡುಕೊಳ್ಳಬಹುದಾಗಿದೆ. ಮೊದಲನೆಯದ್ದರಲ್ಲಿ ಒಂದು ಹೊರಲಾಗದಂತಹ "ದಾಸತ್ವದ ನೊಗ"ವು ಅಡಕವಾಗಿರುತ್ತದೆ (ಗಲಾತ್ಯ 5:1; ನೋಡಿರಿ ಅ.ಕೃತ್ಯ 15:10). ಎರಡನೆಯ ಒಡಂಬಡಿಕೆಯಾದ ಸುವಾರ್ತೆಯು ಯೇಸುವಿನ ಶಿಷ್ಯತ್ವದ ನೊಗವಾಗಿರುತ್ತದೆ, ಆತನು ಅದನ್ನು ತನ್ನ ಪ್ರೀತಿಪೂರ್ವಕವಾದ ಹಾಗೂ ದಯೆಯುಳ್ಳ ಆಮಂತ್ರಣದಲ್ಲಿ ಸರ್ವ ಜನರಿಗೂ ನೀಡುವೆನೆಂದು ಹೇಳಿದನು. ಆತನ "ನೊಗವು ಮೃದುವಾದದ್ದು" ಮತ್ತು "ಹೊರೆಯು ಹೌರವಾದದ್ದು" ಎಂದು ಹೇಳಿದನು (ಮತ್ತಾಯ 11:28-30). ಪೌಲನು ಪಾಪಿಗಳಲ್ಲಿ ಮುಖ್ಯನಾಗಿದ್ದು ಕೃಪೆ ತೋರಿಸಲ್ಪಟ್ಟವನಾಗಿ, ಈ ವಿರೋಧಾಭಾಸವನ್ನು ಸ್ವತಃ ಅನುಭವಿಸಿದ್ದನು (1 ತಿಮೊಥೆ 1:15; KJV). ಆತನು ತನ್ನ ಪಾಪದ ಭಾರದಿಂದ ಬಿಡಿಸಲ್ಪಟ್ಟಿದ್ದನು. ಆದದರಿಂದ, ಆತನು ಗಲಾತ್ಯದ ಕ್ರೈಸ್ತರಿಗೆ ಹೀಗೆ ಬೇಡಿಕೊಂಡನು, "ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ" (ಗಲಾತ್ಯ 5:1).

*ಆಜ್ಞೆಗಳ ಮೇಲೆ ಒತ್ತು ಕೊಡದಿರುವಿಕೆ.* ಪೌಲನು ಕ್ರಿಸ್ತನೊಂದಿಗೆ ತನಗಿರುವ ಸ್ವಂತ ಸಂಬಂಧವನ್ನು ವ್ಯಕ್ತಪಡಿಸುವದಕ್ಕಾಗಿ ಎನ್ನೊಮೊಸ ಎಂಬ ಈ ಅಪರೂಪದ ಪದವನ್ನು ಏಕೆ ಬಳಸಿದನು? ಪೌಲನು 1 ಕೊರಿಂಥ 9:21ರಲ್ಲಿ ಎನ್ನೊಮೊಸ ಕ್ರಿಸ್ಟೊವು ಎಂಬ ಮಾತನ್ನು ಬಳಸುವದರಲ್ಲಿ, ಪ್ರೀತಿಯುಳ್ಳ ಹಾಗೂ ಕೃಪೆಯುಳ್ಳ ತನ್ನ ಕರ್ತನಾದ ಯೇಸುವಿನೊಂದಿಗೆ ತನಗಿದ್ದ ಸಂಬಂಧವನ್ನು ಬಣ್ಣಿಸುವದದಕ್ಕೆ "ಅಡಿಯಲ್ಲಿ" ಎಂಬ ಭಾವನೆಯೊಂದರಿಂದ ಉದ್ದೇಶಪೂರ್ವಕವಾಗಿ ದೂರವಿರುವದಕ್ಕೆ ಪ್ರಯತ್ನಿಸುತ್ತಿದ್ದಾನೆಂದು ತೋರುತ್ತದೆಂಬ ನಿರ್ಣಯಕ್ಕೆ ಬರುವದು ತಾರ್ಕಿಕವೆಂದು ತೋರುತ್ತದೆ. ಪೌಲನು ತಾನು ಆರಿಸಿಕೊಂಡು ಮಾತಾಡಿದ ಪದಗಳ ಮೂಲಕವಾಗಿ, ತಾನು ಕ್ರಿಸ್ತನಿಗೆ ಮಾಡುವ ಸೇವೆಯು ಒಂದು

ಭಾರವಾಗಿದ್ದು ಅದರಡಿಯಲ್ಲಿ ಆತನು ಪ್ರಯಾಸ ಪಡುತ್ತಿದ್ದನೆಂಬ ಆಲೋಚನೆಯು ಬರದಂತೆ ನೋಡಿಕೊಂಡನು, ಯಾಕೆಂದರೆ ಆತನು ಕ್ರಿಸ್ತನ ನಿಯಮದ ಒಳಗೆ ಇದ್ದನು. ಈ "ನಿಯಮ"ವು ಮಾನವ ಸಂಬಂಧಗಳ ವಿಷಯವಾಗಿ ಕರ್ತನು ಎತ್ತಿ ಹಿಡಿದ ಅತ್ಯಂಥ ಶ್ರೇಷ್ಠವಾದ ಆಜ್ಞೆಯಾಗಿರುತ್ತದೆಂಬುದು ನಮಗೆ ಮನದಟ್ಟು ಆಗಿರುತ್ತದೆ: ಧರ್ಮಶಾಸ್ತ್ರದಲ್ಲಿ ಪ್ರೀತಿಯು ಶಾಶ್ವತವಾಗಿರುತ್ತದೆ (ಯಾಜಕಕಾಂಡ 19:18); ಅದು ಸುವಾರ್ತೆಯಲ್ಲಿ ಸಹ ಪ್ರಧಾನವಾಗಿರುತ್ತದೆ (ಮತ್ತಾಯ 7:12[45]).

ಆ ಶ್ರೇಷ್ಠವಾದ, ಅಗ್ರಗಣ್ಯವಾದ ಪ್ರೀತಿಯ ಆಜ್ಞೆಯು ಪೌಲನ ಪ್ರತಿಯೊಂದು ತುಡಿತದ ಮೇಲೆ ನಿಯಂತ್ರಣವನ್ನು ಹೊಂದಿತ್ತು ಮತ್ತು ತನ್ನ ಪ್ರೀತಿಯುಳ್ಳ ಯಜಮಾನನ ಪರವಾಗಿ ಮಾಡುವ ಪ್ರತಿಯೊಂದು ತ್ಯಾಗಕ್ಕೆ ಸ್ಪೂರ್ತಿಯಾಗಿತ್ತು. ಅಂತೂ, ಯೇಸುವು ಶಿಲುಬೆಯ ನೋವನ್ನು ಮತ್ತು ಅವಮಾನವನ್ನು ಸಹಿಸಿಕೊಂಡಿದ್ದನು ಮತ್ತು ಪಾಪಿಗಳಲ್ಲಿ ಮುಖ್ಯನಾದ ಆತನನ್ನು ಕ್ಷಮಿಸಿದ್ದನು! ಆತನು ಇನ್ನು ಮೇಲೆ ಒಂದು ಬಾಹ್ಯ ಹೊಣೆಯನ್ನು ನಿಭಾಯಿಸುವವನಾಗಿರಲಿಲ್ಲ ಆದರೆ ದೇವರಿಗಾಗಿ ಮತ್ತು ಜೊತೆಯ ಮನುಷ್ಯನಿಗಾಗಿ ಆಂತರೀಕವಾಗಿದ್ದ ಪ್ರೀತಿಯನ್ನು ಹೊಂದಿದ್ದನು, ಅದು ಆತನೊಳಗೆ ನೆಲೆಯಾಗಿದ್ದ ಸ್ವತಃ ದೇವರಾತ್ಮನಿಂದಲೇ ಅನುಗ್ರಹಿಸಲ್ಪಟ್ಟಿತ್ತು.

*ಕ್ರಿಸ್ತನ ಶಿಷ್ಯತ್ವ*. ನಾವು ಮಾತಾಡುತ್ತಿರುವ ಈ ಪ್ರೀತಿಯನ್ನು ದೇವರ ಸಕಲ ಅಥವಾ ಯಾವದೇ ಆಜ್ಞೆಯನ್ನು ಅಥವಾ ವಿಶಾಲವಾದ ಅರ್ಥದಲ್ಲಿ ವ್ಯಕ್ತಪಡಿಸಲಾಗಿರುವ ಕರ್ತನ ಸುವಾರ್ತೆಯನ್ನು (ಅಂದರೆ, ಹೊಸ ಒಡಂಬಡಿಕೆಯನ್ನು) ರದ್ದುಗೊಳಿಸುವ ರೀತಿಯಲ್ಲಿ ಅನ್ವಯಗೊಳಿಸಬಾರದು. ಯೇಸುವಿನ ಶಿಷ್ಯನಿಗೆ ಸ್ಪೂರ್ತಿಯನ್ನು ನೀಡುವ ಪ್ರೀತಿಯು ಒಂದು ಉದ್ವೇಗಕ್ಕೆ ಅಧೀನವಾಗಿರುವಂಥದ್ದಲ್ಲ. ಯೇಸುವು ತನ್ನ ಶಿಷ್ಯರಿಗೆ ಸ್ಪಷ್ಟವಾಗಿ ಆದೇಶಿಸಿ "ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" ಎಂದು ಹೇಳಿದನು (ಮತ್ತಾಯ 28:19, 20). ಅವರಿಗಾದರೋ ಅದಕ್ಕಿಂತ ಕಡಿಮೆ ಮಾಡಿದ್ದರೆ ಅದು ಅವಿಧೇಯವಾಗುತ್ತಿತ್ತು ಮತ್ತು ಇಡೀ ಲೋಕದ ವಿಷಯದಲ್ಲಿ ಆತನು ಹೊಂದಿರುವ ಇಡೀ ಧ್ಯೇಯವನ್ನು ಗಂಡಾಂತರಕ್ಕೀಡು ಮಾಡುತ್ತಿತ್ತು. ದೇವರ ಪ್ರೀತಿ, ಕೃಪೆ, ಮತ್ತು ಕರುಣೆಗಳಿಗೆ ನಮ್ಮ ಚಿತ್ತವನ್ನು ದೇವರ ಆಜ್ಞೆಗಳ ಕಡೆಗೆ ರೂಪಾಂತರಗೊಳಿಸುವದಾಗಿತ್ತೇ ಹೊರತು, ಅವುಗಳಿಗೆ ವಿಧೇಯರಾಗುವದರಿಂದ ನಮಗೆ ವಿನಾಯಿತಿ ಕೊಡುವದಾಗಿರಲಿಲ್ಲ.

ನಾವು ನಮ್ಮಿಂದ ಸಾಧ್ಯವಾಗುವಷ್ಟು ಉತ್ತಮವಾದ ಪ್ರಯತ್ನಗಳನ್ನು ಮಾಡುವ ವೇಳೆಯಲ್ಲಿಯೂ, ದೇವರ ಹೃದಯದಿಂದ ನಮಗೆ ಲಭ್ಯವಿರುವ ಸಕಲ ಪ್ರೀತಿ, ಕೃಪೆ, ಮತ್ತು ಕರುಣೆಗಳ ಅಗತ್ಯವಿರುತ್ತದೆ. ನಾವು ನಮಗೆ "ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ," ನಾವು ಏನನ್ನು ಸಂಪಾದಿಸಿಕೊಂಡಿಲ್ಲ ಅಥವಾ ಯಾವದಕ್ಕೂ ಯೋಗ್ಯರಾಗಿಲ್ಲ ಎಂಬುದನ್ನು ಬಲ್ಲೆವು (ಲೂಕ 17:10). ಆತನ ಪ್ರೀತಿಯು ದೊಡ್ಡದು ಎಂಬುದನ್ನು ಸಹ ಬಲ್ಲೆವು. ರಕ್ಷಣೆಯು ಯಾವಾಗಲೂ ಕೃಪೆಯಾಗಿದೆ ಮತ್ತು ಆಗಿರುವದು. ಅಲ್ಲದೆ ಈ ಪ್ರೀತಿಯು ಶ್ರೇಷ್ಠವಾದದ್ದೆಂದು ಸಹ ಬಲ್ಲೆವು. ರಕ್ಷಣೆಯು ಕೃಪೆಯ ಮೂಲಕವೇ ಆಗಿರುತ್ತದೆ ಮತ್ತು ಯಾವಾಗಲೂ ಹಾಗೆಯೇ ಆಗಿರುವದು. ಹೀಗಿದ್ದರೂ, ನ್ಯಾಯತೀರ್ಪು ನಮ್ಮ ಕೃತ್ಯಗಳಿಗೆ ತಕ್ಕ ಹಾಗೆ ನಡೆಯುತ್ತದೆಂಬುದು ಹೊಸ ಒಡಂಬಡಿಕೆಯ ಸ್ಥಿರವಾದ ಬೋಧನೆಯಾಗಿರುತ್ತದೆ.[46]

ಕ್ರಿಸ್ತ ಯೇಸುವಿನಲ್ಲಿ ತಾನು ತಿಳಿದುಕೊಂಡಿದ್ದ "ಪ್ರೀತಿಯ ನಿಯಮ"ದಿಂದ

ಚಿತ್ತಾಕರ್ಷಿತನಾಗಿ, ಪೌಲನು ತನ್ನನ್ನು ಯೇಸುವಿನ ಗುಲಾಮ ಅಥವಾ ದಾಸನೆಂದು ಕಂಡನು (δοῦλος, *doulos*, 1:10; ರೋಮಾ 1:1; ಫಿಲಿಪ್ಪಿ 1:1). ಒಬ್ಬ ದಾಸನಾಗಿ ಸಹ, ಆತನು "ಕ್ರಿಸ್ತನ ನಿಯಮ"ದಲ್ಲಿ ಸುತ್ತಲ್ಪಟ್ಟಿದ್ದನು ಮತ್ತು ಆಲಂಗಿಸಲ್ಪಟ್ಟಿದ್ದನು. ಆ ಕಾರಣಕ್ಕಾಗಿಯೇ, ಆತನು ಸ್ವತಂತ್ರನಾಗಿದ್ದನು, ಯೇಸುವು ಯೆಹೂದ್ಯರಿಗೆ ಅದನ್ನೇ ಹೇಳಿದ್ದನು, "ಆದದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು" (ಯೋಹಾನ 8:36).

W. Gutbrodನು ಹೀಗೆ ಬರೆದನು, "ಒಬ್ಬನು ದೇವರ ಕಡೆಗಿರುವ ಪ್ರೀತಿ ಮತ್ತು ಒಬ್ಬನ ನೆರೆಯವನ ಕಡೆಗಿನ ಪ್ರೀತಿಯನ್ನು ಕ್ರಿಸ್ತನ ನಿಯಮವೆಂದು ಪರಿಗಣಿಸುವ ಮತ್ತು ಆ ಮೂಲಕ ನಿಜವಾದ ಅರ್ಥದಲ್ಲಿ ಧರ್ಮಶಾಸ್ತ್ರವೆಂದು ಪರಿಗಣಿಸುವಂಥ ತಿಳುವಳಿಕೆಯನ್ನು νόμος [*nomos*] ಕುರಿತು ಭಾವಿಸಿಕೊಳ್ಳುವನೋ ಎಂದು ಕೇಳಬಹುದಾಗಿದೆ."[47] Gutbrodನು ಈ ವಿಧವಾದ ಪರಿಗಣಿಸುವಿಕೆಯೊಂದಿಗೆ ಈ ವಿಷಯದ ಕುರಿತಾಗಿ ಪೌಲನು ಹೊಂದಿರುವ ಮನಸ್ಸಿಗೆ ಸಮೀಪವಾದನೆಂದು ತೋರುತ್ತದೆ. ಯೇಸುವು ಹೀಗೆ ಹೇಳಿದನು, "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15). ಆತನಿಗೆ ಪ್ರಿಯನಾದ ಶಿಷ್ಯನಾಗಿದ್ದ ಯೋಹಾನನು ಹೀಗೆ ಬರೆದನು, "ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ಅದರಿಂದಲೇ ಆತನನ್ನು ಬಲ್ಲವರಾಗಿದ್ದೇವೆಂದು ತಿಳುಕೊಳ್ಳುತ್ತೇವೆ" (1 ಯೋಹಾನ 2:3); "ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:3). ನಾವು ನಂಬುವದೇನೆಂದರೆ, ಇದು "ಕ್ರಿಸ್ತನ ನಿಯಮ"ದ ತಿರುಳನ್ನು ಬಯಲುಗೊಳಿಸುವದು ಮಾತ್ರವೇ ಅಲ್ಲ ಆದರೆ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಪುಸ್ತಕಗಳಲ್ಲಿನ ಸಕಲ ಬೇಡಿಕೆಗಳನ್ನು ನೆರವೇರಿಸುತ್ತದೆ.[48]

## ಮೋಸಕ್ಕೊಳಗಾಗದಂತೆ ಇರುವದು (6:7)

ಪೌಲನು ಗಲಾತ್ಯದಲ್ಲಿರುವ ತನ್ನ ವಾಚಕರಿಗೆ "ಮೋಸಹೋಗಬೇಡಿರಿ . . ." (6:7) ಎಂದು ಎಚ್ಚರಿಸಿದನು. ಮೋಸಗಾರನು ಹೇಳುವ ಚಾಣಕ್ಷತನದ ಸುಳ್ಳುಗಳು ಈ ಲೋಕದೊಳಗೆ, ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಯವರ ಮೇಲೆ ಸಹ ಅಸ್ತವ್ಯಸ್ತತೆ, ಗಲಿಬಿಲಿ, ಮತ್ತು ಬಾಧೆಗಳನ್ನು ತಂದಿರುತ್ತವೆ. ಆತನ ಉಪದೇಶಗಳ ಫಲಿತವಾಗಿ, ನಾವು ನಮ್ಮ ಅತ್ಯಂಥ ಪೂರ್ವದ ಮೂಲಜನಕರ ಹೆಜ್ಜೆಜಾಡುಗಳಲ್ಲಿ ನಡೆದಿರುತ್ತೇವೆ: "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ಈ ಪಾಪದ ಮುಖಾಂತರವಾಗಿ ಮರಣವು ನಮ್ಮ ಮೇಲೆ ಬಂದಿರುತ್ತದೆ: "ಈ ವಿಷಯವು ಹೇಗಂದರೆ - ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾ 5:12). ನಮ್ಮ ಮೂಲಭೂತವಾದ ಮತ್ತು ನಿರಾಕರಿಸಲಾಗದಂಥ ವಾಸ್ತವಾಂಶದಿಂದ - ಅಂದರೆ, ನಾವೆಲ್ಲರೂ ಪಾಪಿಗಳಾಗಿದ್ದೇವೆ ಎಂಬುದರಿಂದ - ಮುಂದೆ ಸಾಗುವದನ್ನು ಹೊರತು ಪಡಿಸಿದರೆ ನಮ್ಮ ಪರಿಶುದ್ಧ ಹಾಗೂ ಸರ್ವಶಕ್ತನಾದ ದೇವರೊಂದಿಗೆ ಒಂದು ಸಂಬಂಧವನ್ನು ಆರಂಭಿಸುವದಕ್ಕೆ ಬೇರೆ ದಾರಿಯೇ ಇರುವದಿಲ್ಲ. ಕ್ಷಮಾಪಣೆಯನ್ನು ಹೊಂದಿಕೊಳ್ಳುವದಕ್ಕೆ ಮೊದಲ ಹೆಜ್ಜೆಯು ಏನೆಂದರೆ ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವದೇ; ಬಳಿಕ ನಾವು ನಮ್ಮನ್ನು ಆತನ ರಕ್ಷಣೆಯ ದಾರಿಯಲ್ಲಿ ನಡೆಯುವದಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳಬೇಕು. ". . . ಪಾಪವು ಕೊಡುವ ಸಂಬಳ ಮರಣ" ಆಗಿದ್ದಾಗ್ಯೂ "ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ

ನಿತ್ಯಜೀವ" (ರೋಮಾ 6:23). ಕ್ರಿಸ್ತನಲ್ಲಿ, ನಿರೀಕ್ಷೆಯು ಇರುತ್ತದೆ!

## ಆತ್ಮೀಕ ಕೊಡುವಿಕೆ (6:6-10)

ಕ್ರೈಸ್ತರಾಗಿ, ಕ್ರಿಸ್ತನ ಧ್ಯೇಯದ ಪ್ರಗತಿಗೋಸ್ಕರ ಆರ್ಥಿಕವಾಗಿ ಕೊಡುವಿಕೆ ಮತ್ತು ಕಷ್ಟದಲ್ಲಿರುವವರೊಂದಿಗೆ ನಮ್ಮ ಸಾಮಗ್ರಿಗಳನ್ನು ಹಂಚಿಕೊಳ್ಳುವಿಕೆಯು ಅತ್ಯಂಥ ಅಪ್ಪಟವಾದ ಧರ್ಮಕಾರ್ಯಗಳ ಶ್ರೇಣಿಯಲ್ಲಿರುತ್ತವೆ.

ಪೌಲನು ತನ್ನ ಹಾಗೂ ಬಾರ್ನಬನ ಕುರಿತಾಗಿ, ಕೊರಿಂಥದವರನ್ನು ಹೀಗೆ ಕೇಳಿದನು, "ನಾವು ನಿಮಗೋಸ್ಕರ ಆತ್ಮಸಂಬಂಧವಾದ ಬೀಜವನ್ನು ಬಿತ್ತಿದ ಮೇಲೆ ನಿಮ್ಮಿಂದ ಶರೀರಸಂಬಂಧವಾದ ಪೈರನ್ನು ಕೊಯ್ಯುವದು ದೊಡ್ಡದೋ?" (1 ಕೊರಿಂಥ 9:11). ಆತನು ಧರ್ಮೋಪದೇಶಕಾಂಡ 25:4ರಿಂದ ಉಲ್ಲೇಖವನ್ನು ಮಾಡಿದ ಬಳಿಕ ಈ ಪ್ರಶ್ನೆಯನ್ನು ಕೇಳಿದನು: "ಕಣತುಳಿಯುವ ಎತ್ತಿನ ಬಾಯಿ ಕಟ್ಟಬಾರದೆಂದು ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದದೆ" (1 ಕೊರಿಂಥ 9:9).

ಕ್ರಿಸ್ತನಿಂದ ಪ್ರತಿಷ್ಠಾಪಿಸಲ್ಪಟ್ಟ ಸತ್ಯವಾದ ಆರಾಧನೆಯ ವಿಧದೊಂದಿಗೆ ಹಳೆಯ ಒಡಂಬಡಿಕೆಯ ಆರಾಧನೆಯಲ್ಲಿದ್ದ ಬಾಹ್ಯಾಚಾರಗಳನ್ನು ವಿರುದ್ಧ ಹೋಲಿಕೆ ಮಾಡುವವನಾಗಿ, ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ತನ್ನ ವಾಚಕರನ್ನು ಹೀಗೆ ಬೇಡಿಕೊಂಡನು,

> ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಆತನು ಕರ್ತನೆಂದು ಬಾಯಿಂದ ಪ್ರತಿಜ್ಞೆಮಾಡುವದೇ ನಾವು ಅರ್ಪಿಸುವ ಯಜ್ಞವಾಗಿದೆ. ಇದಲ್ಲದೆ ಪರೋಪಕಾರವನ್ನೂ ಧರ್ಮಮಾಡುವದನ್ನೂ [κοινωνία, *koinōnia*] ಮರೆಯಬೇಡಿರಿ; ಇವೇ ದೇವರಿಗೆ ಸಮರ್ಪಕವಾದ ಯಜ್ಞಗಳು (ಇಬ್ರಿಯ 13:15, 16).

*Koinōnia* ಎಂಬ ಪದವು ಅನೇಕ ಸಾರಿ "ಅನ್ಯೋನ್ಯತೆ" ಎಂದು ಅನುವಾದಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 2:42; 1 ಕೊರಿಂಥ 1:9; ಫಿಲಿಪ್ಪಿ 2:1; 3:10); ಆದರೆ ಅದನ್ನು "ಹಣದ ಸಹಾಯ" (ರೋಮಾ 15:26), "ಪಾಲುಗಾರರಾಗುವದು" (1 ಕೊರಿಂಥ 10:16), "ಸೇರಿ ಇಜ್ಜೋಡಾಗುವದು" (2 ಕೊರಿಂಥ 6:14), ಮತ್ತು "ಪಾಲುಗಾರಿಕೆ" (2 ಕೊರಿಂಥ 8:4) ಎಂದು ಸಹ ಅನುವಾದಿಸಲ್ಪಡಬಹುದು. ಈ ಪದವು ಆಹಾರ ಮತ್ತು ಪಾನಿಯಗಳನ್ನೊಳಗೊಂಡ ಒಂದು ಸಾಮಾಜಿಕ ಭೇಟಿ ಎಂಬ ಸಂಪ್ರದಾಯಿಕವಾದ ಭಾವನೆಯನ್ನು ದಾಟಿ ಹೋಗುವದಾಗಿದ್ದು, ಇದರಲ್ಲಿ ಹಂಚಿಕೊಳ್ಳುವಿಕೆಯ ವಿಚಾರವು ಸಹ ಸೇರಿರಬಹುದಾಗಿದೆ. ಕೆಲವೊಂದು ಸಂದರ್ಭಗಳಲ್ಲಿ, *koinōnia* ಎಂಬುದು ಆತ್ಮಗಳು ರಕ್ಷಣೆ ಹೊಂದುವಂತಾಗುವ ಹಾಗೆ ಸುವಾರ್ತೆಯ ಸಾರುವಿಕೆಗೋಸ್ಕರ ಹಣಕಾಸಿನ ಸಹಾಯ ನೀಡುವಿಕೆಯನ್ನು ಸೂಚಿಸುತ್ತದೆ. ಪೌಲನು ಫಿಲಿಪ್ಪಿಯದವರನ್ನು "ಸುವಾರ್ತಾಪ್ರಚಾರದಲ್ಲಿ ಸಹಕಾರಿಗಳಾಗಿದ್ದೀರೆಂದು" ಅವರನ್ನು ಶ್ಲಾಘಿಸಿದನು (ಫಿಲಿಪ್ಪಿ 1:5). ಅವರು ಈತನಿಗೆ ನೀಡಿದ್ದ ಆರ್ಥಿಕ ಸಹಾಯದಿಂದಾಗಿ ಆತನು ತನ್ನ ಬಹಳಷ್ಟು ಸಮಯವನ್ನು ಬೋಧನೆ ಮತ್ತು ಉಪದೇಶಗಳಲ್ಲಿ ಕಳೆಯುವಂತೆ ಅವಕಾಶವನ್ನು ಒದಗಿಸಿತ್ತು, ಮತ್ತು ಆ ಮೂಲಕವಾಗಿ ನಾಶನದಲ್ಲಿರುವವರ ಪರಿವರ್ತನೆಗೆ ದಾರಿಯಾಗಿತ್ತು.

ಯಾಕೋಬನು ಸತ್ಯ ಧರ್ಮದ ಸ್ವಭಾವವನ್ನು ಬಣ್ಣಿಸಿದನು: "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ" (ಯಾಕೋಬ 1:27). ಯಾಕೋಬನು "ಧರ್ಮ" (θρησκεία, *thrēskeia*) ಎಂಬ ಪದವು

ಗ್ರೀಕ್ ಭಾಷೆಯಲ್ಲಿ ದೈವಿಕ ಆರಾಧನೆ ಎಂಬುದಕ್ಕೆ ಬಳಸುವ ನಿರ್ದಿಷ್ಟವಾದ ಪದವಾಗಿರುತ್ತದೆ. ಈ ಸನ್ನಿವೇಶದಲ್ಲಿ ಅದರ ಬಳಕೆಯು ನಿಜವಾದ ಆರಾಧನೆಯಲ್ಲಿ ಏನು ಅಡಕವಾಗಿರುತ್ತದೆಂಬುದನ್ನು ನಮಗೆ ತಿಳಿಸುತ್ತದೆ. ದೇವರನ್ನು ಸಮರ್ಪಕವಾಗಿ ಆರಾಧಿಸುವದಕ್ಕಾಗಿ ವಿಸ್ತಾರವಾದ ಕಟ್ಟಡ, ಸಭೆಯ ಪೀಠೋಪಕರಣಗಳು, ಅಥವಾ ಪಾದ್ರಿಯ ಉಡುಪುಗಳು ಅಗತ್ಯವೆಂದು ಕೆಲವರು ಹೇಳುವ ಪ್ರಕಾರವಾಗಿ ಇದು ಯಾವದೇ ಸಂಬಂಧವನ್ನು ಹೊಂದಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅದು ಹೃದಯದ ಸ್ಥಿತಿ, ಮತ್ತು ಒಬ್ಬನ ಜೊತೆಯ ಮನುಷ್ಯನ ಕಷ್ಟಗಳ ಮೇಲೆ ಗಮನವಿಟ್ಟಿರುವ ಕಣ್ಣುಗಳಿಗೆ ಹೆಚ್ಚು ಸಂಬಂಧ ಪಟ್ಟದ್ದಾಗಿದೆ.

ಯಾಕೋಬ 1:27ರಲ್ಲಿ "ಪರಾಮರಿಸಿ" ಎಂಬುದಕ್ಕಿರುವ ಗ್ರೀಕ್ ಕ್ರಿಯಾಪದವು (ἐπισκέπτομαι, *episkeptomai*) ಎಂಬ ಪದವು ಸಹ ಮಹತ್ವಪೂರ್ಣವಾಗಿರುತ್ತದೆ. ಅದು "ಸಭಾಧ್ಯಕ್ಷ" (ἐπίσκοπος, *episkopos*) ಎಂಬ ನಾಮಪದಕ್ಕೆ ಸಂಬಂಧ ಪಟ್ಟದ್ದಾಗಿದೆ, ಅದು "ಹಿರಿಯ" ಅಥವಾ "ಸಭಾಹಿರಿಯ" ಎಂಬುದರಂತೆಯೇ ಇರುತ್ತದೆ. ಈ ಪದವು ಆಂಗ್ಲ ಮಾತಾಡುವವನ ಮನಸ್ಸಿಗೆ ಸಾಧಾರಣವಾಗಿ ಬರುವದಕ್ಕಿಂತಲೂ ಅಧಿಕವಾದದ್ದನ್ನು ಒಳಗೊಂಡಿದೆ. ಇದು ಒಂದು ಸ್ನೇಹದಿಂದ ಕೂಡಿದ ಸಾಮಾಜಿಕ ಭೇಟಿ ನೀಡುವದನ್ನು ದಾಟಿ, ಬೇರೆಯವರಿಗೆ ಸಹಾಯವನ್ನು ಮತ್ತು ಆರೈಕೆಯನ್ನು ಒದಗಿಸುವದಾಗಿರುತ್ತದೆ.

ವಿಧವೆಯರನ್ನು ನೋಡಿಕೊಳ್ಳಬೇಕೆಂದು ಹಳೆಯ ಒಡಂಬಡಿಕೆಯಲ್ಲಿ ಒತ್ತಿ ಹೇಳಲ್ಪಟ್ಟಿರುತ್ತದೆಂಬುದು ಮಾತ್ರವೇ ಅಲ್ಲ, ಆದರೆ ಕಷ್ಟದಲ್ಲಿರುವವರನ್ನು ಪರಾಮರಿಸುವದು ಆದಿ ಸಭೆಯವರಿಗೆ ಸಹ ಬಹಳ ಪ್ರಾಮುಖ್ಯವಾಗಿತ್ತೆಂಬುದು ಸ್ಪಷ್ಟವಾಗಿ ಕಾಣಿಸುತ್ತದೆ.[49] ಪೌಲನು ಅವರನ್ನು ಪರಾಮರಿಸುವದರ ಕುರಿತಾಗಿ ವಿಶೇಷ ನಿಯಮಗಳನ್ನು ಮತ್ತು ನಿರ್ಬಂಧಗಳನ್ನು ನೀಡಿದನು. ಸಭೆಯಿಂದ ಸಹಾಯವನ್ನು ಪಡೆದುಕೊಳ್ಳುವದಕ್ಕೆ ಮೊಟ್ಟಮೊದಲ ಅರ್ಹತೆಯೆಂದರೆ ಅವರಿಗೆ ನಿಜವಾಗಿಯೂ ಕಷ್ಟವಿರುವದಾಗಿತ್ತು. "ಭಾರವನ್ನು" ಸಭೆಯ ಮೇಲೆ ಹಾಕದೆ "ದಿಕ್ಕಿಲ್ಲದ ವಿಧವೆಯರಿಗೆ ಸಹಾಯ"ವನ್ನು ಉತ್ತಮವಾಗಿ ಮಾಡುವಂತಾಗಲು ವಿಶ್ವಾಸಿಗಳ ಕುಟುಂಬ ಸದಸ್ಯರುಗಳು ಜವಾಬ್ದಾರರಾಗಿರುತ್ತಾರೆ (1 ತಿಮೊಥೆ 5:16). ಅಲ್ಲದೆ, ವಯಸ್ಸು, ಹಿಂದಿನ ನಡವಳಿಕೆ, ಮತ್ತು ಕೀರ್ತಿ ಇವುಗಳಂತಹ ಇತರ ಪರಿಗಣನೆಗಳನ್ನು ಸಹ ಆ ಸನ್ನಿವೇಶದಲ್ಲಿ ಪ್ರಸ್ತಾಪಿಸಲಾಗಿರುತ್ತದೆ (1 ತಿಮೊಥೆ 5:9-15).

ಗಲಾತ್ಯ 6ರಲ್ಲಿ, ಪೌಲನು ದೇವರಿಗೆ ಮೆಚ್ಚಿಕೆಯಾಗುವ ನಡವಳಿಕೆಯಲ್ಲಿ ಒಬ್ಬನ ಹಣಕಾಸನ್ನು ಮತ್ತು ಧಾನಧರ್ಮದಿಂದ ಕೊಡುವದನ್ನು ಒಳಗೊಂಡಿರುತ್ತದೆ ಎಂದು ಒತ್ತಿ ಹೇಳಿದನು. ದೇವರು ಸಭೆಯಲ್ಲಿರುವವರ ಕಷ್ಟಗಳ ಬಗ್ಗೆ ಮಾತ್ರವೇ ಕಾಳಜಿಯನ್ನು ಹೊಂದಿಲ್ಲ; ಆತನು ಹೊರಗಿರುವವರ ಕಷ್ಟಗಳ ಬಗ್ಗೆ ಸಹ ಚಿಂತಿಸುವವನಾಗಿದ್ದಾನೆ. ಪೌಲನು ಸಹೋದರರಿಗೆ ನೀಡುವ ಬುದ್ಧಿವಾದದಲ್ಲಿ ಎಲ್ಲಾ ಜನರನ್ನು ಸೇರ್ಪಡೆಗೊಳಿಸಲಾಗಿದೆ:

> ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ. ಯಾಕಂದರೆ ಮನಗುಂದದಿದ್ದರೆ ತಕ್ಕ ಸಮಯದಲ್ಲಿ ಬೆಳೆಯನ್ನು ಕೊಯ್ಯುವೆವು. ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ (6:9, 10).

ನಾವು ವಿಶೇಷವಾಗಿ ಇತರ ಕ್ರೈಸ್ತರಿಗೆ ಸಹಾಯವನ್ನು ಮಾಡತಕ್ಕದ್ದು, ಆದರೆ ಪ್ರತ್ಯೇಕವಾಗಿ ಅವರಿಗಷ್ಟೇ ಅಲ್ಲ. ಅಂತೂ, ಯೇಸುವು ಯಾರನ್ನು ರಕ್ಷಿಸಬೇಕೆಂದು ಬಂದನು? ದೇವರ ಕೃಪೆಯ ಅಂಗಳಗಳೊಳಗಿಂದ ಹೊರಗಿದ್ದವರಿಗಾಗಿ ಮತ್ತು ಆತನನ್ನು

ಅರಿತವರಾಗಿರುವವರಲ್ಲಿರಬೇಕಾದ ಉಪಕಾರ ಮತ್ತು ಕನಿಕರದ ಕ್ರಿಯೆಗಳನ್ನು ನೋಡುವ ಅತ್ಯಂಥ ಅಗತ್ಯವಿರುವಂತಹ ಜನರಿಗೋಸ್ಕರವಲ್ಲವೇ (ಮತ್ತಾಯ 5:16)? ನಾವು ಅಸಡ್ಡೆಯನ್ನು ತೋರುವವರಾಗಿ ನಾವು ಹೀಗೆ ಹೇಳಿ ಬಿಡಲು ಸಾಧ್ಯವಿಲ್ಲ, "ನಾವು ಅವರಿಗೆಲ್ಲಾ ಸಹಾಯವನ್ನು ಮಾಡುವದಕ್ಕಾಗುವದಿಲ್ಲ. ಬಡವರು ಯಾವಾಗಲೂ ನಮ್ಮ ಮಧ್ಯದಲ್ಲಿರುವರು ಎಂದು ಯೇಸುವು ಹೇಳಲಿಲ್ಲವೋ [ಮಾರ್ಕ 14:7]?"

ಸಾಮಾನ್ಯವಾಗಿ, ವಿಶ್ವ ಸುವಾರ್ತಾ ಸೇವೆಯನ್ನು ಮಾಡುವ ಅತ್ಯಂಥ ಪರಿಣಾಮಕಾರಿ ವಿಧಾನಗಳಲ್ಲೊಂದು ಎಂದರೆ ಸತ್ಕಾರ್ಯ ಮತ್ತು ಉಪಕಾರದ ಕ್ರಿಯೆಗಳನ್ನು ಮಾಡುವದೇ ಆಗಿರುತ್ತದೆ. ಇವುಗಳು ದೇವರಾತ್ಮನ ಗೋಚರವಾಗುವಂತಹ ಪ್ರತಿಫಲನಗಳಾಗಿರುತ್ತವೆ; ಅವುಗಳು ದೇವರ ವಾಕ್ಯವನ್ನು ಆಲಿಸುವಂತೆ ಜನರ ಹೃದಯಗಳನ್ನು ಮೃದುಗೊಳಿಸಬಲ್ಲವು. ಅನೇಕರು ಬಹಳಷ್ಟು ಸಾರಿ ತಮಗೆ ಗೊತ್ತಿಲ್ಲದಂತೆಯೇ, ಈ ಪ್ರೀತಿಯಿಲ್ಲದ ಜಗತ್ತಿನಲ್ಲಿ ದೇವರನ್ನು ಮತ್ತು ಜೀವನದ ಅರ್ಥವನ್ನು ಹುಡುಕುತ್ತಿರುತ್ತಾರೆ. ನಮ್ಮಲ್ಲಿ ಕೆಲವರು, ಸಹಾಯಕ್ಕಾಗಿ ಮೊರೆಯಿಡುತ್ತಿರುವ ಕೂಗುಗಳ ಸಮೂಹಗಳನ್ನು ಎದುರಿಗೆ ಕಾಣುವದರಿಂದ, ಸತ್ಕಾರ್ಯ ಮಾಡುವದಕ್ಕೆ ಮನಸ್ಸಿಲ್ಲದವರಾಗಿ ಹಣ ಸಹಾಯ ಮಾಡುವಿಕೆಯನ್ನು ಆರಾಧನೆಯ ಕೂಟಕ್ಕೆ ಮಾತ್ರವೇ ಸೀಮಿತಗೊಳಿಸಿಕೊಂಡಿರುವಂತೆ ಕಾಣುತ್ತದೆ. ನಾವು ಲೋಕದಲ್ಲಿರುವ ಸಕಲ ಬಾಧೆಗಳಿಗೆ ಪರಿಹಾರವನ್ನು ಮಾಡುವದಕ್ಕೆ ಸಾಧ್ಯವಿಲ್ಲ ಎಂಬುದು ನಿಜವೇ ಆಗಿರುತ್ತದಾದರೂ, ಹಾಗೆ ಮಾಡಿರುವದಕ್ಕೆ ನಮ್ಮನ್ನು ಒಪ್ಪಿಸಿಕೊಳ್ಳದೆ ಇರಕೂಡದು. ಯೇಸುವು "ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು" (ಮತ್ತಾಯ 20:31) ಎಂದು ಕೂಗಿಕೊಂಡ ಕುರುಡನನ್ನು ಅಸಡ್ಡೆ ಮಾಡಿದನೋ? ಒಳ್ಳೇ ಸಮಾರ್ಯದವನ ಕಥೆಯಲ್ಲಿರುವ ಯಾಜಕ ಹಾಗೂ ಲೇವಿಯನಂತೆ (ಲೂಕ 10:30-32), ಆತನು ದಾರಿಯ ಇನ್ನೊಂದು ಬದಿಗೆ ಸಾಗಿ ನಡೆದು ಹೋಗಿ ಬಿಟ್ಟನೋ? ಅದಕ್ಕೆ ತದ್ವಿರುದ್ಧವಾಗಿ, ಮತ್ತಾಯವನು ವರದಿ ಮಾಡುವದೇನೆಂದರೆ, "ಆಗ ಯೇಸು ಕನಿಕರಪಟ್ಟು ಅವರ ಕಣ್ಣುಗಳನ್ನು ಮುಟ್ಟಿದನು. ಕೂಡಲೆ ಅವರಿಗೆ ಕಣ್ಣು ಬಂದವು, ಅವರು ಆತನ ಹಿಂದೆ ಹೋದರು" (ಮತ್ತಾಯ 20:34). ಆತನು ಹಾಗೆ ಮಾಡದೆ ಇರುವದನ್ನು ನಾವು ಊಹಿಸಿಕೊಳ್ಳಲು ಸಹ ಸಾಧ್ಯವೋ?

ಯೇಸುವು ಭೂಮಿಯ ಮೇಲೆ ಮಾಡಿದ ತನ್ನ ಕ್ಲುಪ್ತವಾದ ಮೂರು ವರ್ಷಗಳ ಸೇವೆಯ ಸಮಯದ ವೇಳೆ ಫಿಲಿಷ್ಟಿಯದಲ್ಲಿ ಬಾಧೆ ಪಡುತ್ತಿರುವ ಪ್ರತಿಯೊಬ್ಬನನ್ನು ಗುಣಪಡಿಸಲಿಲ್ಲ. ನಾವು ಎದುರುಗೊಳ್ಳುವ ಸಕಲ ನೋವು ಮತ್ತು ದುರವಸ್ಥೆಗಳನ್ನೆಲ್ಲಾ ನಿವಾರಿಸಿಕೊಳ್ಳುವದೂ ನಮಗೆ ಸಾಧ್ಯವಿಲ್ಲ. ಹೇಗೂ, ನಾವು ಕೆಲವರನ್ನಾದರೂ ಆರೈಕೆ ಮಾಡಿ ಅವರ ಬಾಧೆಯನ್ನು ನೀಗಿಸಬಹುದಾಗಿದೆ. ನಾವು ಬೇರೆಯವರ ವೇದನೆಗಳನ್ನು ಕಂಡು ಕನಿಕರ ಪಡದಂತಹ ಹಂತವನ್ನು ಎಂದಿಗೂ ತಲುಪುವಂತಾಗದಿರಲಿ.

## ಬಿತ್ತುವದು ಮತ್ತು ಕೊಯ್ಯುವದು (6:7, 8)

ಗಲಾತ್ಯ 6:7, 8 ವಚನಗಳು "ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು" ಎಂಬ ತತ್ವವನ್ನು ಸಾಭಿತುಗೊಳಿಸುತ್ತವೆ. ಬಿತ್ತುವದು ಮತ್ತು ಕೊಯ್ಯುವದರ ಭಾಷೆಯು ಈ ವಿಧವಾದ ಸಂಕೀರ್ತನೆಗಳಲ್ಲಿ ಕಾಣಿಸಿಕೊಳ್ಳುತ್ತದೆ:

> ಸಹೋದರನೇ, ನಾವು ರಾಜ್ಯದ ಬೀಜವನ್ನು ಪ್ರಕಾಶಮಾನ ಹಾಗೂ ನ್ಯಾಯವಾದ ಮುಂಜಾನೆಯಲ್ಲಿ ಬಿತ್ತುತ್ತಿದ್ದೇವೋ?
> ಸಹೋದರನೇ, ನಾವು ಮಧ್ಯಾಹ್ನದ ಬಿಸಿಲಲ್ಲಿ ರಾಜ್ಯದ ಬೀಜವನ್ನು ಬಿತ್ತುತ್ತಿದ್ದೇವೋ?

ಯಾಕೆಂದರೆ ಕೊಯ್ಯುವ ಕಾಲ ಬರುತ್ತಿದೆ,
ಕೊಯ್ಯುವವರ ಕೆಲಸವು ಶೀಘ್ರವೆ ಮುಗಿದು ಹೋಗಲಿದೆ;
ನಿಮ್ಮ ಧಾನ್ಯದ ಸಿವುಡುಗಳು ಅನೇಕವಾಗಿರಲಿವೆಯೋ? ನೀವು ಕೊಯ್ಲಿನ ಮನೆಯಲ್ಲಿ ಸಂಗ್ರಹಿಸಿಡುವದಕ್ಕಾಗಿ ಏನನ್ನಾದರೂ ಕೂಡಿಸಿಕೊಳ್ಳುವಿರೊ?[50]

ಒಬ್ಬ ಬಾಲಕನಾಗಿ, ಈ ಮಾತುಗಳು ನನಗೆ ಗಾಂಭೀರ್ಯತೆಯನ್ನು ಹೊಂದಿದ್ದವು. ನಾನು ನನ್ನ ಹಿರಿಯ ಅಜ್ಜನ ತೋಟದಲ್ಲಿ ಜನಿಸಿದ್ದೆನು. ಆ ಮಹಾ ಆರ್ಥಿಕ ಕುಸಿತದ ದಿನಗಳಲ್ಲಿ, ನನ್ನ ಕುಟುಂಬದಂತಹ ಜನರು ಎಲ್ಲವೂ ಭೂಮಿಯ ಫಲದ ಮೇಲೆ ಆಧಾರಗೊಂಡಿರುತ್ತದೆಂದು ತಿಳಿದುಕೊಂಡಿದ್ದರು. ಸೂರ್ಯನು ಮತ್ತು ಮಳೆಯು ತಕ್ಕ ಕಾಲದಲ್ಲಿ ಕಾಣಿಸಿಕೊಳ್ಳದೆ ಹೋದರೆ, ಫಲಿತವು ಸಾಕಷ್ಟು ಚಿಂತೆಯಿಂದ ಕೂಡಿರುತ್ತಿತ್ತು. ನನ್ನ ತಂದೆಯು ಎಲ್ಲಾ ರೀತಿಯಿಂದ ಕಠಿಣವಾಗಿ ಪ್ರಯಾಸ ಪಟ್ಟಾಗ್ಯೂ ಮತ್ತು ನನ್ನ ಹೆತ್ತವರ ಹುರುಪುಳ್ಳ ನಂಬಿಕೆ ಮತ್ತು ಪ್ರಾರ್ಥನೆಗಳ ಹೊರತಾಗಿಯೂ, ಭವಿಷ್ಯದ ಕುರಿತಾಗಿ ಕೆಲವೊಂದು ಸಂದೇಹಗಳು ಏಳುತ್ತಿದ್ದವು.

ನಾವು ಆ ದಿನಗಳಲ್ಲಿ ಹಾಡುತ್ತಿದ್ದ ಒಂದು ಸಂತೋಷದ ಹಾಡು ಈ ಮಾತುಗಳನ್ನೊಳಗೊಂಡಿತ್ತು:

ಮುಂಜಾನೆಯಲ್ಲಿ ಬಿತ್ತುವದು, ದಯೆಯ ಬೀಜಗಳನ್ನು ಬಿತ್ತುವದು,
ಮದ್ಯಾಹ್ನದ ಹೊತ್ತಲ್ಲಿ ಮತ್ತು ಮಂಜಿನ ಸಾಯಂಕಾಲಗಳಲ್ಲಿ ಬಿತ್ತುವದು;
ಸುಗ್ಗಿಗಾಗಿ ಮತ್ತು ಕೊಯ್ಯುವ ಸಮಯಕ್ಕಾಗಿ ಕಾಯುವದು,
ನಾವು ಆನಂದ ಪಡುವವರಾಗಿ ಬರುವೆವು, ಧಾನ್ಯದ ಸಿವುಡುಗಳನ್ನು ತರುವೆವು.[51]

ಭೂಮಿಯ ಫಲವನ್ನಾಧರಿಸಿ ಜೀವಿಸುತ್ತಿದ್ದವರಾಗಿ, ನಾವು ಈ ನಂಬಿಕೆಯ ಸರಳ ಮಾತುಗಳನ್ನು ಪ್ರಾಮಾಣಿಕವಾದ ಸಂತೋಷದಿಂದ ಹಾಡುತ್ತಿದ್ದೆವು, ಜೊತೆಗೆ ಪ್ರತಿ ವರ್ಷದ ಸುಗ್ಗಿಯು ನಮ್ಮ ನಿರೀಕ್ಷೆಗಳನ್ನು ನೆರವೇರಿಸುವದೆಂಬ ಪ್ರಾರ್ಥನೆಯನ್ನು ಮಾಡುತ್ತಿದ್ದೆವು. ಈ ಹಾಡು ಧಾನ್ಯದ ಸುಗ್ಗಿಗಳೊಂದಿಗೆ ಸಂಬಂಧಿಸಿದ್ದಾಗಿತ್ತಾದರೂ, ನನ್ನ ಕುಟುಂಬವು ಜೋಳ ಮತ್ತು ತರಕಾರಿಗಳ ದೇಶದಲ್ಲಿ ಜೀವಿಸುತ್ತಿತ್ತು. ಎಂದಿಗೂ ಧಾನ್ಯದ ಸಿವುಡುಗಳನ್ನು ನೋಡದಂತಹ ಮಕ್ಕಳಾಗಿದ್ದರಿಂದ, ನಮಗೆ ಚಿತ್ರಗಳಿಂದ ವಿವರಿಸಬೇಕಾಗಿತ್ತು. ಅಂಥ ಹಾಡುಗಳಲ್ಲಿರುತ್ತಿದ್ದ ನಮ್ಮ ಸಂತೋಷವನ್ನು ಕುಂದಿಸುವದಕ್ಕೆ ಇದರಿಂದ ಸಾಧ್ಯವಾಗಲಿಲ್ಲ, ಯಾಕೆಂದರೆ ಅತ್ಯಲ್ಪವಾದ ಬೆಳೆಯುವ ಕಾಲದಿಂದಾಗಿ ಮುಂಬರುವ ವರ್ಷದಲ್ಲಿ ನಮ್ಮ ಜೀವನ ಗುಣಮಟ್ಟಕ್ಕೆ ಯಾವ ಅರ್ಥವನ್ನು ಹೊಂದಿರುತ್ತದೆಂದು ನಾವು ಚೆನ್ನಾಗಿ ತಿಳಿದಿದ್ದೆವು.

## ಒಳ್ಳೇದನ್ನು ಮಾಡುವದು (6:9, 10)

ಪೌಲನು ಗಲಾತ್ಯದಲ್ಲಿನ ಸಹೋದರರಿಗೆ ಹೀಗೆ ಬುದ್ಧಿ ಹೇಳಿದನು, "ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳದೆ ಇರೋಣ" (ಗಲಾತ್ಯ 6:9). ಜಯಿಸಬೇಕಾಗಿರುವ ಸಮಸ್ಯೆಗಳು, ಲೋಕದಲ್ಲಿಯೂ ಸಭೆಯಲ್ಲಿಯೂ ನಮಗೆ ಯಾವಾಗಲೂ ಎದುರಾಗುವವು. ಈ ಪತ್ರಿಕೆಯು ಬರೆಯಲ್ಪಟ್ಟ ಎರಡು ಸಾವಿರ ವರ್ಷಗಳ ಹಿಂದೆ ಇದ್ದ ಹೇಗೋ, ಇಂದು ಸಹ ಹಾಗೆಯೇ ಇರುತ್ತದೆ.

ಆಗಿನ ವಿರೋಧಿಗಳು ಪೌಲನ ಅಪೊಸ್ತಲಿಕ ಅಧಿಕಾರದ ಬಗ್ಗೆ ಪ್ರಶ್ನೆಯನ್ನು ಎತ್ತಿದರು, ಮತ್ತು ಇಂದು ಕೆಲವೊಂದು ದೈವಶಾಸ್ತ್ರಜ್ಞರು ಅದನ್ನೇ ಮಾಡುತ್ತಾರೆ. ಅವರು

ವಾದಿಸುವದೇನಂದರೆ, ಆತನು ತನ್ನ ಪತ್ರಿಕೆಗಳನ್ನು ಬರೆಯುತ್ತಿದ್ದ ಸಂದರ್ಭದಲ್ಲಿ, ಅಪೊಸ್ತಲನಿಗೆ ತಾನು ಪ್ರೇರಿತ ಶಾಸ್ತ್ರಗಳನ್ನು ಬರೆಯುತ್ತಿದ್ದೇನೆಂದು ಗೊತ್ತಿರಲಿಲ್ಲ. ಬದಲಾಗಿ, ಆತನು ತನ್ನ ಸ್ಥಳೀಯ "ಕುರಿ" ಮಂದೆಗಳನ್ನು ಅವರ ಯೆಹೂದಿ ಸಹೋದರರಿಂದ ದಾರಿ ತಪ್ಪಿಸಲ್ಪಡದಂತೆ ತಡೆಯುವದಕ್ಕಾಗಿ ಸಮಾಧಾನಗೊಳಿಸಲು ಪ್ರಯತ್ನಿಸುತ್ತಿದ್ದನಷ್ಟೆ ಎಂದು ಅವರು ಹೇಳುತ್ತಾರೆ. ಯೆಹೂದಿ ಮತ್ತು ಅನ್ಯಜನಾಂಗದ ಕ್ರೈಸ್ತರು ಒಂದಾಗಿ ಕೂಡಿ ಬಾಳುವಂತಾಗುವ ಹಾಗೆ ಆಗಬೇಕೆಂಬುದಕ್ಕಾಗಿ ಆತನು ಬರೆಯುತ್ತಿದ್ದನೆಂದು ಅವರು ವಾದಿಸುತ್ತಾರೆ.

ಅಂಥ ಅಭಿಪ್ರಾಯಗಳು ದೋಷದಿಂದ ಕೂಡಿರುತ್ತವೆ. ಪೌಲನಿಗಾದರೋ, ಸಿದ್ಧಾಂತವು ನಿಜಕ್ಕೂ ಮಹತ್ವದ್ದಾಗಿತ್ತು! ಪ್ರಕಟಗೊಂಡಿರುವ ಸತ್ಯದ ವಿಷಯದಲ್ಲಿ ರಾಜಿ ಮಾಡಿಕೊಳ್ಳುವದು ಎಂದಿಗೂ ಒಂದು ಸ್ವೀಕಾರರ್ಹವಾದ ಪರಿಹಾರವಾಗಿರುವದಿಲ್ಲ. ಸತ್ಯದ ವಿಷಯದಲ್ಲಿ ರಾಜಿ ಮಾಡಿಕೊಂಡಾಗ, ಅದು ಸಾಮಾನ್ಯವಾಗಿ ಬಹಳಷ್ಟು ನಂಬಿಗಸ್ತ ಸಹೋದರರು "ಬೇಸರಗೊಂಡು" ನಿರಾಶೆಗೊಳ್ಳುವದರಲ್ಲಿ ಅಂತ್ಯಗೊಳ್ಳುತ್ತದೆ. ಸತ್ಯವು ಸತ್ಯವೆಂಬುದಾಗಿ ಅಂಗೀಕರಿಸಿಕೊಳ್ಳಲ್ಪಡದಿರುವಾಗ, ಕ್ರಿಸ್ತನ ಅಧಿಕಾರವು ಹಾನಿಗೊಳಗಾಗುತ್ತದೆ ಮತ್ತು ಪವಿತ್ರಾತ್ಮನ ಶಕ್ತಿಯು ನಂದಿಸಲ್ಪಡುತ್ತದೆ.

ಅಷ್ಟುಮಾತ್ರವಲ್ಲದೆ, ತನ್ನ ಬರಹಗಳು ದೇವರಿಂದ ಪ್ರೇರಿತವಾಗಿದ್ದವೆಂಬುದು ಪೌಲನಿಗೆ ಗೊತ್ತಿತ್ತು (1:11, 12; ನೋಡಿರಿ 1 ಕೊರಿಂಥ 14:37, 38). ಪೇತ್ರನು ಅದೇ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾನೆ (2 ಪೇತ್ರ 3:14-16). ಯಾವದೇ ಶಾಸ್ತ್ರದಲ್ಲಿನ ಸತ್ಯದ ವಿಷಯದಲ್ಲಿ ದೋಷವಿರುವದನ್ನು ಎಂದಿಗೂ ಹಗುರವಾಗಿ ತೆಗೆದುಕೊಳ್ಳಕೂಡದು; ಆದರೆ ಯಾವದೇ ಬೋಧಕ, ಉಪದೇಶಕ, ಪ್ರಾಧ್ಯಾಪಕ, ಅಥವಾ ದೈವಶಾಸ್ತ್ರಜ್ಞನು ಶಾಸ್ತ್ರಗಳು ಪ್ರೇರಿತವಾದವುಗಳೆಂಬುದನ್ನು ನಿರಾಕರಿಸುವದಾದರೆ ಒಂದಕ್ಕಿಂತ ಅಧಿಕ ತಪ್ಪುಗಳನ್ನು ಮಾಡಿದವನಾಗಿರುತ್ತಾನೆ. ಈ ವಿಧವಾದ ನಿರಾಕರಣೆಯು ಒಂದು ವ್ಯವಸ್ಥಿತವಾದ ದೋಷವಾಗಿದೆ, ಮತ್ತು ಅದನ್ನು ಉತ್ತೇಜಿಸುವ ಯಾವನೇ ಆಗಲಿ ಆತನನ್ನು ಸುಳ್ಳು ಬೋಧಕ ಎಂದು ಗುರುತಿಸತಕ್ಕದ್ದು.[52] ನಿರ್ದಿಷ್ಟವಾಗಿ ಗಲಾತ್ಯದಲ್ಲಿನ ಪರಿಸ್ಥಿತಿಗೆ ಸಂಬಂಧಿಸುವದೇನೆಂದರೆ ಪೌಲನು ತಿಮೊಥೆಯನಿಗೆ ಬರೆದ ವಿಷಯವೇ:

> ಶುದ್ಧ ಹೃದಯ ಒಳ್ಳೇಮನಸ್ಸಾಕ್ಷಿ ನಿಷ್ಕಪಟವಾದ ನಂಬಿಕೆ ಎಂಬಿವುಗಳಿಂದ ಹುಟ್ಟಿದ ಪ್ರೀತಿಯೇ ದೇವವಾಕ್ಯೋಪದೇಶದ ಗುರಿಯಾಗಿದೆ. ಕೆಲವರು ಈ ಗುರಿ ತಪ್ಪಿ ವ್ಯರ್ಥವಾದ ವಿಚಾರಗಳಿಗೆ ತಿರುಗಿಕೊಂಡಿದ್ದಾರೆ; ಅವರು ಧರ್ಮೋಪದೇಶಕರಾಗಿರಬೇಕೆಂದಿದ್ದರೂ ತಾವು ಹೇಳುವದಾಗಲಿ ತಾವು ದೃಢವಾಗಿ ಮಾತಾಡುವ ವಿಷಯವಾಗಲಿ ಇಂಥದೆಂದು ತಿಳಿಯದವರಾಗಿದ್ದಾರೆ (1 ತಿಮೊಥೆ 1:5-7).

"ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (6:10) ಎಂಬುದು ಅನೇಕ ಬುದ್ಧಿವಾದಗಳನ್ನೊಳಗೊಂಡಿದ್ದು ಅದು ವರ್ಣ, ಲಿಂಗ, ಅಥವಾ ಆರ್ಥಿಕ ಸ್ಥಾನಮಾನದ ಆಧಾರದಲ್ಲಿ ಬೇರ್ಪಡಿಸುವದು ಅಥವಾ ಪಕ್ಷಪಾತ ಮಾಡುವದನ್ನು ನಿಷೇಧಿಸುತ್ತದೆ. ಬೇರೆಯವರಿಗೆ ಸಹಾಯವನ್ನು ಮಾಡುವ ವೇಳೆ, ಕರ್ತನ ಸಭೆಯ ಸದಸ್ಯರಿಗೆ ಮೊದಲು ಕಾಳಜಿ ಮಾಡಲ್ಪಡುವಂತೆ ಕ್ರೈಸ್ತರು ಜಾಗ್ರತೆ ವಹಿಸತಕ್ಕದ್ದು. ಸಾಮಾಜಿಕ ಸಂಬಂಧಗಳಲ್ಲಿ, ಕ್ರೈಸ್ತನು ಸಾಧ್ಯವಾಗುವಾಗಲೆಲ್ಲಾ ಜೊತೆಯ ಕ್ರೈಸ್ತನೊಬ್ಬನಿಗೆ ಅಥವಾ ಒಬ್ಬ ಅವಿಶ್ವಾಸಿಗೆ ನೋವುಂಟು

ಮಾಡುವದರಿಂದ ದೂರವಿರಬೇಕು - ಒಬ್ಬನು ತನ್ನ ಹಕ್ಕುಗಳನ್ನು ಬಿಟ್ಟು ಕೊಡಬೇಕಾಗಿ ಬಂದಾಗ್ಯೂ ಅದನ್ನು ಮಾಡತಕ್ಕದ್ದು.[53] ಇದು ಆದಿ ಕ್ರೈಸ್ತರಿಗೆ, ಪವಿತ್ರಾತ್ಮನ ಸಹಾಯದೊಂದಿಗೆ ಸಹ ಧಾರ್ಮಿಕ ಹಿನ್ನಲೆಗಳನ್ನು ಮತ್ತು ರಾಜಕೀಯಾಗಿ ಪ್ರಬಲರಾದ ರೋಮನ್ನರು, ಸಾಂಸ್ಕೃತಿಕವಾಗಿ ಸರ್ವೋತ್ಕೃಷ್ಟರಾಗಿದ್ದ ಗ್ರೀಕ್ ಜನರ, ಮತ್ತು ಧಾರ್ಮಿಕವಾಗಿಯೂ ನೈತಿಕವಾಗಿಯೂ ಸರ್ವೋಚ್ಛವಾಗಿದ್ದ ಪ್ರಥಮ ಶತಮಾನದ ಯೆಹೂದ್ಯರ ಸಾಂಸ್ಕೃತಿಕ ವಿಧಿಗಳನ್ನು ಸಮ್ಮಿಲನಗೊಳಿಸುವದು ಒಂದು ಚಿಕ್ಕ ಸಾಧನೆಯೇನೂ ಆಗಿರಲಿಲ್ಲ. ಇವರೆಲ್ಲರೂ ಪವಿತ್ರಾತ್ಮನ ಮೂಲಕ ಪರಸ್ಪರರೊಂದಿಗೆ ಅರ್ಥಪೂರ್ಣವಾದ ಅನ್ಯೋನ್ಯತೆಯನ್ನು ಹೊಂದುವ ಸಾಮರ್ಥ್ಯವುಳ್ಳ ಸ್ಥಳೀಯ ಗುಂಪುಗಳಾಗಿ (ಸಭೆಗಳಾಗಿ) ಒಂದುಗೂಡಿಸಲ್ಪಟ್ಟಿದ್ದರು. ಸ್ಪಷ್ಟವಾಗಿರುವಂತೆ, ಇದರಲ್ಲಿ ಭಾಗಿಯಾಗಿರುವವರೆಲ್ಲರೂ ಸಾಕಷ್ಟು ಪ್ರಮಾಣದಲ್ಲಿ ತ್ಯಾಗವನ್ನು ಮಾಡುವದು ಅಗತ್ಯವಾಗಿತ್ತು. ತಲೆಗೆ ಮುಸುಕು ಹಾಕಿಕೊಳ್ಳುವದು, ಶುದ್ಧ ಮತ್ತು ಅಶುದ್ಧವಾದ ಆಹಾರಗಳು, ಪವಿತ್ರ ದಿನಗಳು, ಸುನ್ನತಿ, ಮತ್ತು ವಿಗ್ರಹಕ್ಕೆ ನೈವೇದ್ಯ ಮಾಡಿದ ಆಹಾರಗಳು ಈ ಮುಂತಾದವುಗಳಿಗೆ ಗಮನ ಹಾಗೂ ಜಾಗರೂಕತೆಯಿಂದ ಆಲೋಚಿಸುವದು ಅಗತ್ಯವಾಗಿತ್ತು.

ಕೆಲವು ಸಾರಿ ಭಾಷೆಯು ಸ್ವತಃ ವಿಷಪೂರಿತವಾಗಿರುತ್ತಿತ್ತು. “ಕರ್ತನು” (κύριος, *kurios*) ಎಂಬ ಪದವು ಸಹ ಒಬ್ಬ ಕ್ರೈಸ್ತನನ್ನು ಯಾರು ಕರ್ತನು, ಕ್ರಿಸ್ತನೋ ಅಥವಾ ಕೈಸರನೋ ಎಂಬ ಅಪಾಯಕಾರಿ ಪ್ರಶ್ನೆಯಲ್ಲಿ ಸಿಲುಕಿಸುತ್ತಿತ್ತು. ಇದು ಕೈಸರನನ್ನು ಒಪ್ಪಿಕೊಂಡು ಕ್ರಿಸ್ತನನ್ನು ತಿರಸ್ಕರಿಸುವ ಅಥವಾ ಕ್ರಿಸ್ತನನ್ನು ಅರಿಕೆ ಮಾಡಿ ರಕ್ತಸಾಕ್ಷಿಯಾಗಿ ಮರಣಿಸಬೇಕಾಗುವಂತಹ ವಿಷಯವಾಗಿ ಮಾರ್ಪಡಬಹುದಿತ್ತು.

ಪೌಲನು ತನ್ನ ಆರಂಭಿಕ ಪತ್ರಿಕೆಗಳನ್ನು ಬರೆಯುತ್ತಿದ್ದ ವೇಳೆ, ಮೂರು ಪ್ರಮುಖ ಸಂಸ್ಕೃತಿಗಳ ಹಿನ್ನಲೆಯಿಂದ ಪರಿವರ್ತನೆಗೊಂಡಿದ್ದ ವಿಶ್ವಾಸಿಗಳನ್ನು ಒಗ್ಗೂಡಿಸುವದು ಕಷ್ಟಕರವಾಗಿದ್ದಿರಬಹುದಾಗಿದೆ. ಒಬ್ಬ ಭಕ್ತಿಯುಳ್ಳ ಶಿಷ್ಯನಾಗಿದ್ದಂಥ ಪೌಲನು ಪಟ್ಟು ಬಿಡದೆ ಪ್ರಯತ್ನಿಸಿದ್ದನು. ಕಾಲವು ಗತಿಸಿದಂತೆ, ಆತನು ಪರಸ್ಪರರನ್ನು ಸೇರಿಸಿಕೊಂಡದ್ದು ಮಾತ್ರವೇ ಅಲ್ಲ ಆದರೆ ಒಬ್ಬರಿಗೊಬ್ಬರು ಸಹಾಯವನ್ನು ಸಹ ಮಾಡುವವರಾದ ಜನಾಂಗೀಯವಾಗಿ ಭಿನ್ನತೆಯಿದ್ದಂಥ ಸಭೆಗಳನ್ನು ಸ್ಥಾಪಿಸುವದರಲ್ಲಿ ಆತನು ಯಶಸ್ವಿಯಾದನು. ಆತನ ಸ್ವಂತ ಬರಹಗಳಿಂದ ಮಾತ್ರವಲ್ಲದೆ ಅಪೊಸ್ತಲರ ಕೃತ್ಯಗಳು ಪುಸ್ತಕದಿಂದ, ನಾವು ಪ್ರಧಾನವಾಗಿ ಗ್ರೀಸ್, ಮಕೆದೋನ್ಯ, ಮತ್ತು ಆಸ್ಯ ಸೀಮೆಗಳಲ್ಲಿದ್ದ ಅನ್ಯಜನಾಂಗದ ಸಭೆಗಳು ಫಿಲಿಷ್ಟಿಯದಲ್ಲಿದ್ದ ಬಡವರಾದ ಯೆಹೂದಿ ಕ್ರೈಸ್ತರಿಗೆ ಸಹಾಯ ಮಾಡಲು ದಾರಾಳವಾಗಿ ಕೊಡುವದನ್ನು ಕಾಣುತ್ತೇವೆ.[54]

## ಪಕ್ಷಪಾತವನ್ನು ತೋರಿಸುವದು (6:12, 13)

ಪೌಲನು ಗಲಾತ್ಯದಲ್ಲಿನ ಕ್ರೈಸ್ತರಿಗೆ ಹೀಗೆ ಹೇಳಿದನು, “ಬಹಿರಾಚಾರಗಳಿಂದ ಮಾನಪಡೆಯಬೇಕೆಂದಿರುವವರು ಸುನ್ನತಿಮಾಡಿಸಿಕೊಳ್ಳಿರಿ ಎಂಬದಾಗಿ ನಿಮ್ಮನ್ನು *ಬಲಾತ್ಕರಿಸುತ್ತಾರೆ*” (6:12; ಒತ್ತಿ ಹೇಳಿದ್ದು ನನ್ನದು). ಈ ಮಾತುಗಳಲ್ಲಿ, ಪೌಲನು ಪೇತ್ರನನ್ನು ಗದರಿಸಿದಂಥ ಅಂತಿಯೋಕ್ಯದಲ್ಲಿನ ಆ ದುಃಖದ ದಿನದ ಒಂದು ಅಪಾರ್ಥಕ್ಕೆ ಎಡೆಯಿಲ್ಲದಂಥ ಪ್ರತಿಧ್ವನಿಯನ್ನು ಕಾಣುತ್ತೇವೆ. ಪೌಲನು ಆ ಕಥೆಯನ್ನು 2:14ರಲ್ಲಿ ಹೇಳಿದನು: “. . . ನಾನು ಕಂಡಾಗ ಎಲ್ಲರ ಮುಂದೆ ಕೇಫನಿಗೆ ಹೇಳಿದ್ದೇನಂದರೆ - ನೀನು ಯೆಹೂದ್ಯನಾಗಿದ್ದು ಯೆಹೂದ್ಯರಂತೆ ನಡೆಯದೆ ಅನ್ಯಜನರಂತೆ ನಡೆದ ಮೇಲೆ ಅನ್ಯಜನರಿಗೆ - ನೀವು ಯೆಹೂದ್ಯರ

ಪದ್ಧತಿಗಳನ್ನು ಅನುಸರಿಸಬೇಕೆಂದು ನೀನು *ಬಲಾತ್ಕಾರ* ಮಾಡುವದು ಹೇಗೆ?" (ಒತ್ತಿ ಹೇಳಿದ್ದು ನನ್ನದು).

ಯಾರನ್ನೇ ಆಗಲಿ ಸುನ್ನತಿ ಮಾಡಿಸಿಕೊಳ್ಳುವಂತೆ ಒತ್ತಾಯಿಸಬೇಕೆಂಬುದು ಪೇತ್ರನ ಪ್ರಜ್ಞಾಪೂರ್ವಕವಾದ ಇಂಗಿತವಾಗಿರಲಿಲ್ಲ, ಆದರೆ ಆತನ ಮಾದರಿಯ ಮೂಲಕವಾಗಿ ಅದನ್ನೇ ಮಾಡುವಂತೆ ಅನ್ಯಜನರ ಮೇಲೆ ಆತನು ಒತ್ತಡ ಹಾಕುವಂತಿತ್ತು. ಆತನು ಇಡೀ ಕ್ರೈಸ್ತ ಚಳುಚಳಿಯಲ್ಲಿಯೇ ಅತ್ಯಂಥ ಪ್ರಧಾನ ಹಾಗೂ ಪ್ರಭಾವಶಾಲಿ ನಾಯಕರಲ್ಲೊಬ್ಬನಾಗಿದ್ದನು. ಇದೇ ಪೇತ್ರನಿಗೆ ಯೇಸುವು ಪರಲೋಕ ರಾಜ್ಯದ ಬೀಗದ ಕೈಗಳನ್ನು ಕೊಟ್ಟಿದ್ದು ಮಾತ್ರವೇ ಆಗಿರಲಿಲ್ಲ,[55] ಆದರೆ ಯೇಸುವು ಈತನಿಗೆ "ಬಂಡೆ" ಎಂದು ಸಹ ಅಡ್ಡ ಹೆಸರು ಇಟ್ಟಿದ್ದನು (ನೋಡಿರಿ ಯೋಹಾನ 1:42[56]). ಅಷ್ಟೇ ಅಲ್ಲದೆ, ಕೆಲವೊಂದು ಪರಿಸ್ಥಿತಿಗಳಲ್ಲಿ, ಪೇತ್ರನು ನಿರಾಶೆಯನ್ನು ಹುಟ್ಟಿಸುವಷ್ಟು ದುರ್ಬಲನಾಗಿರುತ್ತಿದ್ದನು. ಇಲ್ಲಿ ನಾವೆಲ್ಲರೂ ಮನಸ್ಸಿಗೆ ತೆಗೆದುಕೊಳ್ಳಬೇಕಾದ ಒಂದು ಪಾಠವು ಉದ್ಭವವಾಗುತ್ತದೆ: ನಾವು ನಮ್ಮಷ್ಟಕ್ಕೆ ನಾವೇ ಉಳಿದುಕೊಳ್ಳುವಾಗ ಮತ್ತು ಮೌನವಾಗಿರುವಾಗ ಅಥವಾ ಗುಂಪಿನ ಜೊತೆಯಲ್ಲಿ ನಡೆಯುವಾಗ, ನಮ್ಮ ವೈಯಕ್ತಿಕ ಮಾದರಿಯು ಬೇರೆಯವರಿಗೆ ಸಹ ಅನುಸರಿಸಬೇಕೆಂದು ಒತ್ತಡವನ್ನುಂಟು ಮಾಡುವದಾಗಿರುತ್ತದೆ, ಹೀಗೆ ದೊಡ್ಡ ಹಾನಿಯನ್ನುಂಟು ಮಾಡುವದರಲ್ಲಿ ಫಲಿತಗೊಳ್ಳುತ್ತದೆ.

ಜನಾಂಗೀಯತೆಯ ವಿಷಯದಲ್ಲಿ ದೇವರಿಗೆ ಯಾವ ಪಕ್ಷಪಾತವೂ ಇರುವದಿಲ್ಲ ಎಂಬುದನ್ನು ಪೇತ್ರನ ಕಥೆಯು ನಮಗೆ ಜ್ಞಾಪಿಸುತ್ತದೆ. ಆತನು ಮತ್ತು ಇತರ ಅಪೊಸ್ತಲರು ಪಂಚಾಶತ್ತಮ ದಿನದಂದು ಸುವಾರ್ತೆಯನ್ನು ಸಾರಿದ ವೇಳೆ, ಅವರ ಶ್ರೋತೃಗಳ ಹೃದಯಕ್ಕೆ ಅಲಗು ನೆಟ್ಟಂತಾಗಿ ಅವರು ತಾವೇನು ಮಾಡಬೇಕು ಎಂದು ಕೇಳಿದರು. ಪೇತ್ರನು ಅವರಿಗೆಲ್ಲಾ ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38). ಆತನು ಕೇವಲ ಈ ಅಪ್ಪಣೆಗಳನ್ನು ಕೊಟ್ಟು ಅಷ್ಟಕ್ಕೇ ನಿಲ್ಲಿಸಲಿಲ್ಲ, ಆತನು ಇನ್ನೂ ಹೇಳಿದ್ದೇನೆಂದರೆ, "ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ *ದೂರವಾಗಿರುವವರೆಲ್ಲರಿಗೂ* ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" (ಅಪೊಸ್ತಲರ ಕೃತ್ಯಗಳು 2:39; ಒತ್ತಿ ಹೇಳಿದ್ದು ನನ್ನದು).

ಪೇತ್ರನು ಅದಾಗಿ ಕೆಲವು ವರ್ಷಗಳ ಬಳಿಕ ದೇವರಿಂದ ಕೊರ್ನೇಲ್ಯನ ಮನೆಗೆ ಕಳುಹಿಸಲ್ಪಡುವ ತನಕವೂ ತಾನು ಪವಿತ್ರಾತ್ಮ-ಪ್ರೇರಿತವಾಗಿ ನುಡಿದ ಮಾತುಗಳ ಪೂರ್ಣ ಅರ್ಥವನ್ನು ಗ್ರಹಿಸಿಕೊಂಡಿರಲಿಲ್ಲ. ಆ ಸಂದರ್ಭದಲ್ಲಿ, ಪೇತ್ರನು ಹೀಗೆ ಹೇಳಿದನು, "ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಗೆಯಾಗಿದ್ದಾರೆಂದು ಈಗ ಸಂದೇಹವಿಲ್ಲದೆ ನನಗೆ ತಿಳಿದುಬಂದಿದೆ" (ಅಪೊಸ್ತಲರ ಕೃತ್ಯಗಳು 10:34, 35). ಈ ಸನ್ನಿವೇಶದಲ್ಲಿ "ದೇವರಿಗೆ ಭಯಪಟ್ಟು" ಎಂಬುದರ ಅರ್ಥವು "ಆತನನ್ನು ಪೂಜ್ಯಭಾವದಿಂದ ಕಾಣುವ" ಎಂದಾಗಿದ್ದು, ಅದು ಕೊರ್ನೇಲ್ಯನೆಂಬ ಮನುಷ್ಯನಿಗಿದ್ದ ಗುಣಸ್ವಭಾವವೆಂದು ಪ್ರಸ್ತಾಪಿಸಲ್ಪಟ್ಟದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 10:1, 2, 22).

ಅಪೊಸ್ತಲರ ಕೃತ್ಯಗಳು 10:34, 35ರಲ್ಲಿ ಪೇತ್ರನು ನುಡಿದ ಮಾತುಗಳಲ್ಲಿರುವ ಇನ್ನೊಂದು ಪ್ರಾಮುಖ್ಯವಾದ ಪದಗುಚ್ಛವೆಂದರೆ "ಪಕ್ಷಪಾತಿ" (προσωπολήμπτης, *prosōpolēmptēs*) ಎಂಬುದು, ಅದನ್ನು "ವ್ಯಕ್ತಿಗಳನ್ನು ಗೌರವಿಸುವವನು" (KJV) ಎಂದು ಅನುವಾದಿಸಬಹುದಾಗಿದೆ.

ಅದು “ಮುಖ” ಅಥವಾ “ಹೊರಗಿನ ತೋರಿಕೆ” (πρόσωπον, *prosōpon*) ಎಂಬ ಪದವನ್ನು “ಸೇರಿಸಿಕೋ” ಅಥವಾ “ಸ್ವೀಕರಿಸಿಕೋ” (λαμβάνω, *lambanō*) ಎಂಬುದರೊಂದಿಗೆ ಒಂದುಗೂಡಿಸುವ ಸಂಯುಕ್ತ ಪದವಾಗಿರುತ್ತದೆ. ಹಾಗಾದರೆ ಈ ಪದದಿಂದ ಉಂಟಾಗುವ ಅರ್ಥವು “ಪಕ್ಷಪಾತ ತೋರಿಸು” ಅಥವಾ ಒಬ್ಬನಿಗೆ, ವಿಶೇಷವಾಗಿ ತೀರ್ಪಿನಲ್ಲಿ “ಮತ್ತೊಬ್ಬರಿಗಿಂತ ಆದ್ಯತೆ ನೀಡು” ಎಂದಾಗಿರುತ್ತದೆ.

ಹೊಸ ಒಡಂಬಡಿಕೆಯು ಈ ವಿಧವಾದ ನಡವಳಿಕೆಯನ್ನು ಖಂಡಿಸುತ್ತದೆ. ಉದಾಹರಣೆಗೆ, ಯಾಕೋಬನು ಬಡವರಿಗಿಂತಲೂ ಅಧಿಕವಾಗಿ ಶ್ರೀಮಂತರಿಗೆ ಅಥವಾ ಹೊಲಸು ಬಟ್ಟೆ ಹಾಕಿಕೊಂಡವರಿಗಿಂತ ಉತ್ತಮವಾದ ಉಡುಪು ಧರಿಸಿರುವವರಿಗೆ ವಿಶೇಷ ಗೌರವ ನೀಡುವದರ ವಿರುದ್ಧವಾಗಿ ಬರೆದನು (ಯಾಕೋಬ 2:1-9). ಪೌಲನು “ಯಾರು ಹೃದಯದ ವಿಷಯದಲ್ಲಿ ಹಿಗ್ಗದೆ ತೋರಿಕೆಯ ವಿಷಯದಲ್ಲಿ ಮಾತ್ರ ಹಿಗ್ಗುತ್ತಾರೋ” ಅವರನ್ನು ವಿರೋಧಿಸಿದನು (2 ಕೊರಿಂಥ 5:12). ದೇವರು ಜನಾಂಗೀಯ ಹಿನ್ನಲೆಯ ಪ್ರಕಾರವಾಗಿ ಪಕ್ಷಪಾತ ತೋರಿಸುವದಿಲ್ಲ (ರೋಮಾ 2:5-11), ಮತ್ತು ನಾವೂ ಹಾಗೆ ಮಾಡಕೂಡದು. ಇದು ವಿಶೇಷವಾಗಿ ಕ್ರೈಸ್ತ ಸಂಬಂಧಗಳಲ್ಲಿ ಸತ್ಯವಾಗಿರತಕ್ಕದ್ದು: “ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ” (ಗಲಾತ್ಯ 3:28, 29). ಸಾಮಾಜಿಕ, ಆರ್ಥಿಕ, ಅಥವಾ ಜನಾಂಗೀಯ ವರ್ಗಗಳ ಆಧಾರದಲ್ಲಿ ಮಾಡಲ್ಪಡುವ ಭಿನ್ನತೆಗಳಲ್ಲಾ “ಬಹಿರಾಚಾರ” ಆಗಿವೆ ಮತ್ತು ಆ ಕಾರಣದಿಂದ ಆತ್ಮೀಕ ಮನುಷ್ಯನೊಳಗೆ ನೆಲೆಸುವದಕ್ಕಾಗಿ ಬಂದಿರುವ ಪವಿತ್ರಾತ್ಮನ ಮನಸ್ಸಿಗೆ ವಿರುದ್ಧವಾಗಿದೆ (5:16-18; ರೋಮಾ 8:5-9).

## ಬಹಿರಾಚಾರಗಳಲ್ಲಿ ಹೆಚ್ಚಳಪಟ್ಟುಕೊಳ್ಳುವಿಕೆ (6:12-15)

“ಶರೀರ” (*sarx*) ಎಂಬ ಪದವು ಅನೇಕ ಅರ್ಥಗಳನ್ನು ಹೊಂದಿದ್ದು, ಪಾಪದ ಒಲವುಗಳು (“ಶರೀರಭಾವದ ಕರ್ಮಗಳು”; 5:19-21) ಮೊದಲ್ಗೊಂಡು ದೈಹಿಕ ಶರೀರದಿಂದ ಸ್ವಾಭಾವಿಕ ಸಂತಾನ ಎಂಬಂತಹ ಅರ್ಥಗಳನ್ನು ಹೊಂದಿದೆ. 6:12, 13 ವಚನಗಳು ಅನ್ಯಜನಾಂಗದವರ ಸುನ್ನತಿಯ ವಿಷಯವನ್ನೊಳಗೊಂಡಿದೆಯಾದ್ದರಿಂದ, ಅದು “ಬಹಿರಾಚಾರ” ಮತ್ತು “ಶರೀರದ ವಿಷಯದಲ್ಲಿ ಹೆಚ್ಚಳ” ಎಂಬ ಪದಗುಚ್ಛಗಳಲ್ಲಿ ಅಕ್ಷರಶಃವಾದ, ದೈಹಿಕ ಶರೀರವನ್ನು ಸೂಚಿಸುತ್ತಿದೆ ಎಂಬುದು ಸ್ಪಷ್ಟವಾಗಿರುತ್ತದೆ. ಇಲ್ಲಿ ಯಾವ ವಿಧವಾದ ಅರ್ಥನಿರೂಪಣೆಯಿದ್ದರೂ ಸರಿಯೇ, ಒಬ್ಬ ವ್ಯಕ್ತಿಗೆ “ಶರೀರದ ವಿಷಯದಲ್ಲಿ” ಹೆಚ್ಚಳವನ್ನು ಪಟ್ಟುಕೊಳ್ಳುವದು ಒಂದು ಸಂಗತಿಯಾಗಿ ಎಂದಿಗೂ ಇರಲೇ ಕೂಡದು.

2 ಕೊರಿಂಥ 5:16ರಲ್ಲಿ, ತಾನು ಎಂದಿಗೂ ಬೇರೆಯವರನ್ನು ಅವರ ದೈಹಿಕ ಗುಣಗಳು ಅಥವಾ ವೈಯಕ್ತಿಕ ಸಾಧನೆಗಳನ್ನು ಆಧರಿಸಿ ಇನ್ನು ಮೌಲ್ಯಮಾಪನ ಮಾಡುವವನಲ್ಲ ಎಂದು ಹೇಳಿದನು. ಆತನು ಹೀಗೆ ಬರೆದನು, “ಹೀಗಿರಲಾಗಿ ಇಂದಿನಿಂದ ನಾವು ಯಾರನ್ನೂ *ಶರೀರಸಂಬಂಧವಾಗಿ* [‘ಒಂದು ಲೋಕದ ದೃಷ್ಟಿಕೋನದಿಂದ’; NIV] ಅರಿತುಕೊಳ್ಳುವದಿಲ್ಲ; ಕ್ರಿಸ್ತನನ್ನು ಕೂಡ ನಾವು ಶರೀರಸಂಬಂಧವಾಗಿ ತಿಳಿದಿದ್ದರೂ ಇನ್ನು ಮುಂದೆ ಆತನನ್ನು ಹಾಗೆ ತಿಳುಕೊಳ್ಳುವದಿಲ್ಲ” (ಒತ್ತಿ ಹೇಳಿದ್ದು ನನ್ನದು). ಕ್ರೈಸ್ತರೊಳಗೆ, ಯಾವ ವಂಶಕ್ಕೆ ಸೇರಿದ್ದೇವೆ ಎಂಬುದರ ಮೇಲೆ, ಸಾಮಾಜಿಕ ಸ್ಥಾನ, ಅಥವಾ ಅಸಾಧಾರಣವಾದ ವೈಯಕ್ತಿಕ ಗುಣಗಳನ್ನು ಆಧರಿಸಿ ಹೆಚ್ಚಳಪಟ್ಟುಕೊಳ್ಳಲು ಅವಕಾಶವೇ ಇರುವದಿಲ್ಲ.

ಪೌಲನು ಹೆಚ್ಚಳ ಪಟ್ಟುಕೊಳ್ಳುವ ಅಂತಹ ಗರ್ವವನ್ನು ವಿರೋಧಿಸಿದನಾದರೂ, ಮಾನವ ದೃಷ್ಟಿಯಿಂದ ಹೇಳುವದಾದರೆ, ಆತನು ಸ್ವತಃ ಹೇಳಿಕೊಂಡ ಸಂಗತಿಗಳು ವಾಸ್ತವಾಂಶದ ಮೇಲೆ ಆಧಾರವಾಗಿದ್ದವು. ವಾದಿಸುದರ ಸಲುವಾಗಿ, ಆತನು 2 ಕೊರಿಂಥ 11:16-12:13ರಲ್ಲಿ ತಾನು ಮಾಡಿದ ಸ್ವಕಾರ್ಯಗಳ ಕುರಿತು ಹೇಳಿಕೊಂಡನು; ಆದರೆ ಆತನು ಇಡೀ ಚರ್ಚೆಯನ್ನು ಹುಚ್ಚುತನವೆಂದು ತಳ್ಳಿ ಹಾಕಿದನು (2 ಕೊರಿಂಥ 11:16; 12:11). ಅಂಥ ವಿಷಯಗಳ ಕುರಿತಾಗಿ ಪೌಲನ ನಿಯಮವು ಏನೆಂದರೆ, ಆತನು ಕೊರಿಂಥಕ್ಕೆ ಬಂದು ತಲುಪುವ ಮುನ್ನವೇ ಆತನು ಮನಸ್ಸಿನಲ್ಲಿ ನಿರ್ಧರಿಸಿಕೊಂಡಿದ್ದನು ಎಂಬುದೆ. ಆತನು 1 ಕೊರಿಂಥ 1:31ರಲ್ಲಿ ಹೀಗೆ ಹೇಳಿದನು, "ಹೆಚ್ಚಳಪಡುವವನು ಕರ್ತನಲ್ಲಿಯೇ ಹೆಚ್ಚಳಪಡಲಿ." ಬಳಿಕ ಆತನು ತಾನು ಮಾಡಿದ ಸೇವೆಯನ್ನು ಬಣ್ಣಿಸುತ್ತಾ ಹೋದನು:

> ಸಹೋದರರೇ, ನಾನಂತೂ ದೇವರು ಹೇಳಿಕೊಟ್ಟ ಮಾತನ್ನು ತಿಳಿಸುವವನಾಗಿ ನಿಮ್ಮ ಬಳಿಗೆ ಬಂದಾಗ ವಾಕ್ಚಾತುರ್ಯದಿಂದಾಗಲಿ ಜ್ಞಾನಾಡಂಬರದಿಂದಾಗಲಿ ಬರಲಿಲ್ಲ. ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. ಇದಲ್ಲದೆ ನಾನು ನಿಮ್ಮಲ್ಲಿಗೆ ಬಂದಾಗ ನಿಮ್ಮ ಬಳಿಯಲ್ಲಿ ಬಲಹೀನನೂ ಭಯಪಡುವವನೂ ಬಹು ನಡುಗುವವನೂ ಆಗಿದ್ದೆನು. ನಿಮ್ಮ ನಂಬಿಕೆಯು ಮಾನುಷಜ್ಞಾನವನ್ನು ಆಧಾರಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರಮಾಡಿಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು (1 ಕೊರಿಂಥ 2:1-5).

ಯೆಹೂದಿಕರಣಗೊಳಿಸುವವರು ದೇವರ ಪ್ರತ್ಯೇಕ ಜನರಾದ - ಪಿತೃವಾದ ಅಬ್ರಹಾಮ ಮತ್ತು ಶ್ರೇಷ್ಠ ಪ್ರವಾದಿಯಾದ ಮೋಶೆಯ ಕಾಲದಷ್ಟು ಹಿಂದಕ್ಕೆ ಸಾಗಿ - ಯೆಹೂದ್ಯ ಜನಾಂಗವೆಂಬ ಗತಕಾಲದ ಇತಿಹಾಸದ ಮೇಲೆ ತಮ್ಮ ದೃಢವಿಶ್ವಾಸವನ್ನಿಡುವಂತೆ ತಪ್ಪು ದಾರಿಗೆ ನಡಿಸಲ್ಪಟ್ಟಿದ್ದರು. ಅಷ್ಟುಮಾತ್ರವಲ್ಲದೆ, ಅನ್ಯಜನಾಂಗದ ಕ್ರೈಸ್ತರ ಮೇಲೆ ಸುನ್ನತಿಯನ್ನು ಕಡ್ಡಾಯಗೊಳಿಸುವದು ಮತ್ತು "[ತಮ್ಮ] ಶರೀರ ವಿಷಯದಲ್ಲಿ ಹೆಚ್ಚಳಪಡುವದು" (ಗಲಾತ್ಯ 6:13) ಅವರ ತಪ್ಪಾಗಿತ್ತು. ಯೆಹೂದಿಮತಕ್ಕೆ ಮತಾಂತರಗೊಳ್ಳುವದರಿಂದ ರಕ್ಷಣೆ ಉಂಟಾಗುವದಿಲ್ಲ, ಆದರೆ ಕ್ರಿಸ್ತನವರಾಗಿ ಪರಿವರ್ತನೆಗೊಳ್ಳುವದರಿಂದಲೇ ಬರುವದಾಗಿತ್ತು. ಪೌಲನು ಹೀಗೆ ಬರೆದನು, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ. ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು, ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು" (6:14).

## ಸುನ್ನತಿಯಾಗಿರುವ ಹೃದಯಗಳು (6:12-15)

6:15ರಲ್ಲಿ, ಪೌಲನು ಹೀಗೆ ಹೇಳಿದನು, "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು." ಸರಳವಾಗಿ ಹೇಳುವದಾದರೆ, ನಮ್ಮ ಹೃದಯಗಳಿಗೆ ಸುನ್ನತಿ ಮಾಡಿಸಿಕೊಳ್ಳಬೇಕೆಂದು ದೇವರು ಬಯಸುತ್ತಾನೆ. ದೇವರು ಯೆರೆಮೀಯನ ಮೂಲಕವಾಗಿ ಹೀಗೆ ಹೇಳಿದನು,

> ಯೆಹೋವನು ಯೆಹೂದದವರಿಗೂ ಯೆರೂಸಲೇಮಿನವರಿಗೂ ಹೀಗೆ ಹೇಳುತ್ತಾನೆ - ಗೆಯ್ಯದ ನಿಮ್ಮ ಭೂಮಿಯನ್ನು ಗೆಯ್ಯಿರಿ, ಮುಳ್ಳುಗಳಲ್ಲಿ ಬಿತ್ತಬೇಡಿರಿ. ಯೆಹೂದದವರೇ,

> ಯೆರೂಸಲೇಮಿನ ನಿವಾಸಿಗಳೇ, ನಿಮ್ಮ ಹೃದಯದ ಮುಂದೊಗಲನ್ನು ತೆಗೆದುಹಾಕಿ ಯೆಹೋವನಿಗಾಗಿ ಸುನ್ನತಿಯಾಗಿರಿ (ಯೆರೆಮೀಯ 4:3, 4).

ಯೆರೆಮೀಯನು ಇಂದು ಅನೇಕ ಸಾರಿ "ಗೋಳಾಡುವ ಪ್ರವಾದಿ" ಎಂದು ಕರೆಯಲ್ಪಡುತ್ತಾನೆ. ದೇವರ "ದರ್ಶಕ"ನಾಗಿ, ಆತನು ತನ್ನ ಜನರ ಮೇಲೆ ಬರಲಿದ್ದ ಭವಿಷ್ಯದ ನಾಶನವನ್ನು ಕಲ್ಪಿಸಿಕೊಳ್ಳಲು ಶಕ್ತನಾಗಿದ್ದನು. ಯೆರೆಮೀಯನು ತನ್ನ ದೇಶವನ್ನು ಆಗಾಧವಾಗಿ ಪ್ರೀತಿಸುತ್ತಿದ್ದನು ಮತ್ತು ಅದರ ನಾಶನವನ್ನು ಕಂಡು ಗೋಳಾಡದೆ ಇರುವದಕ್ಕೆ ಸಾಧ್ಯವಿರಲಿಲ್ಲ. ಈ ಪತನದ ಕುರಿತು ಸಾರುವವನಾಗಿ ಆತನು ನುಡಿದ ಮಾತುಗಳು ಕೇವಲ ಆತನ ಮಾತುಗಳಷ್ಟೇ ಆಗಿರಲಿಲ್ಲ; ಬದಲಾಗಿ, ಅವುಗಳು ದೇವರಿಂದಲೇ ಬಂದವುಗಳಾಗಿದ್ದವು. ಸಂದೇಶವು ಹೀಗೆ ಮುಂದುವರೆಯುತ್ತದೆ,

> ಇಲ್ಲವಾದರೆ ನಿಮ್ಮ ದುಷ್ಕೃತ್ಯಗಳ ನಿಮಿತ್ತ ನನ್ನ ರೋಷವು ಜ್ವಾಲೆಯಂತೆ ಹೊರಟು ಯಾರೂ ಆರಿಸಲಾಗದಷ್ಟು ರಭಸವಾಗಿ ಧಗಧಗಿಸುವದು (ಯೆರೆಮೀಯ 4:4).

ಈ ಚಿತ್ರಣವು ಅವರು ತಮ್ಮ ದುಷ್ಟತನದ ವಿಷಯದಲ್ಲಿ ತಮ್ಮ ಹೃದಯಗಳನ್ನು ಮುರಿದುಕೊಂಡವರಾಗಿರಬೇಕಾದ ಅಗತ್ಯವಿತ್ತೆಂಬುದನ್ನು ತೋರಿಸುತ್ತದೆ. ಅವರು ಬಾಹ್ಯವಾಗಿ ತೋರಿಸುವ ಸಕಲ ಧಾರ್ಮಿಕ ಡಂಬಾಚಾರಗಳು ಏನೇ ಇದ್ದಾಗ್ಯೂ, ಅವರ ಹೃದಯಗಳು ದೇವರೊಂದಿಗೆ ಸಂಧಾನವಾಗಿರಲಿಲ್ಲ. ಅವರ ನೀತಿಯ ಫಲವು ಬಾಹ್ಯ ಧಾರ್ಮಿಕ ವಿಧಿಗಳನ್ನು ದಾಟಿ ಹೋಗಬೇಕಾಗಿತ್ತು. ಮನುಷ್ಯನಲ್ಲಿ ಏನಿದೆ ಎಂಬುದು ದೇವರಿಗೆ ತಿಳಿದದೆ; ಮತ್ತು ಹೃದಯವು ಕೆಟ್ಟತನದಿಂದ ತುಂಬಿರುವಾಗ, ಬುದ್ಧಿಯಿರುವ ಒಬ್ಬ ಅನ್ಯಧರ್ಮಿಯನು ಸಹ ಆ ವಿರುದ್ಧತೆಯನ್ನು ಕಂಡುಕೊಳ್ಳಬಲ್ಲನು. ಮುಳ್ಳುಗಳ ನಡುವೆ ಬಿತ್ತಿರುವಂಥದ್ದು ಯಾವದಕ್ಕಾಗಿ ಇಸ್ರಾಯೇಲ್ಯವು ಕರೆಯಲ್ಪಟ್ಟಿತ್ತೋ ಮತ್ತು "ಅನ್ಯಜನಗಳಿಗೆ ಬೆಳಕಾಗಿ" (ಯೆಶಾಯ 42:6) ಇರುವಂತೆ ಪ್ರತ್ಯೇಕಿಸಿದನೋ ಆ ನೀತಿಯ ಫಲವನ್ನು ಕೊಡುವದಕ್ಕೆ ಸಾಧ್ಯವಿಲ್ಲ. ಯೇಸುವು ಪರ್ವತದ ಮೇಲಿನ ಪ್ರಸಂಗದಲ್ಲಿ ಹೀಗೆ ಕಲಿಸಿದನು, "ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು" (ಮತ್ತಾಯ 7:21).

"ಗೆಯ್ಯದ . . . ಭೂಮಿಯನ್ನು" ಕುರಿತಾಗಿ ಹೋಶೇಯನು ಹೇಳಿದ ಮಾತುಗಳು ಇನ್ನಷ್ಟು ಅಧಿಕವಾಗಿ ಮನಃಸೆಳೆಯುವಂಥವುಗಳಾಗಿವೆ:

> ನೀತಿಯ ಬೀಜವನ್ನು ಬಿತ್ತಿರಿ, ಪ್ರೀತಿಯ ಫಲವನ್ನು ಕೊಯ್ಯಿರಿ, ಗೆಯ್ಯದ ನಿಮ್ಮ ಭೂಮಿಯನ್ನು ಗೆಯ್ಯಿರಿ; ಯೆಹೋವನು ಬಂದು ನಮ್ಮ ಮೇಲೆ ನೀತಿಯನ್ನು ವರ್ಷಿಸಲೆಂದು ಆತನನ್ನು ಶರಣುಹೊಗುವ ಸಮಯವು ಒದಗಿದೆ. ನೀವು ಮಾಡಿದ ವ್ಯವಸಾಯವು ದುಷ್ಟತನ, ನಿಮಗಾದ ಬೆಳೆಯು ಅನ್ಯಾಯ; ನೀವು ನಿಮ್ಮ ಕಟ್ಟುಪಾಡಿನಲ್ಲಿಯೂ ನಿಮ್ಮ ಶೂರರ ಬಾಹುಳ್ಯದಲ್ಲಿಯೂ ಭರವಸವಿಟ್ಟದರಿಂದ ಮೋಸದ ಫಲವನ್ನು ಅನುಭವಿಸಿದ್ದೀರಿ. ಹೀಗಿರಲು ನಿಮ್ಮ ಕುಲಗಳವರಿಗೆ ವಿರುದ್ಧವಾಗಿ ಯುದ್ಧಘೋಷವು ಏಳುವದು; ಕಾಳಗದ ದಿನದಲ್ಲಿ ಶಲ್ಮಾನನು ತಾಯಿಗಳನ್ನು ಮಕ್ಕಳ ಸಹಿತ ಬಂಡೆಗೆ ಅಪ್ಪಳಿಸಿ ಬೇತ್‌ಅರ್ಬೇಲ್ ಪಟ್ಟಣವನ್ನು ಸೂರೆಮಾಡಿದಂತೆ ನಿಮ್ಮ ಎಲ್ಲಾ ಕೋಟೆಗಳು ಸೂರೆಮಾಡಲ್ಪಡುವವು (ಹೋಶೇಯ 10:12–14).

ಈ ಮಾತುಗಳು ಎದುರಿಸುವದು ಕಷ್ಟಕರ, ಆದರೆ ಅಂಥ ಪ್ರವಾದನೆಗಳಲ್ಲಿ ಅನೇಕ ಸಾರಿ

ಸಂಭವಿಸಿದ ಪ್ರಕಾರವೇ, ಅಂಥ ಮಾತುಗಳನ್ನು ಆದರಣೆ, ವಾಗ್ದಾನ, ಮತ್ತು ಆಶೀರ್ವಾದದ ನುಡಿಗಳ ಸಮೇತವಾಗಿ ತಿಳಿಸಲಾಗಿರುತ್ತದೆ (ಹೋಶೇಯ 11:1-4).

"ಗೆಯ್ಯದ ಭೂಮಿ" ಎಂದು ಪ್ರವಾದಿಗಳು ಹೇಳಿದ್ದರ ತಾತ್ಪರ್ಯವೇನಾಗಿತ್ತು? ಇದು ಒಂದು ವರ್ಷದ ಕಾಲ ಬಿತ್ತನೆಯನ್ನಾಗಲಿ ಅಥವಾ ಸುಗ್ಗಿಯನ್ನಾಗಲಿ ಮಾಡದ ಕೃಷಿ ಭೂಮಿಯನ್ನು ಸೂಚಿಸುತ್ತದೆ. ಚೇತರಿಸಿಕೊಳ್ಳುವಂತೆ ಕಾಲಾವಕಾಶವನ್ನು ಕೊಡುವದರಿಂದ ತೀಕ್ಷ್ಣವಾಗಿ ಬಳಕೆ ಮಾಡಲ್ಪಡುವದರಿಂದ ಮತ್ತು ಫಲವಿಲ್ಲದ್ದಾಗಿ ಮಾರ್ಪಡುವದರಿಂದ ತಡೆಯುತ್ತದೆ. ಈ ಆಚಾರವು ಧರ್ಮಶಾಸ್ತ್ರದಲ್ಲಿ ದೇವರಿಂದ ಆಜ್ಞಾಪಿಸಲ್ಪಟ್ಟದ್ದಾಗಿದೆ; ಪ್ರತಿ ಸಬ್ಬತ್ ವರ್ಷದಲ್ಲಿ ಭೂಮಿಯು ಕೃಷಿ ಮಾಡಲ್ಪಡದೆ ಉಳಿಯಬೇಕಾಗಿತ್ತು (ವಿಮೋಚನಕಾಂಡ 23:10, 11; ಯಾಜಕಕಾಂಡ 25:2-6).

ಯೂರೋಪಿನಲ್ಲಿ, ಈ ಜ್ಞಾನವು ಒಂದು ತಲೆಮಾರು ಮುಂದಿನ ತಲೆಮಾರಿಗೆ ಕಲಿಸಿ ಕೊಡಲ್ಪಟ್ಟಿರುತ್ತದೆ, ಇದರ ಫಲಿತವಾಗಿ ಜರ್ಮನ್ನರು ಗೊಬ್ಬರ ಮತ್ತು ಸರದಿಯ ಮೇಲೆ ಬೇರೆ ಬೇರೆ ಬೆಳೆಗಳನ್ನು ಬೆಳೆಯುವದರ ಮೂಲಕ ತಮ್ಮ ನೆಲವನ್ನು "ಕಟ್ಟುವದರ"ಲ್ಲಿ ನಿಸ್ಸೀಮತೆಯನ್ನು ಹೊಂದಿರುತ್ತಾರೆ. ವಾಸ್ತವಿಕದಲ್ಲಿ, "ರೈತ" ಎಂಬುದಕ್ಕೆ ಜರ್ಮನ್ ಪದವು "ಬಾವೆರ" ಎಂಬುದು, ಅಕ್ಷರಶಃ, "ಕಟ್ಟುವವನು" ಎಂದರ್ಥವಾಗಿದೆ. ಹೇಗೂ, ಅಮೆರಿಕದ ಸೀಮೆಯಲ್ಲಾದರೋ, ರೈತರಿಗೆ ಯಾವಾಗಲೂ ಈ ಜ್ಞಾನವು ಇರುವದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಭೂಮಿಯ ಸಮೃದ್ಧವಾಗಿ ಲಭ್ಯವಿದ್ದದರಿಂದ, ರೈತರು ಅನೇಕ ಸಾರಿ ಇನ್ನೊಂದು ಆಶಾದಾಯಕ ಭೂಮಿಯನ್ನು ಹುಡುಕಾಡಿ, ಅದನ್ನು ಸ್ವಚ್ಛಗೊಳಿಸುತ್ತಿದ್ದರು ಮತ್ತು ಅದು ಸವೆದು ಹೋಗುವಷ್ಟು ದೀರ್ಘಕಾಲ ಬಳಸುತ್ತಿದ್ದರು. ಅದಾದ ಮೇಲೆ, ಅವರು ತಮ್ಮ ಗಂಟುಮೂಟೆಗಳನ್ನು ಮತ್ತು ಸಾಧನಗಳನ್ನು ಕಟ್ಟಿಕೊಂಡು ಗಾಡಿಗಳಲ್ಲಿ ಹಾಕಿ ಅನುಕೂಲಕರವಾಗಿ ಕಾಣಿಸುವ ಮತ್ತೊಂದು ಭೂಮಿಯನ್ನು ಹುಡುಕಾಡುತ್ತಾ ಹೋಗುತ್ತಿದ್ದರು. ಈ ಚಕ್ರವು ಮುಂದುವರೆಯುತ್ತಿತ್ತು, ಸಾಮಾನ್ಯವಾಗಿ ಪೂರ್ವ ದಿಕ್ಕಿನ ಕಡೆಗೆ ಪ್ರಯಾಣಿಸುತ್ತಿದ್ದರು. ಜರ್ಮನ್ನರು ಒಂದಾದ ಮೇಲೊಂದು ಪೀಳಿಗೆಯ ವರೆಗೂ ಭೂಮಿಯಲ್ಲಿ ಕೃಷಿ ಮಾಡುವಂಥ "ಕಟ್ಟುವವರು" ಆಗಿದ್ದರೆ, ಅಮೆರಿಕದವರು ತಮ್ಮ ನೆಲವನ್ನು ಸವೆದು ಹೋಗುವಂತೆ ಮಾಡುತ್ತಿದ್ದ "ಗಣಿಗಾರರು" ಆಗಿದ್ದರು. ಅವರು ಸರದಿಯಂತೆ ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಮೂಲಕ ಪೌಷ್ಠಿಕಾಂಶಗಳನ್ನು ಒದಗಿಸಿ ನೆಲವನ್ನು ಫಲವತ್ತಾಗಿಸಬೇಕೆಂಬ ಯೋಚನೆಯನ್ನೇ ಮಾಡದೆ ಅದರ ಪೌಷ್ಠಿಕಾಂಶಗಳನ್ನೆಲ್ಲಾ ಬರಿದುಗೊಳಿಸುತ್ತಿದ್ದರು.

ತಮ್ಮ ಭೂಮಿಯನ್ನು ಫಲದಾಯಕ ಕಾಲಗಳಿಗಾಗಿ ಹೇಗೆ ಪುನಃಶ್ಚೇತನಗೊಳಿಸಬೇಕೆಂದು ಹಳೆಯ ಒಡಂಬಡಿಕೆಯ ತನ್ನ ಜನರಾದ ಇಸ್ರಾಯೇಲ್ಯರಿಗೆ ಕಲಿಸಿದ ಅದೇ ದೇವರು ತನ್ನ ಹೊಸ ಇಸ್ರಾಯೇಲ್ ಜನರು ನೀತಿಯಿಂದ ಸಮೃದ್ಧರಾಗಿರಬೇಕೆಂದು ಪ್ರೀತಿಯಿಂದ ಬಯಸುವವನಾಗಿದ್ದಾನೆ. ಈ ಉದ್ದೇಶಕ್ಕಾಗಿಯೇ, ಆತನು ತನ್ನ ಪವಿತ್ರಾತ್ಮನನ್ನು ಸುರಿಸಿದ್ದು ಆತನ ಮೂಲಕವಾಗಿಯೇ, ದೇವರಾತ್ಮನಿಂದ ಉಂಟಾಗುವ ಫಲವನ್ನು ಕೃಷಿ ಮಾಡುವವರಾಗಿ (5:22, 23), ನಾವು ರಕ್ಷಣೆಗೋಸ್ಕರ ನಮ್ಮ ಜೀವಿತಗಳನ್ನು ಪರಿಶುದ್ಧಗೊಳಿಸಿಕೊಳ್ಳಬಲ್ಲೆವು. ಅಲ್ಲದೆ ನಮ್ಮ ಲೋಕದ ವೈಶಿಷ್ಟ್ಯತೆಯಾಗಿರುವ ಪ್ರಕಾರ ಆತ್ಮೀಕ ಕತ್ತಲೆ ಹಾಗೂ ಗೊಂದಲದಲ್ಲಿ ತಡಕಾಡುತ್ತಿರುವಂಥ ನಾಶನದಲ್ಲಿರುವ ಆತ್ಮಗಳ ಸಮೂಹಗಳಿಗೆ ಮಾರ್ಗವನ್ನು ತೋರಿಸಬಲ್ಲೆವು. ನಾವು "ಯಾವದು ಸರಿಯೋ ಅದನ್ನು ಮಾಡುವದರಲ್ಲಿ ಬೇಸರಗೊಳ್ಳಬಾರದು" (6:9; NRSV). ಬದಲಾಗಿ, ದೇವರು ನಮ್ಮೊಳಗೆ ವಾಸಿಸುವಂತೆ

ಮಾಡಿರುವ ಪವಿತ್ರಾತ್ಮನ ಬಲಯುತ ಶಕ್ತಿಯನ್ನು ಆಲಂಗಿಸಿಕೊಳ್ಳಬೇಕು. ನಾವು ಅರ್ಧ ಅಳತೆಗಳಲ್ಲಿ ಎಂದಿಗೂ ತೃಪ್ತರಾಗದಿರೋಣ ಅಥವಾ ಯಾವಾಗಲೂ ಮಾಡುತ್ತಾ ಬಂದಿರುವದನ್ನೇ ಮುಂದುವರೆಸದಿರೋಣ. ಬದಲಾಗಿ, ನಂಬಿಕೆಯಿಂದ, ದೇವರ ಶಕ್ತಿಯ ಲಾಭವನ್ನು ಪಡೆದುಕೊಳ್ಳೋಣ, ಅದು ನಾವು ಬೇಡಿಕೊಳ್ಳುವ ಅಥವಾ ಊಹಿಸಿಕೊಳ್ಳುವದಕ್ಕೆ ಸಾಧ್ಯವಿರುವಂತ ಯಾವದನ್ನೇ ಆಗಲಿ ಮೀರುವಂಥದ್ದಾಗಿದೆ (ಎಫೆಸ 3:20, 21).

## ಧರ್ಮಶಾಸ್ತ್ರವು ಸಾರಾಂಶಿಸಲ್ಪಟ್ಟಿದೆ (6:13)

ಯೆಹೂದಿಕರಣಗೊಳಿಸುವವರು ಸಭೆಗಳ ಮೇಲೆ ಧರ್ಮಶಾಸ್ತ್ರವನ್ನು ಕಡ್ಡಾಯಗೊಳಿಸುವ ಮೂಲಕ ವೈಪರೀತ್ಯವಾದ ಪರಿಣಾಮವನ್ನು ಬೀರಿದ್ದರು (1:6, 7; 3:1, 2). 6:13ರಲ್ಲಿ, ಪೌಲನು ಅವರ ಕಪಟತನವನ್ನು ಬಯಲಿಗೆ ತರುವವನಾಗಿ ಹೀಗೆ ಹೇಳಿದನು, "ಸುನ್ನತಿಮಾಡಿಸಿಕೊಳ್ಳುವ ತಾವಾದರೂ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಿಲ್ಲ." ಅಪೊಸ್ತಲನ ಹೇಳಿಕೆಯು ಪ್ರಾಮುಖ್ಯವಾದ ಪ್ರಶ್ನೆಯನ್ನು ಎಬ್ಬಿಸುತ್ತದೆ: ಈ ದಿನಕ್ಕೆ ಧರ್ಮಶಾಸ್ತ್ರದ ಬೆಲೆ ಅಥವಾ ಮಹತ್ವವಾದರೂ ಏನು?

*ಧರ್ಮಶಾಸ್ತ್ರವು (ಹಳೆಯ ಒಡಂಬಡಿಕೆ) ಇಸ್ರಾಯೇಲ್ಯರಿಗಾಗಿ ಮಾತ್ರವೇ ಆಗಿತ್ತು.* ಮೋಶೆಯ ಧರ್ಮಶಾಸ್ತ್ರವು ದೇವರಿಂದ ಇಸ್ರಾಯೇಲ್ ಜನಾಂಗಕ್ಕೆ ಕೊಡಲ್ಪಟ್ಟಿತ್ತು (ನೋಡಿರಿ ವಿಮೋಚನಕಾಂಡ 19:1-8) ಮತ್ತು ಬೇರೆ ಯಾವದೇ ಜನರ ಮೇಲೆ ಆಡಳಿತ ನಡಿಸುವಂತೆ ಎಂದಿಗೂ ಉದ್ದೇಶಿಸಲ್ಪಟ್ಟಿರಲಿಲ್ಲ. ಅದರ ಉದ್ದೇಶವು ಮೋಶೆಯ ಕಾಲದಿಂದ ಕ್ರಿಸ್ತನ ಕಾಲದ ತನಕ ಜಾರಿಯಲ್ಲಿರುವದೇ ಆಗಿತ್ತು (ನೋಡಿರಿ ಗಲಾತ್ಯ 3:10-29).

*ಧರ್ಮಶಾಸ್ತ್ರ (ತೋರಹ) ಮತ್ತು ಪ್ರವಾದಿಗಳು ಒಂದು ಹೊಸ ಒಡಂಬಡಿಕೆಯ ಕುರಿತು ಮಾತಾಡಿದರು.* ಹಳೆಯ ಒಡಂಬಡಿಕೆಯ ಬರಹಗಾರರು ದೇವರು ತನ್ನ ಜನರೊಂದಿಗೆ ಒಬ್ಬ ಹೊಸ ಪ್ರವಾದದಿಯ ಮೂಲಕವಾಗಿ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವ ಕಾಲವೊಂದು ಬರುವದೆಂದು ಸ್ವತಃ ಮುಂದಾಗಿ ಕಂಡರು (ಧರ್ಮೋಪದೇಶಕಾಂಡ 18:15-18; ಯೆರೆಮೀಯ 31:31-34).

*ಹೊಸ ಒಡಂಬಡಿಕೆಯು ಪ್ರತಿಷ್ಠಾಪಿಸಲ್ಪಟ್ಟ ಬಳಿಕ, ಧರ್ಮಶಾಸ್ತ್ರವು (ಹಳೆಯ ಒಡಂಬಡಿಕೆ) ರದ್ದುಗೊಂಡಿತು.* ಇಬ್ರಿಯರಿಗೆ ಪತ್ರಿಕೆಯ ಲೇಖಕನು ಯೆರೆಮೀಯ 31ನೇ ಅಧ್ಯಾಯದಿಂದ ಉಲ್ಲೇಖಿಸುತ್ತಾನೆ, ಈ ಪ್ರವಾದನೆಯು ನೆರವೇರಿರುತ್ತದೆಂಬುದನ್ನು ಸೂಚಿಸುತ್ತಾನೆ; ಹೊಸ ಒಡಂಬಡಿಕೆಯು ದೇವರ ಹೊಸ ಇಸ್ರಾಯೇಲ್ಯರ (ಸಭೆ) ಸಂಗಡ ಸ್ಥಾಪಿಸಲ್ಪಟ್ಟಿತ್ತು. ಆತನು ಬಳಿಕ ಈ ರೀತಿ ವ್ಯಾಖ್ಯೆ ನೀಡುತ್ತಾನೆ, "ಇಲ್ಲಿ ಹೊಸ ಒಡಂಬಡಿಕೆಯೆಂದು [ದೇವರು] ಹೇಳಿದ್ದರಲ್ಲಿ ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೇದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ" (ಇಬ್ರಿಯ 8:13). "ಅಂತ್ಯು ಸಮೀಪವಾಗಿದೆ" ಎಂಬ ಪದಗುಚ್ಛದಿಂದ, ಆತನು ನಿಶ್ಚಯವಾಗಿಯೂ ಕ್ರಿ.ಶ. 70ರಲ್ಲಿ ರೋಮನ್ ಸೈನ್ಯದ ಕೈಯಲ್ಲಿ ಯೆರೂಸಲೇಮಿನಲ್ಲಿರುವ ದೇವಾಲಯವು ನಾಶಗೊಳ್ಳುವದನ್ನು ಸೂಚಿಸುತ್ತಿದ್ದಾನೆ. ಇದು ಯೆಹೂದಿಮತದ ಯಜ್ಞಾರ್ಪಣೆಗಳನ್ನು ಅಂತ್ಯಗೊಳಿಸಿತ್ತು, ಅದು ಧರ್ಮಶಾಸ್ತ್ರವನ್ನು ಆಚರಿಸುವದರಲ್ಲಿ ಬಹಳ ಅತ್ಯಾವಶ್ಯಕವಾದದ್ದಾಗಿತ್ತಷ್ಟೆ.

*ಧರ್ಮಶಾಸ್ತ್ರವು (ಮತ್ತು ಮಿಕ್ಕ ಹಳೆಯ ಒಡಂಬಡಿಕೆಯೆಲ್ಲಾ) ಈಗಲೂ ದೇವರ ಪ್ರೇರಿತ ವಾಕ್ಯವಾಗಿರುತ್ತದೆ.* ಹಳೆಯ ಒಡಂಬಡಿಕೆಯು ಹೊಸ ಒಡಂಬಡಿಕೆಗಿಂತಲೂ ಕಡಿಮೆ ಪ್ರೇರಿತವಾದ ವಾಕ್ಯವೇನೂ ಆಗಿರುವದಿಲ್ಲ. ಈ ವಿಷಯದಲ್ಲಿ ಪೌಲನು 2 ತಿಮೊಥೆ 3:16, 17ರಲ್ಲಿ

ಒಂದು ಸ್ಪಷ್ಟವಾದ ಹೇಳಿಕೆಯನ್ನು ನೀಡಿದನು:

> ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ. ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು (ನೋಡಿರಿ 2 ಪೇತ್ರ 1:20, 21; 3:1, 2, 14-16).

*ಧರ್ಮಶಾಸ್ತ್ರ (ಮತ್ತು ಮಿಕ್ಕ ಹಳೆಯ ಒಡಂಬಡಿಕೆಯೆಲ್ಲಾ) ನಮಗೆ ಉಪದೇಶ ಮತ್ತು ಪ್ರೋತ್ಸಾಹ ಮಾಡುವದಾಗಿದೆ.* ಸುವಾರ್ತೆಯ ಯುಗವು ಆರಂಭವಾದಂತೆ, ಹಳೆಯ ಒಡಂಬಡಿಕೆಯು ಕ್ರೈಸ್ತರಿಗಿದ್ದ ಏಕೈಕ ಬೈಬಲ್ ಆಗಿತ್ತು. ಪೌಲನು ಅದರ ಪ್ರಾಮುಖ್ಯತೆಯನ್ನು ಆದಿ ಕ್ರೈಸ್ತರಿಗೆ ವಿವರಿಸಿದನು: "ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು" (ರೋಮಾ 15:4). ಹಳೆಯ ಒಡಂಬಡಿಕೆಯು ನಮಗೆ ಅವಿಧೇಯತೆಯಿಂದಾಗುವ ಪರಿಣಾಮಗಳ ಕುರಿತು ಎಚ್ಚರಿಕೆಗಳನ್ನು ನೀಡುತ್ತದೆ (1 ಕೊರಿಂಥ 10:1-12; ಇಬ್ರಿಯ 3:7-13) ಮಾತ್ರವಲ್ಲದೆ ಅನುಸರಿಸುವದಕ್ಕಾಗಿ ನಂಬಿಕೆಗೆ ಮಾದರಿ ಸಹ ತೋರಿಸುತ್ತದೆ (ಇಬ್ರಿಯ 11). ಅಲ್ಲದೆ ಅದು ನಮ್ಮನ್ನು ಕ್ರಿಸ್ತನೆಡೆಗೆ ನಡಿಸುತ್ತದೆ (ಲೂಕ 24:26, 27, 44-49; 2 ತಿಮೊಥೆ 3:15), ಮೂಲತಃ ಉಚ್ಚರಿಸಪಟ್ಟ ನೂರಾರು ವರ್ಷಗಳ ಬಳಿಕ ನೆರವೇರಿದ ಪ್ರವಾದನೆಗಳ ಘಟನೆಗಳನ್ನು ಕುರಿತು ವಿವರಗಳನ್ನು ಒದಗಿಸುತ್ತವೆ (ಉದಾಹರಣೆಗೆ, ಕೀರ್ತನೆ 22; ಯೆಶಾಯ 53; ಮೀಕನು 5:2). ಹಳೆಯ ಒಡಂಬಡಿಕೆಯಿಲ್ಲದೆ, ನಾವು ಹೊಸ ಒಡಂಬಡಿಕೆಯಲ್ಲಿ ಓದುವ ಬಹಳಷ್ಟು ವಿಷಯಗಳು ನಮಗೆ ಗ್ರಹಿಸುವದಕ್ಕೆ ಅಸಾಧ್ಯವಾಗುತ್ತವೆ. ಅದು ಅಕ್ಷರ, ಪರಿಭಾಷೆ, ಮತ್ತು ಸಾಂಕೇತಿಕ ಭಾಷೆಯ ಕುರಿತಾಗಿ ಭಾಷಾ ಸಹಾಯಗಳನ್ನು ಒದಗಿಸುವದಾಗಿದೆ. ಅಲ್ಲದೆ ಅದು ಭೌಗೋಳಿಕತೆ, ಇತಿಹಾಸ, ಸಂಸ್ಕೃತಿ, ಮತ್ತು ದೈವಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಾಯವನ್ನು ಒದಗಿಸುತ್ತದೆ.

*ಧರ್ಮಶಾಸ್ತ್ರವನ್ನು (ಹಳೆಯ ಒಡಂಬಡಿಕೆ) ಹೊಸ ಒಡಂಬಡಿಕೆಯೊಂದಿಗೆ ಮಿಶ್ರಣಗೊಳಿಸಕೂಡದು.* ಯೆಹೂದಿಕರಣಗೊಳಿಸುವವರು ಅನ್ಯಜನಾಂಗದ ಕ್ರೈಸ್ತರ ಮೇಲೆ ಧರ್ಮಶಾಸ್ತ್ರದ ಆಚಾರಗಳನ್ನು ಕಡ್ಡಾಯಗೊಳಿಸಲು ಪ್ರಯತ್ನಿಸುವ ಮೂಲಕ ಒಂದು ಮೂಲಭೂತವಾದ ತಪ್ಪನ್ನು ಮಾಡುವವರಾಗಿದ್ದರು. ಇಂದು ಕೆಲವು ಸದುದ್ದೇಶದ ಜನರು ಒಂದು ಧಾರ್ಮಿಕ ಆಚಾರವನ್ನು ಬೆಂಬಲಿಸುವದಕ್ಕಾಗಿ ಹಳೆಯ ಒಡಂಬಡಿಕೆಯ ಸಹಾಯವನ್ನು ಪಡೆಯಲು ಪ್ರಯತ್ನಿಸುವಾಗ ಅದೇ ತಪ್ಪನ್ನು ಮಾಡುವವರಾಗಿದ್ದಾರೆ.

## ಪಾಪದ ಪಾಲಿಗೆ ಮರಣ ಮತ್ತು ಕ್ರಿಸ್ತನಲ್ಲಿ ನೂತನ ಜೀವನ (6:14, 15)

ನಮ್ಮ ಕರ್ತನ ಮರಣದ ಹೊರತಾಗಿ ಯಾವ ವಿಮೋಚನೆಯೂ ಸಾದ್ಯವಿರುವದಿಲ್ಲ. ನಾವು ಆತನೊಂದಿಗೆ ಆತನ ಮರಣದಲ್ಲಿ ಐಕ್ಯವಾಗಿ, ಈ ಲೋಕದ ಆಕರ್ಷಣೆಗಳ ಮತ್ತು ಅದರ ಕ್ಷಣಿಕ ಸಂಪತ್ತುಗಳ ಪಾಲಿಗೆ ಮರಣಿಸಿರುವ ಹೊರತು ನಮ್ಮ ವಿಮೋಚನೆಯ ಐಶ್ವರ್ಯಗಳಲ್ಲಿ ಪಾಲುಗಾರರಾಗುವದಕ್ಕೆ ಸಾಧ್ಯವಿಲ್ಲ (ರೋಮಾ 6:1-14; 1 ಯೋಹಾನ 2:15-17).

ಶಿಲುಬೆಯ ಅಡಿಯಲ್ಲಿಯೇ ನಾವು ನಮ್ಮ ಕಣ್ಣುಗಳನ್ನು ಮೇಲೆತ್ತಿ ಸಕಲ ಮಾನವ ಇತಿಹಾಸವನ್ನು ಮಾರ್ಪಡಿಸಿದಂಥ ಘಟನೆಯನ್ನು ನೋಡುವವರಾಗಿದ್ದೇವೆ. ನಾವು ಸ್ಪರ್ಶಿಸಲ್ಪಟ್ಟವರಾಗಿ ಆತನ ಶಿಲುಬೆಗೇರಿಸಲ್ಪಡುವಿಕೆಯ ಸಾರೂಪ್ಯದೊಳಗೆ ಸಾಗಿ ನಮ್ಮ ಪಾಪ

ಪಾಲಿಗೆ ಮರಣಿಸಿ ಪಶ್ಚಾತ್ತಾಪದೊಂದಿಗೆ ಸ್ವಾರ್ಥಕ್ಕಾಗಿ ಮರಣಿಸುವಂತೆ ಆತನನ್ನು ಅನುಸರಿಸುವವರಾಗುತ್ತೇವೆ. ಆದದರಿಂದ, ಆತನು ಆಜ್ಞಾಪಿಸಿರುವಂತೆಯೇ ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಡದೆ ಬೇರೆ ದಾರಿಯಿರುವದಿಲ್ಲ. ನಂಬಿಕೆಯಿಂದ ಪುನಃ ಎಬ್ಬಿಸಲ್ಪಟ್ಟು ಹೊಸಬರಾಗಿ ನಡೆಯುವವರಾಗುತ್ತೇವೆ (ನೋಡಿರಿ ರೋಮಾ 6:4; ಕೊಲೊಸ್ಸೆ 2:11, 12), ನಾವು ಶಕ್ತಿಯಿಂದ ತುಂಬುವ ಪವಿತ್ರಾತ್ಮನ ವರದ ಮೂಲಕವಾಗಿ ಸಜೀವಗೊಳಿಸಲ್ಪಡುತ್ತೇವೆ.

## ನೂತನ ಸೃಷ್ಟಿ (6:15)

ಪೌಲನು ಹೀಗೆ ಬರೆದನು, "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು" (6:15). ರೋಮಾ 2:28, 29 ವಚನಗಳು ಈ ಬುದ್ಧಿವಾದವನ್ನು ಪ್ರತಿಧ್ವನಿಸುವಂತೆ ಕಾಣಿಸುತ್ತದೆ:

> ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ; ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು; ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಲ್ಲ.

ಈ ಸುನ್ನತಿಯ ಚಿತ್ರಣವು ಹಳೆಯದಾಗಿದೆ - ವಾಸ್ತವಿಕದಲ್ಲಿ ಅಬ್ರಹಾಮನಷ್ಟು ಹಳೆಯದಾಗಿರುತ್ತದೆ (ಆದಿಕಾಂಡ 17:9-11). ಅನೇಕ ಕಟ್ಟಳೆಗಳು ಮತ್ತು ಸುನ್ನತಿಯಂತಹ, ಹಳೆಯ ಒಡಂಬಡಿಕೆಯ ಸ್ಥಾಪಿತ ಪದ್ಧತಿಗಳು ಅತಿ ಕಟ್ಟುನಿಟ್ಟಿನ ವಿಧೇಯತೆಯೊಂದಿಗೆ ಆಚರಿಸಲ್ಪಡುತ್ತಿದ್ದವು ಆದರೆ ಅವುಗಳು ಸ್ವತಃ ತಮ್ಮಲ್ಲಿ ದೇವರು ತನ್ನ ಜನರ ವಿಷಯದಲ್ಲಿ ಹೊಂದಿದ್ದ ವಾಸ್ತವಿಕ ಚಿತ್ತಕ್ಕೆ ಕೇವಲ "ಛಾಯೆಗಳು" ಅಥವಾ ಪ್ರವಾದನಾತ್ಮಕ ಚಿತ್ರಣಗಳಷ್ಟೇ ಆಗಿದ್ದವು. ದೇವರು ನಿಜಕ್ಕೂ ಆಸಕ್ತಿಯನ್ನು ಹೊಂದಿರುವದು ಮನುಷ್ಯನ ಹೃದಯದಲ್ಲಿ ಸುನ್ನತಿಯಾಗಬೇಕು (ಮನುಷ್ಯನ ಶರೀರಭಾವದ ಬಯಕೆಗಳು ತೆಗೆದು ಹಾಕಲ್ಪಡಬೇಕು), ಆತನು ಆರಂಭದಲ್ಲಿ ಭೂಮಿಯ ಮೇಲೆ ಮನುಷ್ಯನು ವಾಸಿಸುತ್ತಿದ್ದ ವೇಳೆ ತನ್ನ ಜನರ ವಿಷಯದಲ್ಲಿ ಉದ್ದೇಶವನ್ನು ಹೊಂದಿದ್ದ ರೀತಿಯಲ್ಲಿ ನಿಜವಾಗಿಯೂ ವಿಧೇಯರಾಗಬೇಕು ಎಂಬುದೆ.[57]

"ಛಾಯೆಗಳ" ವಿಷಯದಲ್ಲಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ *ಛಾಯೆಯೇ ಹೊರತು* ಅವುಗಳ ನಿಜ ಸ್ವರೂಪವಲ್ಲವಾದದರಿಂದ ಆ ಧರ್ಮಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವರನ್ನು ಎಂದಿಗೂ ಸಿದ್ಧಿಗೆ ತರಲಾರದು" (ಇಬ್ರಿಯ 10:1; ಒತ್ತಿ ಹೇಳಿದ್ದು ನನ್ನದು). ಕ್ರಿಸ್ತನ ಕುರಿತಾಗಿ, ಆತನು ಮುಂದುವರೆದು ಹೀಗೆ ಹೇಳಿದನು,

> ಆದದರಿಂದ ಕ್ರಿಸ್ತನು ಭೂಲೋಕದೊಳಗೆ ಬರುವಾಗ -
> [ದೇವರೇ], ಯಜ್ಞನೈವೇದ್ಯಗಳು ನಿನಗೆ ಇಷ್ಟವಾಗಿರಲಿಲ್ಲ,
> ನನಗೆ ದೇಹವನ್ನು ಸಿದ್ಧಮಾಡಿಕೊಟ್ಟೆ;
> ಸರ್ವಾಂಗಹೋಮಗಳಲ್ಲಿಯೂ ದೋಷಪರಿಹಾರಕಯಜ್ಞಗಳಲ್ಲಿಯೂ ನೀನು
> ಸಂತೋಷಪಡಲಿಲ್ಲ;

ಆಗ ನಾನು - ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ.
ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂದು ಹೇಳಿದೆನು ಅನ್ನುತ್ತಾನೆ
(ಇಬ್ರಿಯ 10:5-7).

ಧರ್ಮಶಾಸ್ತ್ರವು ಜಾರಿಯಲ್ಲಿದ್ದಂಥ ಒಂದೂವರೆ ಸಹಸ್ರ ವರ್ಷಗಳಿಂದ ನಂಬಿಗಸ್ತರಾದ ಇಸ್ರಾಯೇಲ್ಯರು ಅತ್ಯುತ್ತಮವಾದ ಪ್ರಾಣಿಗಳನ್ನು ಯಜ್ಞಮಾಡಿದರು? ದೇವರು ಅವುಗಳನ್ನು ಬಯಸಲೂ ಇಲ್ಲ ಅಥವಾ ಅವುಗಳಲ್ಲಿ ಸಂತೋಷಿಸಲೂ ಇಲ್ಲವಾದಲ್ಲಿ, ಅವುಗಳನ್ನು ಬೇಕೆಂದು ಆತನು ಕೇಳಿದ್ದಾದರೂ ಏಕೆ? ಈ ಪ್ರಶ್ನೆಯ ಕುರಿತಾಗಿ ಕೆಲವೊಂದು ಆಲೋಚನೆಗಳು ಸಹಾಯಕಾರಿಯಾಗಿರುತ್ತವೆ. (1) ಸೃಷ್ಟಿಕರ್ತನು ಮತ್ತು ಸಾರ್ವಭೌಮನಾಗಿರುವ ದೇವರು, ತನ್ನದೇ ಆಗಿರುವ ಕಾರಣಗಳಿಂದ ಯಜ್ಞಗಳನ್ನು ಅರ್ಪಿಸುವಂತೆ ಆಜ್ಞಾಪಿಸಿದ್ದನು, ಮತ್ತು ಕೇವಲ ವಿಶ್ವಾಸವನ್ನಿಟ್ಟು ವಿಧೇಯರಾಗುವದು ಇಸ್ರಾಯೇಲ್ಯರ ಪಾತ್ರವಾಗಿತ್ತಷ್ಟೆ. (2) ಹೇಗೂ, "ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ" (ಯಾಕೋಬ 1:17; KJV) ಕೊಡುವಾತನಾಗಿರುವ ದೇವರೊಂದಿಗೆ ಒಂದು ಅನುಕೂಲಕರವಾದ ಒಡಂಬಡಿಕೆಗಾಗಿ ಮನುಷ್ಯನಿಂದ ಕೇಳಲ್ಪಡುವ ಯಾವ ಯಜ್ಞವೂ ಮನುಷ್ಯನ ಹೃದಯಕ್ಕೆ ಅತ್ಯಂಥ ಅಮೂಲ್ಯ ಅಥವಾ ಪ್ರಿಯವಾದದ್ದು ಆಗಿರುವದಿಲ್ಲ. (3) "ಸಂತೋಷವಾಗಿ ಕೊಡುವವನ" ಮೇಲೆಯೇ ದೇವರಿಗೆ ಪ್ರೀತಿಯಿರುತ್ತದೆ (2 ಕೊರಿಂಥ 9:7); ಮತ್ತು ಆತನ ಜನರು, ಅವರ ಶಿಸುವಾವಸ್ಥೆಯಲ್ಲಿ ಸಹ ಕೊಡುವ ಸದ್ಗುಣವನ್ನು ಕಲಿತುಕೊಳ್ಳಬೇಕು. (4) ಪ್ರಾಣಿಗಳ ಯಜ್ಞಗಳು ಇಸ್ರಾಯೇಲ್ಯರಿಗೆ ಪಾಪದ ಗಂಭೀರತೆಯನ್ನು ಮಾತ್ರವಲ್ಲದೆ ದೇವರ ಪರಿಶುದ್ಧತೆಯನ್ನು ಕುರಿತು ತಿಳಿಯಪಡಿಸಿದವು. ಹೀಗಿದ್ದರೂ, ಮನುಷ್ಯನ ಯಾವ ಕಾಣಿಕೆಯೂ, ಅದು ಎಷ್ಟೇ ಶ್ರೇಷ್ಠವಾಗಿದ್ದರೂ ಸರಿಯೇ, ಪಾಪಗಳನ್ನು ನಿವಾರಿಸುವದಕ್ಕೆ ಶಕ್ತವಾಗಲಿಲ್ಲ. ಶಿಲುಬೆಯ ಮೇಲೆ ಅರ್ಪಿಸಲ್ಪಟ್ಟ, ಕ್ರಿಸ್ತನ ದೇಹವು ಮಾತ್ರವೇ ಅಂತಹ ಫಲಿತವನ್ನುಂಟು ಮಾಡುವದಕ್ಕೆ ಶಕ್ತವಾಗಿರುತ್ತದೆ. ಇದು ದೇವರ ಅಂತಿಮ ಮತ್ತು ಪರಿಪೂರ್ಣವಾದ ಚಿತ್ತವಾಗಿತ್ತು (ಇಬ್ರಿಯ 10:9, 10, 14).

ಬರಲಿದ್ದ "ಛಾಯೆಗಳ" ಪಟ್ಟಿಯು ವಿಶಾಲವಾದದ್ದಾಗಿದೆ. ಕೆಲವು ಯಾಜಕತ್ವ ಮತ್ತು ದೇವದರ್ಶನ ಗುಡಾರಕ್ಕೆ ಸಂಬಂಧಿಸಿದ ಸಂಗತಿಗಳಾಗಿವೆ (ಇಬ್ರಿಯ 8:5; 9:11; 10:1-18). ಪಟ್ಟಿಯಲ್ಲಿರುವ ಇನ್ನು ಕೆಲವು ಸಂಗತಿಗಳೊಳಗೆ ಅನ್ನಪಾನಗಳು, ಹಬ್ಬಗಳು, ಹುಣ್ಣಿಮೆಗಳು, ಮತ್ತು ಸಬ್ಬತ್ ದಿನಗಳು ಸೇರಿವೆ (ಕೊಲೊಸ್ಸೆ 2:16). "ಇವು ಮುಂದೆ ಬರಬೇಕಾಗಿದ್ದ ಕಾರ್ಯಗಳ ಛಾಯೆಯಾಗಿವೆ; ಇವುಗಳ ನಿಜಸ್ವರೂಪವು ಕ್ರಿಸ್ತನೇ" (ಕೊಲೊಸ್ಸೆ 2:17; NIV).

ಪೌಲನು ಗಲಾತ್ಯ 6:15ರಲ್ಲಿ ದೈಹಿಕ ಸುನ್ನತಿಯ ವಿಷಯದಲ್ಲಿ ಮಾಡುತ್ತಿರುವ ಅನ್ವಯಿಕೆಯು ಸ್ಪಷ್ಟವಾಗಿತ್ತು: ದೇವರು ಮನುಷ್ಯನಲ್ಲಿ ಅಪೇಕ್ಷಿಸುವದರಲ್ಲಿನ ತಿರುಳು ಬಾಹ್ಯದ, ಧಾರ್ಮಿಕ ವಿಧಿಯ ವಿಷಯಗಳು ಆಗಿರುವದಿಲ್ಲ. ಬದಲಾಗಿ, ಆತನು "ಹೊಸ ಸೃಷ್ಟಿ"ಯನ್ನು ಬಯಸುತ್ತಾನೆ, ಅದು ಹೃದಯದ ಆಂತರೀಕ ವಿಷಯಗಳನ್ನು ಮತ್ತು ಪವಿತ್ರಾತ್ಮನ್ನನುಸರಿಸಿ ನಡೆಯುವದನ್ನು ಒಳಗೊಂಡಿರುತ್ತದೆ (5:16, 18, 22, 23, 25).

## ದೀಕ್ಷಾಸ್ನಾನ ಮತ್ತು ಹೊಸ ಸೃಷ್ಟಿ (6:15)

ರೋಮಾ 6:4 ಮತ್ತು ಕೊಲೊಸ್ಸೆ 2:12ರಲ್ಲಿ, "ಹೂಣಲ್ಪಟ್ಟೆವು" ಎಂಬುದು ಮುಳುಗುವಿಕೆಯನ್ನು ಸೂಚಿಸುವ ಪದವೆಂಬುದು, "ದೀಕ್ಷಾಸ್ನಾನ" (βάπτισμα, *baptisma*) ಎಂಬ ಪದದೊಂದಿಗೆ ಸಂಬಂಧ ಹೊಂದಿದೆ ಎಂಬುದು ಸ್ಪಷ್ಟವಾಗಿರುತ್ತದೆ. ಸ್ನಾನಿಕವಾದ

ಯೋಹಾನ ಮತ್ತು ಆದಿ ಕ್ರೈಸ್ತರಿಬ್ಬರಿಗೂ ಅನ್ವಯಿಸಲ್ಪಟ್ಟಿರುವ ಗ್ರೀಕ್ ಪದವು, ಮುಳುಗುವಿಕೆ ಅಲ್ಲದೆ ಬೇರೆನೂ ಆಗಿರಲಾರದು. ಈ ವಾಸ್ತವಾಂಶವನ್ನು ಗ್ರೀಕ್ ಅರ್ಥೋಡೊಕ್ಷ ಸಭೆಯು ದೃಷ್ಟಾಂತೀಕರಿಸಿರುತ್ತದೆ, ಅದು ಇಪ್ಪೊಂದು ಶತಮಾನಗಳಿಂದ ಮುಳುಗಿಸುವಿಕೆ (*baptisma*) ಭಾಷೆ ಮತ್ತು ಆಚಾರಗಳೆಡರಲ್ಲೂ ಅಡಚಣೆಯಿಲ್ಲದಂಥ ಹರಿವು ಅನುಭವಿಸಿರುತ್ತದೆ; ಈ ಪದವು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಲ್ಪಟ್ಟಿರುವದಿಲ್ಲ.[58] ಗ್ರೀಕ್ ಬೈಬಲಿನಲ್ಲಿ "ಚಿಮುಕಿಸು" (ῥαντίζω, *rhantizō*) ಮತ್ತು "ಸುರಿಸು" (ἐκχέω, *ekcheō*) ಎಂಬ ಎರಡೂ ಪದಗಳು ಕಾಣಿಸಿಕೊಳ್ಳುತ್ತವೆ, ಆದರೆ ಹೊಸ ಒಡಂಬಡಿಕೆಯಲ್ಲಿ ನೀರಿನ ದೀಕ್ಷಾಸ್ನಾನವನ್ನು ಸೂಚಿಸುವದಕ್ಕೆ ಇವುಗಳಲ್ಲಿ ಯಾವ ಪದವೂ ಬಳಸಲ್ಪಟ್ಟಿರುವದಿಲ್ಲ.

ದೇವರ ಆಜ್ಞೆಯನ್ನು (ಮುಳುಗಿಸುವಿಕೆ) ಬದಿಗೊತ್ತು ಅದರ ಸ್ಥಾನದಲ್ಲಿ ಮಾನವ ಸಂಪ್ರದಾಯವನ್ನು (ಅದು ಚಿಮುಕಿಸುವಿಕೆ ಆಗಿರಬಹುದು ಅಥವಾ ಸುರಿಯುವದು ಆಗಿರಬಹುದು) ತರುವ ಮೂಲಕ, ಲೆಕ್ಕವಿಲ್ಲದಷ್ಟು ಆತ್ಮಗಳು ಕ್ರಿಸ್ತನ ಸುವಾರ್ತೆಗೆ ವಿಧೇಯವಾಗುವದಕ್ಕೆ ವಿಫಲವಾಗಿರುತ್ತವೆ. ಅಷ್ಟುಮಾತ್ರವಲ್ಲದೆ, ಪರಿಣಾಮವಿಲ್ಲದ ಪರ್ಯಾಯ ಸಂಗತಿಗಳು ದೀಕ್ಷಾಸ್ನಾನ ಕ್ರಿಯೆಯು ಯಾವದನ್ನು ಸಂಕೇತಿಸಬೇಕೆಂದು ಕೊಡಲ್ಪಟ್ಟಿತೋ ಅದನ್ನು ಬಚ್ಚಿಡುತ್ತವೆ: ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನ. ಪಶ್ಚಾತ್ತಾಪ ಮತ್ತು ಮುಳುಗುವಿಕೆಯಲ್ಲಿ, ಒಬ್ಬ ವ್ಯಕ್ತಿಯು ಪಾಪ ಹಾಗೂ ಲೋಕದ ಪಾಲಿಗೆ ಮರಣಿಸುತ್ತಾನೆ; ಆ ಬಳಿಕ ಆತನು ಕ್ರಿಸ್ತನಲ್ಲಿ "ಹೊಸಬನಾಗಿ" ನಡೆದುಕೊಳ್ಳಲು ಎಬ್ಬಿಸಲ್ಪಡುತ್ತಾನೆ.[59]

ನಾನು ಯೂರೋಪಿನಲ್ಲಿ ಜರ್ಮನ್ ಭಾಷೆಯನ್ನಾಡುವ ದೇಶಗಳಲ್ಲಿದ್ದ ಒಂದು ಸೇವೆಯ ಭಾಗವಾಗಿರುವ ವೇಳೆ, ಕೆಲವು ಸಾರಿ ನಮ್ಮ ಮಧ್ಯದಲ್ಲಿರುತ್ತಿದ್ದ ಅಥಿತಿಗಳಲ್ಲಿ ಕೆಲವರು ಕ್ರಿಸ್ತನಲ್ಲಿ ವಿಶ್ವಾಸಿಯು ಮುಳುಗಿಸಲ್ಪಡುವದನ್ನು ಅದೇ ಮೊಟ್ಟಮೊದಲ ಬಾರಿಗೆ ಕಾಣುವವರಾಗಿರುತ್ತಿದ್ದರು. ಇಂತಹ ಒಂದಕ್ಕಿಂತ ಅಧಿಕ ಸಂದರ್ಭಗಳಲ್ಲಿ, ಈ ದೃಶ್ಯವನ್ನು ಕಂಡು ಅದರ ಪೂರ್ಣ ಉದ್ದೇಶವನ್ನು ಅರ್ಥಮಾಡಿಕೊಂಡವರಾಗಿ, ಅಥಿತಿಗಳು ಅದೇ ಕ್ಷಣದಲ್ಲಿ ಕ್ರಿಸ್ತನನ್ನು ಅರಿಕೆ ಮಾಡಿ ಕರ್ತನಿಗೆ ತಮ್ಮನ್ನು ಒಪ್ಪಿಸಿಕೊಂಡವರಾಗಿ "ನೀರಿನೊಳಗೆ ಇಳಿಯಲು" ನಿರ್ಧರಿಸುತ್ತಿದ್ದರು. ಸ್ವತಃ ಯೇಸುವು ಸ್ಪಷ್ಟವಾಗಿ ಹೇಳಿದ್ದೇನೆಂದರೆ, "ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6). ಪೌಲನು ಈ ಸರಳವಾದ ಕ್ರಿಯೆಯನ್ನು ಕುರಿತು ಮಾತಾಡುವವನಾಗಿಯೇ ಈ ವಿಧವಾಗಿ ಹೇಳಿದನು, "ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು" (ರೋಮಾ 6:5).

ಈ ವಿಧೇಯತೆಯುಳ್ಳ ನಂಬಿಕೆಯನ್ನು ಸರಳವಾಗಿ ಪುನರಾಭನಯಿಸುವಿಕೆಯು ಮನುಷ್ಯರ ಆತ್ಮಗಳಿಗೆ ತಿಳಿಯಪಡಿಸುವ ಜ್ಞಾನಪ್ರಕಾಶವನ್ನು ಬಚ್ಚಿಡುವದು ಒಂದ ನಾಚಿಕೆಯ ಸಂಗತಿಯಾಗಿದೆ. ಅನೇಕರಿಗಾದರೋ, ಇದು ಸಂಸ್ಕೃತಿಕ ಸಂಪ್ರದಾಯಗಳು ಮತ್ತು ಸಭೆಯಾಧಾರಿತ ಪರ್ಯಾಯಗಳ ಪದರುಗಳಡಿಯಲ್ಲಿ ಮರೆಮಾಡಿ ಇಡಲ್ಪಟ್ಟಿದೆ. ಈ ಸಂಪ್ರದಾಯಗಳು ಮಹಿಮೆಯ ಕರ್ತನು ಸಾರುವಂತೆ ತನ್ನ ಅಪೊಸ್ತಲರಿಗೆ ಅನುಗ್ರಹಿಸಿದ ಸರಳವಾದ ಆದರೆ ಗಹನವಾದ ಜ್ಞಾನವನ್ನು ಗಲಿಬಿಲಿಗೊಳಿಸುತ್ತವೆ. ಕಾಯುತ್ತಿರುವ ದೇಶಗಳ ಕಿವಿಗಳಿಗೂ ಕಣ್ಣುಗಳಿಗೂ ಇದನ್ನು ತಿಳಿಯಪಡಿಸಬೇಕೆಂಬುದು ಯೇಸುವಿನ ಬಯಕೆಯಾಗಿತ್ತು, ಹೀಗೆ ಅವರು ಆತನ ರಕ್ಷಣೆಯ ಅದ್ಭುತವಾದ ಕೃಪೆಯಲ್ಲಿ ಪಾಲುಗಾರರಾಗುವಂತಾಗಬೇಕು ಎಂದಾಗಿತ್ತು (ಮತ್ತಾಯ 28:18-20).

ಈ ಗೋಚರವಾದ ಪುನರಾಭಿನಯವು ಸ್ವೀಜರಲ್ಯಾಂಡಿನ ಝುರಿಚ್ ಎಂಬಲ್ಲಿ ನಡೆಯುತ್ತಿದ್ದ ಒಂದು ಸೇವಾಧ್ಯೇಯವನ್ನು, ಮತ್ತು ಅಲ್ಲಿ ನಡೆದ ಒಂದು ಸೇವಾಧ್ಯೇಯದ ವೇಳೆಯಲ್ಲಿ ನೀರಿನೊಳಗೆ ನಡಿಸಲ್ಪಟ್ಟ ಮೊಟ್ಟಮೊದಲ ವ್ಯಕ್ತಿಯ ಕಥೆಯನ್ನು ಜ್ಞಾಪಕಕ್ಕೆ ತರುತ್ತದೆ. ಆ ಸೇವಾಧ್ಯೇಯದ ಆರಂಭವು ಅಷ್ಟೇನೂ ಸುಲಭವಾಗಿರಲಿಲ್ಲ. ಆರು ಜನರಿಗಿಂತಲೂ ಕಡಿಮೆಯಾದವರು ಭಾನುವಾರದಂದು ಮುಕ್ತವಾಗಿರುತ್ತಿದ್ದಂಥ ನಾಲ್ಕನೆಯ ಮಹಡಿಯಲ್ಲಿದ್ದ ಒಂದು ಪಾಕಶಾಲೆಯ ಬಾಡಿಗೆ ಕೋಣೆಯಲ್ಲಿ ಕೂಡಿ ಬರುತ್ತಿದ್ದರು. ಕೋಣೆಯು ಪಟ್ಟಣದ ಒಂದು ಕೈಗಾರಿಕಾ ಭಾಗದಲ್ಲಿತ್ತು ಮತ್ತು ಅದು ಸಹಜವಾದ "ದೇವಾಲಯ"ದ ರೀತಿಯಲ್ಲಂತೂ ಕಾಣುತ್ತಿರಲಿಲ್ಲ. ಇದರ ಜೊತೆಗೆ, ಇಲ್ಲಿಗೆ ಬರಬೇಕಾದರೆ ಎಲಿವೇಟರು ಮೂಲಕವೇ ಬರಬೇಕಿತ್ತು ಮತ್ತು ಇದರೊಳಗೆ ಉದ್ದವಾದ ಪ್ರಾಧ್ಯಾಪಕ-ಕೋಣೆಯ ಮೇಜುಗಳು ಇಡಲ್ಪಟ್ಟಿದ್ದವಾದ್ದರಿಂದ, ಒಬ್ಬ ಅಥಿತಿಯು ಮೊದಲು ಬಾಗಿಲು ತೆರೆದು ಒಳಗೆ ಇಣುಕಿ ನೋಡಿದಾಗ ಆತನ ಮೇಲೆ ಒಂದು ನಿರಾಶೆಯ ಪರಿಣಾಮವನ್ನು ಬೀರಿರಬಹುದಾಗಿದೆ.

ಹೇಗೂ, ಕಾಲವು ಗತಿಸಿದಂತೆ, ಪಟ್ಟಣದಲ್ಲಿರುವ ಪ್ರತಿಯೊಂದು ವಿಳಾಸಕ್ಕೆ ಉಚಿತವಾಗಿ ಕಳುಹಿಸಲ್ಪಡುತ್ತಿದ್ದ ದೈನಂದಿನ ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ನಮ್ಮ "ಬ್ಯಾಕ್ ಟು ದಿ ಬೈಬಲ್!" ಅಂಕಣಗಳು ಜನರ ಕುತೂಹಲವನ್ನು ತಣಿಸಲಾರಂಭಿಸಿದ್ದವು. ಅನೇಕರು, ಒಳಗೆ ನೋಡುವದಕ್ಕೆ ಮಾತ್ರವಲ್ಲದೆ, ಆಲಿಸುವದಕ್ಕೆ ಸಹ ಬಂದರು. "ಒಲ್ಗಾ" ಎಂಬ ಹೆಸರಿನ ಒಬ್ಬ ಸ್ತ್ರೀಯು ನಮ್ಮ ಆರಾಧನಾ ಕೂಟಗಳಿಗೆ ಬರುತ್ತಿದ್ದಳು, ಗಮನವಿಟ್ಟು ಆಲಿಸುತ್ತಿದ್ದಳು, ಮತ್ತು ಇನ್ನಷ್ಟು ತಿಳಿದುಕೊಳ್ಳಬೇಕೆಂದು ಬಯಸಿದ್ದಳು. ಸ್ವಲ್ಪ ಸಮಯದ ನಂತರದಲ್ಲಿ, ನಾವು ಆಕೆಯೊಂದಿಗೆ ಅಧ್ಯಯನ ಮಾಡುವದಕ್ಕೆ ಮತ್ತು ಆಕೆಯಲ್ಲಿದ್ದ ಹಲವಾರು ಪ್ರಶ್ನೆಗಳ ಬಗ್ಗೆ ಚರ್ಚಿಸುವದಕ್ಕೆ ಶಕ್ತರಾಗಿದ್ದೆವು. ನಾವು ದೀಕ್ಷಾಸ್ನಾನದ ವಿಷಯಕ್ಕೆ ಬಂದು ರೋಮಾ 6 ಮತ್ತು ಕೊಲೊಸ್ಸೆ 2 ಅಧ್ಯಾಯಗಳಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಡುವಿಕೆಯ ಕುರಿತ ವಾಕ್ಯಭಾಗಗಳ ಬಳಿಗೆ ಬಂದಾಗ, ಆಕೆಯು - ಎಂದಿಗೂ ಯಾರಾದರೂ ಮುಳುಗಿಸಿ ದೀಕ್ಷಾಸ್ನಾನ ಮಾಡಿಸಲ್ಪಡುವದನ್ನು ಕಂಡಿರಲೇ ಇಲ್ಲವಾದ್ದರಿಂದ - "ನಾವು ಅದನ್ನು ಹೇಗೆ ಅರ್ಥಮಾಡಿಕೊಳ್ಳಬೇಕಾಗಿರುತ್ತದೆ?" ಎಂದು ಕೇಳಿದಳು. ನಾನು ಸುಮ್ಮನೆ ಎದ್ದು ನಿಂತು ಒಬ್ಬ ವ್ಯಕ್ತಿಯು ಹೇಗೆ ನೀರಿನೊಳಗೆ ಹಿಂದಕ್ಕೆ ಮಲಗಿಸಿ ಮುಳುಗಿಸಲ್ಪಡಬಹುದು ಎಂಬುದನ್ನು ಮೂಕಾಭಿನಯದಿಂದ ತೋರಿಸಿ ಕೊಟ್ಟೆನು. ಆಕೆಗಾಗಿ ದೀಕ್ಷಾಸ್ನಾನದ ವ್ಯವಸ್ಥೆಯನ್ನು ಮಾಡಿದ ಕೂಡಲೇ, ಕೂಟಗಳಿಗೆ ಬರುತ್ತಿದ್ದವರೊಳಗೆ ಇನ್ನೂ ಇಬ್ಬರು ಬಂದು ಅದೇ ದಿನದಲ್ಲಿ ನೀರಿನೊಳಗೆ ಆಕೆಯನ್ನು ಅನುಸರಿಸಿದರು, ಝುರಿಚ್ ಪಟ್ಟಣದಲ್ಲಿ "ಪ್ರಥಮಫಲ" ಆದರು.

ವಿಷಾದಕರವಾಗಿ, ಒಲ್ಗಾಳ ಗಂಡನು ಆಕೆಯ ತೀರ್ಮಾನದ ಬಗ್ಗೆ ಒಮ್ಮತ ಹೊಂದಿರಲಿಲ್ಲ ಮತ್ತು ವಿವಿಧ ರೀತಿಗಳಲ್ಲಿ ಆಕೆಯೊಂದಿಗೆ ಕೆಟ್ಟದ್ದಾಗಿ ವರ್ತಿಸಲಾರಂಭಿಸಿದ್ದನು. ಆತನು ತನ್ನ ಮರಣದ ದಿನದ ತನಕವೂ ಇದನ್ನು ಮುಂದುವರೆಸಿದ್ದನು, ಹೀಗಿರುವದರಿಂದ ಒಲ್ಗಾಳು ಕ್ರಿಸ್ತನ ನಿಮಿತ್ತವಾದ ಹಿಂಸೆಯನ್ನು ಅನುಭವ ಮಾಡಿದ್ದಳು. ಹಾಗಿದ್ದರೂ, ಆಕೆಯ ಮರಣದ ತನಕವೂ ಆಕೆಯು ನಂಬಿಗಸ್ತಳಾಗಿ ಉಳಿದಳು. ಒಲ್ಗಾಳು ಒಬ್ಬ ವಿಶೇಷವಾಗಿ ವರ ಹೊಂದಿದ ವ್ಯಕ್ತಿ ಎಂದಾಗಿರಲಿಲ್ಲ; ಆದರೆ ಒಬ್ಬ ಸಾಧಾರಣ ಗೃಹಿಣಿಯಾಗಿ, ಆಕೆಯ ಗಂಡನು ಜೀವಂತವಾಗಿದ್ದಷ್ಟು ಕಾಲ ಒಂದು ಕಷ್ಟಿಯಾದ ಭಾರವನ್ನು ಹೊತ್ತುಕೊಂಡಳು. ಆಕೆಯ ಜೀವಿತದಲ್ಲಿನ ಒಂದು ಅಂದವು ಏನೆಂದರೆ ಆಕೆಯು ದೀರ್ಘಕಾಲದ ಜೀವಿತದುದ್ದಕ್ಕೂ ತನ್ನ ಸಮರ್ಪಣೆಯನ್ನು ಕಾಪಾಡಿಕೊಂಡಳು ಮತ್ತು ಕರ್ತನಾದ ಯೇಸು ಕ್ರಿಸ್ತನ ಶಿಸುವಾವಸ್ಥೆಯಲ್ಲಿದ್ದ ಸಭೆಗೆ ಆಕೆಯ ನಂತರದಲ್ಲಿ ಬಂದವರಿಗೆಲ್ಲಾ ಒಂದು ಮಾದರಿಯಾಗಿದ್ದಳು.

ಯೇಸುವಿನ ಅಧಿಕಾರಯುತ ಆಜ್ಞೆಯನ್ನು ಮಾತಿನಿಂದ ಅಥವಾ ಗೋಚರವಾದ ಮಾದರಿಯ ಮೂಲಕ ತಿಳಿಯಪಡಿಸಬಹುದಾಗಿದೆ. ಈ ಪ್ರಕರಣದಲ್ಲಿ, ಸಂದೇಶವು ಸಾರಭೂತವಾಗಿ ದೈಹಿಕ ಚಲನವಲನಗಳ ಮೂಲಕವಾಗಿ ನೀಡಲ್ಪಟ್ಟ ಬಣ್ಣನೆಯ ಮೂಲಕ ಸ್ಪಷ್ಟಗೊಂಡಿತ್ತು. ಖಂಡಿತವಾಗಿಯೂ, ಬೇರೆ ಮಾತುಗಳು ನುಡಿಯಲ್ಪಟ್ಟಿದ್ದವಷ್ಟೆ; ಆದರೆ ಈ ಸ್ತ್ರೀಯು ಕ್ರಿಸ್ತನನ್ನು ಕರ್ತನೆಂದು ಅರಿಕೆ ಮಾಡಿ ದೀಕ್ಷಾಸ್ನಾನದಲ್ಲಿ ತನ್ನ ಪಾಪಗಳನ್ನು ತೊಳೆದುಕೊಳ್ಳುವಂತಾಗುವ ಹಾಗೆ ಆಕೆಯ ಹೃದಯವನ್ನು ಕದಲಿಸಿದ್ದು ಈ ಸರಳವಾಗಿ ದೈಹಿಕ ಅಭಿನಯದಿಂದ ತೋರಿಸಿ ಕೊಡಲ್ಪಟ್ಟದ್ದರಿಂದಲೇ ಎಂದು ಸ್ಪಷ್ಟವಾಗಿತ್ತು.[60]

**ಸೂತ್ರಗಳು (6:16)**

ಇಪ್ಪತ್ತೊಂದನೆಯ ಶತಮಾನದ ಒಂದು ದುಃಖಕರ ವಿದ್ಯಾಮಾನವು ಏನೆಂದರೆ ಅನೇಕ ಯುವಜನರು, ಕ್ರೈಸ್ತೀಯ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ನೊಂದಾಯಿಸಿಕೊಂಡಿರುವ ವಿದ್ಯಾರ್ಥಿಗಳು ಸಹ ಸೂತ್ರಗಳಿಗೆ ಸಂಬಂಧಿಸಿದ ಯಾವದನ್ನೆ ಆಗಲಿ ಕೇಳಿಸಿಕೊಳ್ಳುವದಕ್ಕೆ ವಿರುದ್ಧವಾಗಿರುತ್ತಾರೆ. ಕ್ರೈಸ್ತರು ಧರ್ಮಶಾಸ್ತ್ರಕ್ಕೆ ಅಧೀನರೆಂಬುದನ್ನು ಪೌಲನು ನಿರಾಕರಿಸಿದನಾದರೂ, ಹೊಸ ಒಡಂಬಡಿಕೆಯಲ್ಲಿ ನಾವು ಅನುಸರಿಸಬೇಕಾಗಿರುವ ಆಜ್ಞೆಗಳನ್ನು ಮತ್ತು ಬುದ್ಧಿವಾದಗಳನ್ನು ಆಗಲೂ ಕೊಟ್ಟನು. 6:16ರಲ್ಲಿ, ಪ್ರೇರಿತ ಅಪೊಸ್ತಲನು ನವಜಾತ ಶಿಸು, ಸಭೆಯಾಗಿರುವಂತಹ, "ದೇವರ ಇಸ್ರಾಯೇಲ್ಯರು" ಆಗಿರುವ ಪರಿಶುದ್ಧಗೊಳಿಸಲ್ಪಟ್ಟಿರುವ ಪ್ರಜೆಗಳಿಗೆ ಅನ್ವಯಿಸುವ ಪ್ರಕಾರವಾಗಿ "ಸೂತ್ರ" ಎಂಬ ಪದವನ್ನು ಬಳಕೆ ಮಾಡಿದನು.

ಪೌಲನು "ಈ ಸೂತ್ರಕ್ಕೆ ಸರಿಯಾಗಿ ನಡೆಯುವ[ದರ]" ಕುರಿತು ಮಾತಾಡಿದಾಗ, ಆತನು ನಮ್ಮನ್ನು ಮಕ್ಕಳೆಂಬಂತೆ ನಮಗೆ ಪೋಷಕನಾಗಿ ಹೇಳುತ್ತಿಲ್ಲ. ಲೋಕಕ್ಕೆ ಸುವಾರ್ತೆಯನ್ನು ಸಾರಿ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ತನ್ನ ಅಪೊಸ್ತಲರಿಗೆ ಆದೇಶಿಸುವವನಾಗಿ, ಕರ್ತನಾದ ಯೇಸುವು "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" ಎಂಬ ಮಾತುಗಳನ್ನು ಸೇರ್ಪಡೆಗೊಳಿಸಿದನು (ಮತ್ತಾಯ 28:20). ಅಷ್ಟುಮಾತ್ರವಲ್ಲದೆ, ಈ ಮಾತುಗಳ ಮುಂಚಿತವಾಗಿ ಘನಗಂಭೀರವಾದ "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿರಿ" ಎಂಬ ಘೋಷಣೆಯು ಇರುತ್ತದೆ (ಮತ್ತಾಯ 28:18, 19).

ಬೈಬಲಿನಲ್ಲಿ, ರೋಮಾ 3:9-18ರಲ್ಲಿ ಹಳೆಯ ಒಡಂಬಡಿಕೆಯಿಂದ ಹಲವಾರು ಉಲ್ಲೇಖಗಳನ್ನು ಒಂದಾಗಿ ಎಣೆಯುವದರ ಮೂಲಕ ದುಷ್ಟತ್ವಗಳ ಒಂದು ಮಾಲೆಯನ್ನು ಉಚ್ಛರಿಸುತ್ತಾನೆ. ಸ್ವಲ್ಪ ಮಟ್ಟಿಗೆ ಪರಿಷ್ಕರಿಸುವದರೊಂದಿಗೆ, ರೋಮಾ 1:18-32 ವಚನಗಳು ಇಂದು ನಾವು ದೈನಂದಿನ ಸುದ್ದಿಪತ್ರಿಕೆಗಳಲ್ಲಿ ಕಾಣುವ ಸಂಗತಿಗಳನ್ನು ಹೋಲುವವು.

ಪ್ರತಿಯೊಂದು ನಾಗರೀಕ ಸಮಾಜ ಅಥವಾ ಸಂಸ್ಥೆಯಲ್ಲಿನ ಸದಸ್ಯರಿಂದ ಸಮರ್ಪಕವಾದ ನಡವಳಿಕೆಗೆ ಸೂತ್ರಗಳ ಅಗತ್ಯವಿರುತ್ತದೆ. ಜನರಿಗೆ - ಕ್ರೈಸ್ತರಿಗೆ ಸಹ - ಸೂತ್ರಗಳ ಅಗತ್ಯವಿದೆ. ಪವಿತ್ರಾತ್ಮನಲ್ಲಿರುವ ಜೀವನದ ವೈಶಿಷ್ಟ್ಯತೆಯಾಗಿರುವಂತಹ ನಡವಳಿಕೆಯು ಹೇಗಿರಬೇಕೆಂದು ನಮಗೆ ಸಂಪೂರ್ಣವಾಗಿ ಉಪದೇಶಿಸಲ್ಪಡದಿದ್ದಲ್ಲಿ, ನಾವು ಬಹುಶಃ ಆತ್ಮೀಕ ಜೀವನದ ಮಟ್ಟವನ್ನು ಎಂದಿಗೂ ತಲುಪಲಾರೆವು ಅಥವಾ ನಮ್ಮ ಸೃಷ್ಟಿಕರ್ತನು ನಮ್ಮನ್ನು ಯಾವ ಸಾರೂಪ್ಯದಲ್ಲಿ ಮರುರೂಪಗೊಳಿಸುವ ಇಂಗಿತ ಹೊಂದಿದ್ದಾನೋ ಆ ವಿಧದಲ್ಲಿ

ಮಾರ್ಪಡಲಾರೆವು. ಸೂತ್ರಗಳ ಉದ್ದೇಶವು ನಮ್ಮನ್ನು ನಿಗ್ರಹಿಸುವದಕ್ಕೆ ಅಥವಾ ಸಂಕೋಲೆಗಳಿಂದ ನಮ್ಮನ್ನು ಕಟ್ಟುವದಕ್ಕಾಗಿ ಅಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅವುಗಳು ನಮಗೆ ಭ್ರಷ್ಟವಾದ ಅಭಿಲಾಷೆಗಳಿಂದ ಮತ್ತು ದಾರಿತಪ್ಪಿಸಲ್ಪಟ್ಟಿರುವ ಬಯಕೆಗಳಿಂದ ಸ್ವಾತಂತ್ರ್ಯವನ್ನು ಕೊಡುತ್ತವೆ, ನಮ್ಮ ಆತ್ಮಗಳಿಗೆ ಹೊರೆಯಾಗಿಸುವ ಪಾಪದ ದಬ್ಬಾಳಿಕೆ ಮಾಡುವಂತಹ ಭಾರದಿಂದ ಸ್ವಾತಂತ್ರ್ಯಗೊಳಿಸುತ್ತವೆ.

ಒಂದು ಅರ್ಥದಲ್ಲಿ, ಪೌಲನು ಮಾತಾಡಿದ "ಹೊಸ ಸೃಷ್ಟಿ" ಎಂಬುದು ಏದೆನ್ ತೋಟದಲ್ಲಿದ್ದ ನಮ್ಮ ಪೂರ್ವಜರ ಸ್ಥಿತಿಗಿಂತಲೂ ಎಷ್ಟೋ ಸರ್ವೋಚ್ಛವಾದದ್ದಾಗಿದೆ, ಆದಾಗ್ಯೂ ಅವರ ಮೂಲ ಸ್ಥಿತಿಯ ಮುಗ್ದತೆಯಲ್ಲಿ ಏನೋ ಒಂದು ಸೌಂದರ್ಯವು ಇರುತ್ತದೆ. ಅವರ ಮಗುವಿನಂತಹ ಸ್ವಭಾವದಲ್ಲಿ, ಅವರು ತಮ್ಮ ವಿಧೇಯತೆಯಿಂದಾಗಿ ಉದ್ಭವವಾಗಲಿದ್ದ ವಿನಾಶಕಾರಿ ಪರಿಣಾಮಗಳ ಬಗ್ಗೆ ಊಹಿಸಿಕೊಳ್ಳುವದಕ್ಕೂ ಸಾಧ್ಯವಿರಲಿಲ್ಲ. ಪಾಪವನ್ನು ಈ ಮುಂಚೆ ಎಂದೂ ಅನುಭವ ಮಾಡದವರಾಗಿ, ಅವರಿಗೆ ಅಪರಾಧಭಾವ, ಕೃಪೆ, ಮತ್ತು ವಿಮೋಚನೆಗಳೆಂಬ ಭಾವನೆಗಳು ಎಂದಿಗೂ ಅರ್ಥವಾಗಿರಲಾರವು.

ಹೌದು, ತೋಟದ ಪರದೈಸಿನಲ್ಲಿ ಸಹ ಸೂತ್ರಗಳಿದ್ದವು - ವಿಶ್ವವನ್ನು ಆಳುವವನಿಂದ ಕೊಡಲ್ಪಟ್ಟಿದ್ದ ಸೂತ್ರಗಳು. ಅವರಲ್ಲಿದ್ದ ಸ್ವಲ್ಪ ಮಟ್ಟಿನ ಮುಗ್ಧತೆಯಲ್ಲಿ, ಮೊದಲ ಪುರುಷ ಮತ್ತು ಸ್ತ್ರೀಯು ದೇವರಿಗೆ ಅವಿಧೇಯತೆ ತೋರಿಸಿದರು, ಆತನು ಅವರಿಗೆ ಸ್ಪಷ್ಟವಾದ ರೀತಿಯಲ್ಲಿ ಎಚ್ಚರಿಕೆಯನ್ನು ಕೊಟ್ಟಿದ್ದನಷ್ಟೆ: "ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು" (ಆದಿಕಾಂಡ 2:16, 17).

## "ದೇವರ ಇಸ್ರಾಯೇಲ್ಯರು" (6:16)

6:16ರಲ್ಲಿ "ದೇವರ ಇಸ್ರಾಯೇಲ್ಯರು" ಎಂಬ ಉಲ್ಲೇಖವು ಸ್ಪಷ್ಟಗೊಳಿಸಲ್ಪಡುವದು ಅಗತ್ಯವಾಗಿರುತ್ತದೆ ಯಾಕೆಂದರೆ ಈ ವಿಷಯದಲ್ಲಿ ಒಂದು ಜನಪ್ರಿಯವಾಗಿರುವ ತಪ್ಪು ಕಲ್ಪನೆಯು ಇರುತ್ತದೆ. ಕ್ರೈಸ್ತರಂಗದಲ್ಲಿರುವ ಅನೇಕರು ಇಂದು ನಂಬುವದೇನೆಂದರೆ ಹಳೆಯ ಒಡಂಬಡಿಕೆಯ ಜನರು ಅಬ್ರಹಾಮನ ಸಂತತಿಯರೆಂಬುದರ ಆಧಾರದಲ್ಲಿ ದೇವರು ಈಗಲೂ ಯಾವದೋ ಒಂದು ರೀತಿಯಲ್ಲಿ ಅವರಿಗೆ ಮಾಡಿದ್ದ ವಾಗ್ದಾನಗಳನ್ನು ಕಾಪಾಡಿಕೊಳ್ಳುವ ಹಂಗಿನಲ್ಲಿದ್ದಾನೆ ಎಂಬುದೆ. ಈ ಬೋಧನೆಯ ಅನುಯಾಯಿಗಳು "ಶರೀರಸಂಬಂಧವಾದ ಇಸ್ರಾಯೇಲ್ಯರು"[61] ಎಂಬ ಪದಗುಚ್ಛವನ್ನು ಹೊಸ ಒಡಂಬಡಿಕೆಯಲ್ಲಿ ಪ್ರಕಟಗೊಳಿಸಲ್ಪಟ್ಟಿರುವದನ್ನು ದಾಟಿ ಅನ್ವಯಿಸುವದಕ್ಕೆ ಪರ್ಯಾಯ ದಾರಿಗಳನ್ನು ಹುಡುಕುತ್ತಾರೆ.

ಒಬ್ಬನು ಸುನ್ನತಿ ಮಾಡಿಸಿಕೊಂಡಿರುವ ಯೆಹೂದ್ಯನಾಗಿ ಹೊಂದಿರುವ ಶಾರೀರಿಕವಾದ ಸ್ಥಾನವು ಆತನನ್ನು ದೇವರ ಮುಂದೆ ನೀತಿವಂತನೆಂದು ನಿರ್ಣಯಿಸುವದಿಲ್ಲ ಎಂಬುದನ್ನು ಪೌಲನು ಸ್ಪಷ್ಟಗೊಳಿಸುತ್ತಾನೆ. 6:15ರಲ್ಲಿ ಆತನು ಹೀಗೆ ಬರೆದನು, "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು." ಈ "ಹೊಸ ಸೃಷ್ಟಿ"ಯು ಯೇಸು ಕ್ರಿಸ್ತನ ಯಜ್ಞದಿಂದ ಮಾತ್ರವೇ ಸಾಧ್ಯವಾಗಿಸಲ್ಪಡುತ್ತದೆ (6:14), ಅದನ್ನು ವಿಧೇಯತೆಯುಳ್ಳ ನಂಬಿಕೆಯ ಮೂಲಕ ಅಂಗೀಕರಿಸಿಕೊಳ್ಳತಕ್ಕದ್ದು (3:9-14, 23-29; 5:2-7; ಅಪೊಸ್ತಲರ ಕೃತ್ಯಗಳು 15:1-11).

ತಾವು ಅಬ್ರಹಾಮನ ಸಂತತಿಯವರೆಂಬ ಕಾರಣಕ್ಕಾಗಿ ತಾವು "ದೇವರ

ಇಸ್ರಾಯೇಲ್ಯ"ರಲ್ಲಿ ಸೇರಿದ್ದೇವೆಂದು ಹೇಳಿಕೊಳ್ಳುವವರು ತಪ್ಪು ಮಾಡುವವರಾಗಿದ್ದಾರೆ (6:16). ದೇವರ ದೃಷ್ಟಿಯಲ್ಲಿ ಯಾರು ನಿಜವಾದ ಇಸ್ರಾಯೇಲ್ಯರು - ಯಾರ ಮೇಲೆ ಪೌಲನು ಸಮಾಧಾನ ಮತ್ತು ಕರುಣೆಗಳು ಉಂಟಾಗಲಿ ಎಂದು ಹಾರೈಸಿದನೋ - ಎಂದು ನಿರ್ಧರಿಸುವ "ಸೂತ್ರ"ವು ಏನೆಂದರೆ ಕ್ರಿಸ್ತನಲ್ಲಿ "ನೂತನ ಸೃಷ್ಟಿ" ಆಗಿರುವದೇ. "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡ" ಮತ್ತು "ಹೊಸಬರಾಗಿ ನಡೆಯಲು" ಎಬ್ಬಿಸಲ್ಪಟ್ಟಿರುವವರು (ರೋಮಾ 6:3, 4) ನಂತರದಲ್ಲಿ ಪವಿತ್ರಾತ್ಮನನ್ನುಸರಿಸಿ ನಡೆಯಬೇಕಾಗಿರುತ್ತದೆ (ಗಲಾತ್ಯ 5:25). ಒಬ್ಬನು "ಆತ್ಮನಿಂದ ನಡಿಸಿಕೊಳ್ಳುವದಾದರೆ," ಅವನು "ಧರ್ಮಶಾಸ್ತ್ರಾಧೀನನಲ್ಲ" (5:18).

## ಕ್ಯಾನೋನ್ (6:16)

ಗಲಾತ್ಯದವರಿಗೆ ಬರೆದ ಪತ್ರಿಕೆಯೊಳಗೆ "ಕ್ಯಾನೋನ್" ಚರ್ಚೆಯಲ್ಲಿರುವದಿಲ್ಲವಾದರೂ, ಅದಕ್ಕೆ ಸಂಬಂಧಿಸಿದ ಗ್ರೀಕ್ ಪದವು 6:16ರಲ್ಲಿ ಕಾಣಿಸಿಕೊಳ್ಳುತ್ತದೆ. "ಸೂತ್ರ" ಎಂಬುದು κανών (*kanōn*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಇದು ಇಬ್ರಿಯ ಭಾಷೆಯ קָנֶה (*qaneh*, "ಬಿದಿರು" ಅಥವಾ "ಲಾಳದ ಕಡ್ಡಿ") ಎಂಬ ಹಿಬ್ರೂ ಭಾಷೆಯ ಎರವಲು ಪದಕ್ಕೆ ಸಂಬಂಧಿಸಿದ್ದಾಗಿದೆ. ಒಂದು ಲಾಳದ ಕಡ್ಡಿಯನ್ನು ಅಳತೆಗೋಲಾಗಿ ಬಳಸಲಾಗುತ್ತಿತ್ತು. ಆದದರಿಂದ, ಗ್ರೀಕ್ ಭಾಷೆಯಲ್ಲಿ *ಕಾನೋನ್* ಎಂಬ ಪದವು ಒಂದು "ಮಾನದಂಡ" ಅಥವಾ "ನಿಯಮ" ಎಂಬ ವಿಚಾರವನ್ನು ಅಳವಡಿಸಿಕೊಂಡಿತ್ತು. ಆದಿ ಕ್ರೈಸ್ತ ಶತಮಾನಗಳ ವೇಳೆಯಲ್ಲಿ, ಈ ಪದವು ಮೊದಲು "ಕ್ರೈಸ್ತ ನಂಬಿಕೆಯ ಪ್ರಮಾಣಕ ಸಿದ್ಧಾಂತದ ಮತ್ತು ನೈತಿಕ ವಿಷಯವಸ್ತುವಿಗೆ" ಅನ್ವಯಿಸಲ್ಪಟ್ಟಿತ್ತು ಹೇಗೂ, ನಾಲ್ಕನೆಯ ಶತಮಾನದ ಹೊತ್ತಿಗೆ, ಈ ಪದವು ಹಳೆಯ ಮತ್ತು ಹೊಸ ಒಡಂಬಡಿಕೆಗಳಲ್ಲಿ ಸೇರ್ಪಡೆಗೊಳಿಸಲ್ಪಟ್ಟಿರುವ ಪುಸ್ತಕಗಳ ಪಟ್ಟಿಯನ್ನು ಗೊತ್ತುಪಡಿಸುವದಕ್ಕೆ ಬಳಸಲ್ಪಡುವದಾಗಿ ಮಾರ್ಪಟ್ಟಿತ್ತು. "ಈ ಅರ್ಥದಲ್ಲಿಯೇ . . . ಇದು ಪ್ರಾಬಲ್ಯತೆಯನ್ನು ಹೊಂದಿದೆ: 'ಕ್ಯಾನೋನ್' ಎಂಬುದು ಅಧಿಕಾರಯುಕ್ತ ಶಾಸ್ತ್ರವು ಒಟ್ಟಾರೆಯಾಗಿ ರೂಪಗೊಂಡಿರುವ ದಸ್ತಾವೇಜುಗಳ ಮುಕ್ತಾಯಗೊಂಡಿರುವ ಸಂಗ್ರಹವನ್ನು ಸೂಚಿಸುವದಾಗಿರುತ್ತದೆ."[62]

ಹಳೆಯ ಒಡಂಬಡಿಕೆಯ ಕ್ಯಾನೋನನ್ನು ರಚಿಸಿದ ಕೊನೆಯ ದಿನಾಂಕದ ವಿಷಯಕ್ಕೆ ಸಂಬಂಧಿಸಿದಂತೆ, ಅಭಿಪ್ರಾಯಗಳು ಕ್ರಿ.ಪೂ. 400 ರಿಂದ ಕ್ರಿ.ಶ. 200ರ ನಡುವಿನ ಬೇರೆ ಬೇರೆ ದಿನಾಂಕಗಳನ್ನು ಸೂಚಿಸುತ್ತವೆ. D. A. Carson, Douglas J. Moo, ಮತ್ತು Leon Morris ಇವರುಗಳು ಹೇಳಿದ್ದೇನೆಂದರೆ ಕ್ರಿ.ಪೂ. ಮೊದಲ ಶತಮಾನಕ್ಕಿಂತ ನಂತರದ ಯಾವದೇ ದಿನಾಂಕವು ಪುರಾವೆಗೆ ತದ್ವಿರುದ್ಧವಾಗುವದಾಗಿದೆ. ಈ ಲೇಖಕರು ಹೇಳುವದೇನೆಂದರೆ ಪಾಷಂಡಿ ಮಾರ್ಷಿಯೊನ್ ಎಂಬುವನು ಕ್ರಿ.ಶ. ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಸಂಪ್ರದಾಯಿಕ ಕ್ರೈಸ್ತತ್ವದ ಮೊದಲ ಹೊಸ ಒಡಂಬಡಿಕೆ ಪುಸ್ತಕಗಳ ಪಟ್ಟಿಯನ್ನು ಮುದ್ರಣಗೊಳಿಸಿ ಪ್ರಕಟಿಸಿದನು:

> ಪೌಲನ ಪತ್ರಿಕೆಗಳು ಈಗಾಗಲೇ ಸಂಗ್ರಹಿತ ರೂಪದಲ್ಲಿ ಈಗಾಗಲೇ ಸುತ್ತಾಡುತ್ತಿದ್ದವು, ಮತ್ತು ಬಹುಶಃ ನಾಲ್ಕು ಕ್ಯಾನೋನಿತ ಸುವಾರ್ತೆಗಳು ಸಹ ಸೇರಿದ್ದವು. ಹೆಚ್ಚು ಪ್ರಾಮುಖ್ಯವಾಗಿ, ಹೊಸ ಒಡಂಬಡಿಕೆಯ ಶಾಸ್ತ್ರ ಎಂಬ ವಿಚಾರವು, ಖಂಡಿತವಾಗಿಯೂ ಎರಡನೆಯ ಶತಮಾನದ ಮೊದಲ ಭಾಗದಲ್ಲಿ ಉತ್ತಮವಾಗಿ ಸ್ಥಾಪಿಸಲ್ಪಟ್ಟದ್ದಾಗಿದ್ದು, ಶೀಘ್ರ ಅಥವಾ ತಡವಾದ ದಿನಾಂಕಕ್ಕೆ ಕ್ಯಾನೋನಿಕದ ಮಿತಿಯ ವಿಧವೊಂದನ್ನು

ಪೂರ್ವಕಲ್ಪಿಸಿಕೊಳ್ಳುವದಾಗಿದೆ.[63]

ಸ್ವತಃ ಯೇಸುವು ನಮಗೆ ಹಸ್ತಾಂತರಿಸಲ್ಪಟ್ಟಂತಹ ಯಾವದನ್ನೂ ಬರವಣಿಗೆಯಲ್ಲಿ ಬಿಟ್ಟು ಹೋಗಲಿಲ್ಲ. ಹೇಗೂ, ತಾನು ಸೇವೆ ಮಾಡುವ ವೇಳೆ ಶಿಷ್ಯರಿಗೆ ಏನು ಉಪದೇಶಿಸಿದನೋ ಅದನ್ನು ಅವರಿಗೆ ಪವಿತ್ರಾತ್ಮನು ಜ್ಞಾಪಕಕ್ಕೆ ತಂದು "ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" ಎಂಬುದಾಗಿ ಅವರಿಗೆ ವಾಗ್ದಾನ ಮಾಡಿದನು (ಯೋಹಾನ 14:26; 16:12, 13). ಆತನು ಯಾರ ಪಾದಗಳನ್ನು ತೊಳೆದಿದ್ದನೋ ಆ ಹನ್ನೆರಡು ಮಂದಿ ಶಿಷ್ಯರಿಗೆ ಮಾತ್ರವೇ ಈ ವಾಗ್ದಾನವು ಕೊಡಲ್ಪಟ್ಟಿತ್ತು (ಯೋಹಾನ 13:1-10); ಯಾಕೆಂದರೆ ಯೋಹಾನನ ಸುವಾರ್ತೆಯಲ್ಲಿನ ಆ ವಿಭಾಗವು ಮಧ್ಯದಲ್ಲಿ ಯಾವದೇ ಬಿಡುವಿಲ್ಲದ ಆ ಗುಂಪಿಗೆ ಮಾಡಿದ ಪ್ರಸಂಗಗಳನ್ನು ಒಳಗೊಂಡಿರುತ್ತದೆ (ಯೋಹಾನ 13-17). ಆದರಿಂದ, ಸುವಾರ್ತೆಯ ಸಾರೋಣವನ್ನು ಯೇಸುವು ವೈಯಕ್ತಿಕವಾಗಿ ಆರಂಭಗೊಳಿಸಿದನು (ಅಪೊಸ್ತಲರ ಕೃತ್ಯಗಳು 1:1) ಮತ್ತು ಬಳಿಕ ಈ ಉದ್ದೇಶಕ್ಕಾಗಿ ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಅದರ ಹೆಚ್ಚಿನ ಪ್ರಕಟನೆಯನ್ನು ಒಪ್ಪಿಸಿಕೊಟ್ಟನು (ಇಬ್ರಿಯ 2:3, 4). ಅಪೊಸ್ತಲರು, ಇತರ ಪ್ರೇರಿತ ಲೇಖಕರೊಂದಿಗೆ ಕೂಡಿಕೊಂಡು ಇಂದು ನಮ್ಮ ಕ್ರೈಸ್ತ ನಂಬಿಕೆಗೆ ಪ್ರಾಮಾಣೀಕೃತ ತಳಹದಿಯಾಗಿರುವಂಥ ಹೊಸ ಒಡಂಬಡಿಕೆಯ ಸಂದೇಶಗಳನ್ನು ದಾಖಲಿಸಿದರು (ನೋಡಿರಿ ಎಫೆಸ 2:20; 3:5).

ಹಳೆಯ ಒಡಂಬಡಿಕೆಯ ಕ್ಯಾನೋನಿನ ವಿಷಯದಲ್ಲಿ, ಯೇಸುವು ಹಳೆಯ ಒಡಂಬಡಿಕೆಯನ್ನು ಪೂರ್ತಿಯಾಗಿ ಮನ್ನಣೆ ಮಾಡಿದನು ಎಂಬುದನ್ನು ಹೊಸ ಒಡಂಬಡಿಕೆಯ ಎರಡು ವಾಕ್ಯಭಾಗಗಳು ದೃಷ್ಟಾಂತಪಡಿಸುತ್ತವೆ. ಮೊದಲನೆಯದು ಲೂಕ 24:44, ಅದು ಕ್ರಿಸ್ತನು ಪುನರುತ್ಥಾನದ ಬಳಿಕ ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವ ಘಟನೆಯನ್ನೊಳಗೊಂಡಿದೆ. ಆ ಸಂದರ್ಭದಲ್ಲಿ, ಆತನನು ಹೀಗೆ ಹೇಳಿದನು, "ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವದೆಲ್ಲಾ ನೆರವೇರುವದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ಅಂದನು." ಮೂರುವಿಧವಾದ ವಿಭಾಗಗಳನ್ನು ಉಲ್ಲೇಖಿಸುವ ಮೂಲಕ, ಯೇಸುವು ತನ್ನ ಶಿಷ್ಯರಿಗೆ ತನ್ನ ಮರಣ ಮತ್ತು ಪುನರುತ್ಥಾನಗಳು ಇಡೀ ಇಬ್ರಿಯ ಬೈಬಲನ್ನು ನೆರವೇರಿಸಿದೆ ಎಂಬುದನ್ನು ಕಲಿಸುತ್ತಿದ್ದಾನೆ. ಈ ಸನ್ನಿವೇಶದಲ್ಲಿ, "ಕೀರ್ತನೆಗಳು" ಎಂಬುದು "ಬರಹಗಳು" ಎಂಬದನ್ನು ಪ್ರತಿನಿಧಿಸುತ್ತದೆ, ಯಾಕೆಂದರೆ ಆ ಪುಸ್ತಕವು ಈ ವಿಭಾಗವನ್ನು ಆರಂಭಿಸಿದ್ದಾಗಿದೆಯಷ್ಟೆ. ಅಷ್ಟುಮಾತ್ರವಲ್ಲದೆ, ಕ್ರಿಸ್ತನ ಕುರಿತಾದ ಅಧಿಕ ಪ್ರವಾದನೆಗಳು ಬರಹಗಳಲ್ಲಿ ಬೇರೆ ಯಾವದೇ ಪುಸ್ತಕಗಳಿಗಿಂತಲೂ ಕೀರ್ತನೆಗಳಲ್ಲಿ ಕಂಡು ಬರುತ್ತವೆ.

ಯೇಸುವು ಇಡೀ ಹಳೆಯ ಒಡಂಬಡಿಕೆಯನ್ನು ಅನುಮೋದಿಸಿದನೆಂಬುದನ್ನು ಸೂಚಿಸುವ ಎರಡನೆಯ ವಾಕ್ಯಭಾಗವೆಂದರೆ ಮತ್ತಾಯ 23:29-36. ಆತನು ದೇವರ ಪ್ರವಾದಿಗಳೊಂದಿಗೆ ಕೆಟ್ಟದ್ದಾಗಿ ನಡೆದುಕೊಂಡದ್ದಕ್ಕಾಗಿ ಯೆಹೂದಿ ನಾಯಕರ ಅಪರಾಧವನ್ನು ಆತನು ಹೇಗೆ ಬಯಲಿಗೆಳೆದನು ಎಂಬುದನ್ನು ವರದಿ ಮಾಡುತ್ತದೆ. ಈ ಪಾಪವು ಇಸ್ರಾಯೇಲ್ಯರ ಇತಿಹಾಸದ ಶತಮಾನಗಳಿಂದಲೂ ನಡೆಸಲ್ಪಡುತ್ತಲೇ ಇತ್ತು. ಅವರ ಅಪರಾಧದ ವಿಷಯದಲ್ಲಿ ಕುರುಡರಾಗಿದ್ದರಾದರೂ, ಈ ಮನುಷ್ಯರು ಅವರ ಮೂಲಪಿತೃಗಳಿಗಿಂತ ಉತ್ತಮರೇನೂ ಆಗಿರಲಿಲ್ಲ. ಈ ಸನ್ನಿವೇಶದಲ್ಲಿ, ಯೇಸುವು ಈ ನಾಯಕರಿಗೆ ಹೀಗೆ ಹೇಳಿದನು,

ಆದದರಿಂದ ನೋಡಿರಿ, ನಾನು ನಿಮ್ಮ ಬಳಿಗೆ ಪ್ರವಾದಿಗಳನ್ನೂ ಜ್ಞಾನಿಗಳನ್ನೂ ಶಾಸ್ತ್ರಿಗಳನ್ನೂ

ಕಳುಹಿಸುತ್ತೇನೆ; ಅವರಲ್ಲಿ ಕೆಲವರನ್ನು ಕೊಲ್ಲುವಿರಿ, ಶಿಲುಬೆಗೆ ಹಾಕುವಿರಿ; ಕೆಲವರನ್ನು ನಿಮ್ಮ ಸಭಾಮಂದಿರಗಳಲ್ಲಿ ಕೊರಡೆಗಳಿಂದ ಹೊಡೆದು ಊರಿಂದ ಊರಿಗೆ ಅಟ್ಟಿಕೊಂಡು ಹೋಗುವಿರಿ. ಹೀಗೆ ನೀತಿವಂತನಾದ ಹೇಬೆಲನ ರಕ್ತವು ಮೊದಲುಗೊಂಡು ನೀವು ದೇವಾಲಯಕ್ಕೂ ಯಜ್ಞವೇದಿಗೂ ನಡುವೆ ಕೊಂದುಹಾಕಿದ ಬರಕೀಯನ ಮಗನಾದ ಜಕರೀಯನ ರಕ್ತದವರೆಗೂ ಭೂಮಿಯ ಮೇಲೆ ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದಿಂದುಂಟಾಗುವ ಅಪರಾಧವು ನಿಮ್ಮ ತಲೆಯ ಮೇಲೆ ಬರುವದು (ಮತ್ತಾಯ 23:34, 35).

ಹೇಬೆಲನ ಮರಣದ ಕುರಿತು ಇಬ್ರಿಯ ಕ್ಯಾನೋನಿನ ಮೊದಲ ಪುಸ್ತಕದಲ್ಲಿ ವರದಿ ಮಾಡಲ್ಪಟ್ಟಿದೆ (ಆದಿಕಾಂಡ 4:8), ಆದರೆ ಜೆಕರೀಯನ ಮರಣವು ಕೊನೆಯದ್ದರಲ್ಲಿ ಕಂಡು ಬರುತ್ತದೆ (2 ಪೂರ್ವಕಾಲವೃತ್ತಾಂತ 24:20, 21). (ಇಬ್ರಿಯ ಬೈಬಲಿನ ಪುಸ್ತಕಗಳ ಕ್ರಮದಲ್ಲಿ 2 ಪೂರ್ವಕಾಲವೃತ್ತಾಂತ ಕೊನೆಯ ಪುಸ್ತಕವಾಗಿರುತ್ತದೆ.) ಆದದರಿಂದ, ಯೇಸುವು ಆರಂಭದಿಂದ ಅಂತ್ಯದ ವರೆಗೂ, ಇಡೀ ಹಳೆಯ ಒಡಂಬಡಿಕೆಯ ಮೇಲೆ ತನ್ನ ಅನುಮೋದನೆಯ ಮುದ್ರೆಯನ್ನು ಒತ್ತಿದನು.

ಮತ್ತಾಯ 23:29–36 ವಚನಗಳು ಹೊಸ ಒಡಂಬಡಿಕೆಯು ಬರೆಯಲ್ಪಡುವದನ್ನು ಎದುರುನೋಡುತ್ತವೆ, ಅದು ಶಿಷ್ಯರ ಜೀವತಕಾಲದಲ್ಲಿ (ಮೊದಲ ಶತಮಾನದಲ್ಲಿ) ಪೂರ್ತಿಗೊಳ್ಳಲಿತ್ತು. ತಾನು "ಪ್ರವಾದಿಗಳನ್ನೂ ಜ್ಞಾನಿಗಳನ್ನೂ ಶಾಸ್ತ್ರಿಗಳನ್ನೂ" ಕಳುಹಿಸುತ್ತಿದ್ದೆನೆಂದು ಯೇಸುವು ಹೇಳಿದನು. ಹಳೆಯ ಒಡಂಬಡಿಕೆಯನ್ನು ಬರೆದ ಪ್ರವಾದಿಗಳನ್ನು ಇಸ್ರಾಯೇಲ್ಯರು ಹಿಂಸೆ ಪಡಿಸಿದ್ದ ಪ್ರಕಾರವೇ, ಅವರ ಮೊದಲ ಶತಮಾನದ ತದ್ರೂಪರು ಹೊಸ ಒಡಂಬಡಿಕೆಯನ್ನು ಬರೆಯಲಿದ್ದ ಅಪೊಸ್ತಲರನ್ನು ಮತ್ತು ಪ್ರವಾದಿಗಳನ್ನು ಹಿಂಸೆ ಪಡಿಸಲಿದ್ದರು.

ಕ್ಯಾನೋನ್ - ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡರ - ನಿಖರವಾಗಿ ಹೇಗೆ ಶಾಸ್ತ್ರಗಳ ಸ್ಥಿರವಾದ, ಅಧಿಕೃತವಾದ ಸಮೂಹವೆಂದು ಮನ್ನಣೆ ಮಾಡಲ್ಪಟ್ಟಿತು ಎಂಬುದು ಬೈಬಲ್ ಅಧ್ಯಯನಗಳಲ್ಲಿ ಅತ್ಯಂಥ ಸರಳವಾದ ಸಂಗತಿಗಳಲ್ಲೊಂದಾಗಿರುವದಿಲ್ಲ. ಹಾಗಿದ್ದರೂ, ಹಳೆಯ ಒಡಂಬಡಿಕೆಯ ಕ್ಯಾನೋನ್ ಕ್ರಿಸ್ತನ ಕಾಲಕ್ಕೆ ಮುಂಚೆಯೇ ನಿರ್ಧರಿಸಲ್ಪಟ್ಟಿತ್ತೆಂಬುದನ್ನು ಪುರಾವೆಯು ಸೂಚಿಸುತ್ತದೆ. ಅಷ್ಟುಮಾತ್ರವಲ್ಲದೆ, ಹೊಸ ಒಡಂಬಡಿಕೆಯ ಕ್ಯಾನೋನ್ ಕ್ರಿ.ಶ. ನಾಲ್ಕನೆಯ ಶತಮಾನದ ಹೊತ್ತಿಗೆ ಪೂರ್ತಿಯಾಗಿ ಸ್ಥಾಪಿಸಲ್ಪಟ್ಟಿತ್ತು. ಹೇಗೂ, ಇಪ್ಪತ್ತೇಳು ಪುಸ್ತಕಗಳೊಳಗೆ ಬಹಳಷ್ಟು ಪುಸ್ತಕಗಳು ಆ ಕಾಲಕ್ಕಿಂತಲೂ ಬಹಳ ಮುಂಚೆಯೇ ಪ್ರೇರಿತ ಶಾಸ್ತ್ರಗಳೆಂದು ವ್ಯಾಪಕವಾಗಿ ಅಂಗೀಕರಿಸಿಕೊಳ್ಳಲ್ಪಟ್ಟಿದ್ದವು. ಇವುಗಳೊಳಗೆ ಬಹಳಷ್ಟು ಪ್ರಮಾಣದ ಪುಸ್ತಕಗಳು ಮೌರಟೊರಿಯನ್ ಅವಶೇಷದಲ್ಲಿ ಪಟ್ಟಿ ಮಾಡಲ್ಪಟ್ಟಿರುತ್ತವೆ, ಅದು ಬಹುಶಃ ಎರಡನೆಯ ಶತಮಾನದ ಅಂತ್ಯದಲ್ಲಿ ಬರೆಯಲ್ಪಟ್ಟಿರಬಹುದಾಗಿದೆ.[64] ಪುಸ್ತಕಗಳ ಒಂದು ಸಂಪೂರ್ಣ ಪಟ್ಟಿಯು (ಆದಾಗ್ಯೂ ಇವುಗಳಲ್ಲಿ ಕೆಲವೊಂದು ವಿವಾದಕ್ಕೊಳಗಾಗಿರುತ್ತವೆ) ಸಭೆಯ ಇತಿಹಾಸಕಾರನಾದ Eusebiusನ ಬರಹಗಳಲ್ಲಿ ಕಂಡು ಬರುತ್ತದೆ, ಇದು ನಾಲ್ಕನೆಯ ಶತಮಾನದ ಆರಂಭದ ದಿನಾಂಕದ್ದಾಗಿರುತ್ತದೆ.[65] ಇಪ್ಪತ್ತೇಳು ಪುಸ್ತಕಗಳ ಕ್ಯಾನೋನ್ Athanasiusನ ಮೂವತ್ತೊಂಭತ್ತನೆಯ ಉತ್ಸವದ ಪತ್ರದಲ್ಲಿ ಪಟ್ಟಿ ಮಾಡಲ್ಪಟ್ಟಿದೆ (ಕ್ರಿ.ಶ. 367).[66] ಈ ಕ್ಯಾನೋನ್ ಹಿಪ್ಪೋದಲ್ಲಿ (ಕ್ರಿ.ಶ. 393) ನಡೆದ ಸಮಾಲೋಚನಾಸಭೆಯಲ್ಲಿ ಮನ್ನಣೆ ಮಾಡಲ್ಪಟ್ಟಿತ್ತು ಮತ್ತು ಕಾರ್ತೇಜಿನಲ್ಲಿ (ಕ್ರಿ.ಶ. 397) ನಡೆದ ಮೂರನೆಯ ಸಮಾಲೋಚನಾಸಭೆಯಲ್ಲಿ ಪುನರಾವರ್ತಿಸಲ್ಪಟ್ಟಿತು.[67]

**ಒಂದು ಕಳಂಕ (6:17)**

ಪೌಲನು ಗಲಾತ್ಯದವರಿಗೆ ಬರೆದ ತನ್ನ ಪತ್ರಿಕೆಯ ಮುಕ್ತಾಯದ ಸಮೀಪಕ್ಕೆ ಬರುತ್ತಿರುವ ವೇಳೆ, ತನ್ನ ದೇಹದಲ್ಲಿ "ಯೇಸುವಿನ ಮುದ್ರೆಗಳು ಹಾಕಿರುತ್ತವೆ" ಎಂದು ಗಮನಕ್ಕೆ ತರುತ್ತಾನೆ. "ಮುದ್ರೆಗಳು" ಎಂಬುದಕ್ಕೆ ಗ್ರೀಕ್ ಪದವು στίγμα (*stigma*), ಅದು ಇದೇ ಪದಗಳೊಂದಿಗೆ ಆಂಗ್ಲದಲ್ಲಿ ಸಾಗಿರುತ್ತದೆ. ಅಂಥ ಮುದ್ರೆಗಳು ವೈಶಿಷ್ಟ್ಯವಾಗಿ ಅವಮಾನದ ಸೂಚ್ಯಾರ್ಥಗಳನ್ನು ಹೊಂದಿರುತ್ತಿದಾದರೂ, ಪೌಲನು ತನ್ನ ದೇಹದಲ್ಲಿರುವ ಕಳಂಕಗಳ (ಬರೆಗಳು ಮತ್ತು ಪೆಟ್ಟುಗಾಯಗಳು) ಬಗ್ಗೆ ಒಂದು ಬೇರೆಯಾದ ದೃಷ್ಟಿಕೋನವನ್ನು ಹೊಂದಿದ್ದನು ಯಾಕೆಂದರೆ ಅವುಗಳು ಆತನನ್ನು ಯೇಸುವಿನೊಂದಿಗೆ ಸಂಬಂಧಗೊಳಿಸಿದ್ದವು. ಇತರರು ಅವುಗಳನ್ನು ನೋಡಿ ವಾಕರಿಕೆ ಪಟ್ಟುಕೊಂಡಿರಬಹುದಾದರೂ, ಆತನು ಈ ಮುದ್ರೆಗಳನ್ನು ತಾನು ಕ್ರಿಸ್ತನ ದಾಸನಾಗಿ ಸಲ್ಲಿಸಿದ ನಂಬಿಗಸ್ತಿಕೆಯ ಸೇವೆಗೆ ಪುರಾವೆ ಎಂಬಂತೆ ಕಂಡನು.

ಒಂದು ಸುಡುಮುದ್ರೆಯು ಒಬ್ಬ ವ್ಯಕ್ತಿಗೆ, ಕುಟುಂಬಕ್ಕೆ, ಸಮುದಾಯಕ್ಕೆ, ಅಥವಾ ಒಂದು ಕುಲದ ಜನರಿಗೆ ದೊಡ್ಡ ಹಾನಿಯನ್ನುಂಟು ಮಾಡಬಹುದಾಗಿತ್ತು. ನಾನು ಬೆಳೆಯುತ್ತಿರುವ ಸಮಯದಲ್ಲಿ ನಮಗೊಬ್ಬ ಬಂಧುವಿದ್ದಳು, ಆಕೆಯು ಆರೋಗ್ಯಭರಿತ ಎಂದು ಪ್ರಸಿದ್ಧಿಯಾಗಿದ್ದ ದೇಶದ ಭಾಗವೊಂದಕ್ಕೆ ಸತತವಾಗಿ ಹೋಗುತ್ತಿದ್ದಳು; ಆಕೆಯು ಅಲ್ಲಿ ಒಂದು "ವಿಶ್ರಾಂತಿಯ ಸೌಖ್ಯ" ಪಡೆದುಕೊಳ್ಳಲು ವಾರಗಳ ಗಟ್ಟಲೆ ಉಳಿದುಕೊಳ್ಳುತ್ತಿದ್ದಳು. ಹೇಗೂ, ಆಕೆಯು ಇದನ್ನು ಮಾಡುವದಕ್ಕೆ ಕಾರಣವೇನೆಂದು ಮಕ್ಕಳಾದ ನಾವು ಆಕೆಯನ್ನು ಕೇಳಿದಾಗ, ನಮಗೆ ಎಂದಿಗೂ ಒಂದು ಮುಚ್ಚುಮರೆಯಿಲ್ಲದ ಉತ್ತರವು ಸಿಕ್ಕುತ್ತಿರಲಿಲ್ಲ - ಮತ್ತು ಖಂಡಿತವಾಗಿಯೂ, ಇದು ನಮ್ಮಲ್ಲಿ ಮತ್ತಷ್ಟು ಕುತೂಹಲವನ್ನುಂಟು ಮಾಡಿತ್ತು. ನಾವು ಕಾಲೇಜಿಗೆ ಹೋಗುವ ಸಮಯದ ವರೆಗೂ ಆಕೆಯ ಶ್ವಾಸಕೋಶಗಳಲ್ಲಿ "ಒಂದು ಕಲೆ" ಇದೆ ಎಂಬುದು ನಮಗೆ ಗೊತ್ತಾಗಲಿಲ್ಲ. ಆಕೆಗೆ ಕ್ಷಯರೋಗವಿದೆ ಎಂಬುದು ಅಂತಿಮವಾಗಿ ನಮಗೆ ತಿಳಿದು ಬಂದಿತು. ಸ್ಪಷ್ಟವಾಗಿರುವಂತೆ, ಆಕೆಯು ಕ್ರಮೇಣದಲ್ಲಿ ಆಕೆಗಿದ್ದ ರೋಗ ಏನೇ ಆಗಿದ್ದಿದ್ದಾಗ್ಯೂ, ಅದರಿಂದ ಆಕೆಯು ಗುಣಮುಖಳಾಗಿ ಸಾಕಷ್ಟು ವೃದ್ಧಾಪ್ಯದ ವಯಸ್ಸಿನ ವರೆಗೂ ಬದುಕಿದಳು. ಇದನ್ನು ಏಕೆ ಗುಪ್ತವಾಗಿಡಲಾಗಿತ್ತೆಂಬುದಕ್ಕೆ ಕಾರಣವು, ಕೊನೆಗೂ ನಮಗೆ ಗೊತ್ತಾಗಿದ್ದೇನೆಂದರೆ ಕ್ಷಯರೋಗವಿದೆ ಎಂಬ ಸಂದೇಹ ಬಂದರೂ ಇಡೀ ಕುಟುಂಬಕ್ಕೆ ಅದೊಂದು "ಕಳಂಕ"ವನ್ನು ತರಬಲ್ಲದ್ದಾಗಿತ್ತು, ಅದು ಬಡತನ ಹಾಗೂ ಸ್ವಚ್ಛತೆಯನ್ನು ಕಾಪಾಡಿಕೊಳ್ಳದ್ದಕ್ಕೆ ಸಂಬಂಧಿಸಿದ್ದರಿಂದಾಗಿ ಸಮಾಜದಲ್ಲಿ ದಂಡನೆಯಾಗಿ ಕ್ರಿಯೆ ಮಾಡಬಹುದು ಎಂಬುದೆ. ಕ್ಷಯರೋಗದಿಂದ ಬಾಧಿಸಲ್ಪಡುತ್ತಿರುವ ಅಥವಾ ಅದನ್ನು ಪಡೆದುಕೊಳ್ಳುವ ಸಂಭವವಿರುವ ವ್ಯಕ್ತಿಯೊಬ್ಬನಿಗೆ ಕೆಲವೊಂದು ಉದ್ಯೋಗಗಳಲ್ಲಿ ಸೇರಿಸಿಕೊಳ್ಳಲು ನಿರಾಕರಿಸುವ ಅಥವಾ ವಿವಿಧ ಸಂಸ್ಥೆಯ ಅಥವಾ ಸಾಮಾಜಿಕ ಸ್ಥಾನಗಳಿಗೆ ಹೋಗಲು ಅವಕಾಶವು ನಿರಾಕರಿಸಲ್ಪಡುವ ಸಾಧ್ಯತೆಯಿತ್ತು.

ಕೆಲವೊಂದು ಸಂದರ್ಭಗಳಲ್ಲಿ, ಜನಾಂಗೀಯ ಹಿನ್ನಲೆಯು ಒಬ್ಬ ವ್ಯಕ್ತಿಗೆ ಆತನ ಜೀವಿತದುದ್ದಕ್ಕೂ "ಕಳಂಕ" ಹಾಕಬಹುದಿತ್ತು. ಜರ್ಮನಿಯಲ್ಲಿ, 1930 ಮತ್ತು 40ರ ಸಮಯಗಳಲ್ಲಿ, ಒಬ್ಬ ವ್ಯಕ್ತಿಯು ತನ್ನ ನರನಾಡಿಗಳಲ್ಲಿ ಯೆಹೂದಿ ರಕ್ತವಿರುವವನೆಂದು ಸಂಶಯಿಸಲ್ಪಟ್ಟರೆ ಅದಕ್ಕೊಂದು "ಕಳಂಕ" ಅಂಟಿಸಿಕೊಂಡವನಾಗಿರುತ್ತಿದ್ದನು. ಯೆಹೂದಿ-ವಿರೋಧತ್ವವು ಒಂದು ಮರಣಾಂತಿಕ ವ್ಯಾಧಿಯಂತೆ ಕೆಲಸ ಮಾಡುತ್ತಿತ್ತು, ಅದರ ಫಲಿತವಾಗಿ ಅದೊಂದನ್ನು ಬಿಟ್ಟರೆ ಪರಿಪೂರ್ಣವಾಗಿ ಸಹಜ ಹಾಗೂ ಆರೋಗ್ಯವಂತ ವ್ಯಕ್ತಿಗಳಾಗಿದ್ದ ಲಕ್ಷಾಂತರ ಜನರು ಮರಣಿಸಬೇಕಾಗಿ ಬಂದಿತ್ತು. ಈ ವಿಧವಾಗಿ ಸಾಮಾಜಿಕ "ಕಳಂಕ"ವು ಒಂದು ಸ್ಥಳ ಅಥವಾ

ಜನಾಂಗಕ್ಕೆ ಸೀಮಿತವಾಗಿರುವದಿಲ್ಲ.

## ಕ್ರಿಸ್ತನಿಗಾಗಿ ಬಾಧೆಯನ್ನನುಭವಿಸುವದು (6:17)

ಕ್ರಿಸ್ತನ ದಾಸನಾಗಿ ತನ್ನ ದೇಹದಲ್ಲಿ "ಮುದ್ರೆಗಳನ್ನು" (6:17) ಸಂತೋಷವಾಗಿ ಧರಿಸಿಕೊಂಡಿದ್ದನು. ಆತನು ಕೊಲೊಸ್ಸೆಯವರಿಗೆ ಹೀಗೆ ಬರೆದನು, "ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು. ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ" (ಕೊಲೊಸ್ಸೆ 1:24). ಇದು ಹೊಸ ಒಡಂಬಡಿಕೆಯಲ್ಲಿಯೇ ಅತ್ಯಂಥ ಮನಃಸೆಳೆಯುವಂಥ ಹೇಳಿಕೆಗಳಲ್ಲೊಂದಾಗಿದೆ. ಕರ್ತನು ಮಾತ್ರವೇ ಬಾಧೆಯನ್ನನುಭವಿಸಿದ್ದು ಸಾಕಾಗಿರಲಿಲ್ಲ. ಪೌಲನು ಸಹ, ಯೇಸುವಿನ ನಿಮಿತ್ತವಾಗಿ ಸಂಕಷ್ಟಗಳನ್ನು ಅನುಭವಿಸಿದ್ದನು. ಅದು ಆತನ ಸಂತೋಷವಾಗಿತ್ತು! ಯೇಸುವಿನ ದೇಹಕ್ಕಾಗಿ, ಲೋಕದಲ್ಲಿರುವ ಸಭೆಗೋಸ್ಕರ ಮೊದಲೇ ನೇಮಕವಾಗಿದ್ದ ಶಾರೀರಿಕ ನೋವು ಹಾಗೂ ಬಾಧೆಗಳಲ್ಲಿ ಪಾಲನ್ನು ತನ್ನ ದೇಹದಲ್ಲಿ ಅನುಭವ ಮಾಡುವದಕ್ಕೆ ಆತನು ಮನಸ್ಸುಳ್ಳವನಾಗಿದ್ದನು.

ಇದು ನಮಗೆ ಆಶ್ಚರ್ಯವಾಗಿ ತೋರುವ ಪ್ರಕಾರವೇ, ಪೇತ್ರನು ಕ್ರೈಸ್ತ ದಾಸರನ್ನು ಉದ್ದೇಶಿಸಿ ಮಾತಾಡುವ ವೇಳೆ, ಅಧೀನರಾಗಿರಬೇಕು ಮತ್ತು ಅವರ ಯಜಮಾನರು ಅವರ ವಿಷಯದಲ್ಲಿ ಅನ್ಯಾಯದಿಂದ ನಡೆದುಕೊಂಡರೆ ಅದನ್ನು ಸಹಿಸಿಕೊಳ್ಳಲು ಮನಸ್ಸುಳ್ಳವರಾಗಿರಬೇಕೆಂದು ಹೇಳಿದನು. ಆತನು ಬರೆದದ್ದೇನೆಂದರೆ,

> ತಪ್ಪುಮಾಡಿ ಗುದ್ದು ತಿನ್ನುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೇದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ. ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು (1 ಪೇತ್ರ 2:20, 21).

ಈ ನಡವಳಿಕೆಯ ಸೂತ್ರವು ಕೇವಲ ದಾಸರಿಗಾಗಿ ಮಾತ್ರವೇ ತಿಳಿಸಲ್ಪಟ್ಟಿತ್ತೋ, ಅಥವಾ ಅದು ಇಡೀ ಸಭೆಗೆ ನೀಡಿದ ಸಂದೇಶವಾಗಿತ್ತೋ? ಈ ಪ್ರಶ್ನೆಗೆ ಉತ್ತರವನ್ನು ಕೊಡಬೇಕಾದರೆ, ದೇವರು ನಮ್ಮನ್ನು ತನ್ನ ಮಕ್ಕಳಾಗಿ ಅಂಗೀಕರಿಸಿಕೊಂಡಿದ್ದಾನೆಂಬ ಕಾರಣಕ್ಕಾಗಿ ಪೌಲನು ಸಂತೋಷಿಸುತ್ತಾ ನುಡಿದ ಮಾತುಗಳನ್ನು ನೆನಪಿಸಿಕೊಂಡರೆ ಸಾಕಷ್ಟೇ - "ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" (ರೋಮಾ 8:17). ಈ ಮಾತುಗಳನ್ನು ನಿಶ್ಚಯವಾಗಿಯೂ ಪ್ರಾಚೀನ ರೋಮ್ ದಿನಗಳಲ್ಲಿದ್ದ ದಾಸರಿಗಾಗಿ ಮಾತ್ರವೇ ಹೇಳಲ್ಪಟ್ಟಿರಲಿಲ್ಲ; ಈ ಮಾತುಗಳು ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗಾಗಿ ಸಹ ಆಗಿದ್ದವು, ಮತ್ತು ಪೌಲನು ಪುನರುತ್ಥಾನದ ನಿರೀಕ್ಷೆಯ ವಿಷಯದಲ್ಲಿ ಸಹ ಹಾಗೆಯೇ ಹೆಚ್ಚಳಪಟ್ಟನು. ಆತನು ಕ್ರಿಸ್ತನ ಒಬ್ಬ ದಾಸನಾಗಿ ಅಂತ್ಯವಿಲ್ಲದೆ ಪರಿಶ್ರಮ ಪಡುವದಕ್ಕೆ ಮತ್ತು ನಿರೀಕ್ಷೆಗಳಿಗೆ ಚಾಲನೆಯ ನೀಡುವ ಶಕ್ತಿಯಾಗಿತ್ತು. ನಾವು ಕ್ರಿಸ್ತನಿಗೋಸ್ಕರ ಶ್ರಮೆಯನ್ನು ಅನುಭವಿಸಲೇ ಬೇಕಾದಾಗ, ದೇವರ ದಾಸನು ಬರಲಿರುವ ಲೋಕದಲ್ಲಿ ಪುನರುತ್ಥಾನವನ್ನು ಸಂತೋಷದಿಂದ ಎದುರುನೋಡುವವನಾಗಿ ನೋವು, ಶ್ರಮೆ, ಮತ್ತು ಸ್ವತಃ ಮರಣವನ್ನು ಯಾವ ಸ್ಥಿರತೆ ಹಾಗೂ ಧೈರ್ಯವಂತಿಕೆಗಳಲ್ಲಿ

ಎದುರಿಸಿದನೋ ಅದರಲ್ಲಿ ನಾವು ಪಾಲುಗಾರರಾಗುವೆವು.

---

## ಅಡಿಟಿಪ್ಪಣಿಗಳು

[1]ಯೋಹಾನ 7:53-8:11ಕ್ಕೆ ಗ್ರಂಥಪಾಠದ ಸಾಕ್ಷಿಗಳು, ಗ್ರೀಕ್ ಹಸ್ತಪ್ರತಿಗಳಲ್ಲಿ ಅದು ಸಿಕ್ಕುವದಾಗಿದ್ದು, ಸಾಮಾನ್ಯವಾಗಿ ಅತಿ ಹಳೆಯ ಹಾಗೂ ಅತಿ ಉತ್ತಮವೆಂದು ಪರಿಗಣಿಸಲಾಗಿರುವದಿಲ್ಲ. ಹಾಗಿದ್ದರೂ, ವಾಕ್ಯಭಾಗವು ಕೆಲವೊಂದು ಅತಿ ಹಳೆಯ ಲ್ಯಾಟಿನ್ ಹಾಗೂ ಸರಿಯಾಕ್ ಹಸ್ತಪ್ರತಿಗಳಲ್ಲಿ ಕಂಡು ಬರುತ್ತವೆ. ಅದು ಹೆಚ್ಚುಕಡಿಮೆ ನಮ್ಮ ಎಲ್ಲಾ ಆಂಗ್ಲ ಅನುವಾದಗಳಲ್ಲಿ ಸಹ ಕಾಣಿಸಿಕೊಳ್ಳುತ್ತದೆ. [2]Kenneth L. Boles, *Galatians & Ephesians*, The College Press NIV Commentary (Joplin, Mo.: College Press Publishing Co., 1993), 160. [3]Robert L. Johnson, *The Letter of Paul to the Galatians*, The Living Word Commentary (Austin, Tex.: R. B. Sweet Co., 1969), 166. [4]ನೋಡಿರಿ ರೋಮಾ 15:1; 1 ಕೊರಿಂಥ 8:13; 2 ಕೊರಿಂಥ 11:28, 29; ಗಲಾತ್ಯ 6:1. [5]ನೋಡಿರಿ ರೋಮಾ 12:3; 1 ಕೊರಿಂಥ 8:2; 2 ಕೊರಿಂಥ 10:12, 18. [6]Johnson, 167. [7]Xenophon *Memorabilia* 3.13.6. [8]ಪೌಲನು ಒಂದು ನಿರ್ದಿಷ್ಟವಾದ ಪಟ್ಟಣದಲ್ಲಿ ಬೋಧಿಸುತ್ತಿದ್ದ ವೇಳೆಯಲ್ಲಿ ಸ್ಥಳೀಯ ಜನರಿಂದ ಆರ್ಥಿಕ ಸಹಾಯವನ್ನು ಸ್ವೀಕರಿಸಿಕೊಳ್ಳುತ್ತಿರಲಿಲ್ಲ (1 ಕೊರಿಂಥ 9:18). ಆತನು ಅವರಿಗೆ ಅನುಸರಿಸುವದಕ್ಕಾಗಿ ಕೈಯಿಂದ ಪರ್ಯಾಸಪಟ್ಟು ಕೆಲಸ ಮಾಡುವದರ ಕುರಿತಾಗಿ ಒಂದು ಮಾದರಿಯನ್ನು ತೋರಿಸಬೇಕೆಂದು ಬಯಸಿದ್ದನು (ಅಪೊಸ್ತಲರ ಕೃತ್ಯಗಳು 20:33-35; 1 ಥೆಸಲೋನಿಕ 2:9; 2 ಥೆಸಲೋನಿಕ 3:7-9), ಮತ್ತು ತಾನು ಕೇವಲ ಹಣ ಪಡೆದು ಬರುವ ಬೋಧಕನಷ್ಟೇ ಎಂಬ ಸುಳ್ಳು ಟೀಕೆಯನ್ನು ತಪ್ಪಿಸಿಕೊಳ್ಳಲು ಬಯಸಿದ್ದನು. ಈ ವಿಚಾರಗಳ ವಿಷಯದಲ್ಲಿ ಪ್ರಶ್ನೆಯು ಇಲ್ಲದಿರುವ ವೇಳೆ, ಆತನು ಬೇರೆ ಪಟ್ಟಣಗಳಲ್ಲಿ ಸಭೆಗಳಿಂದ ಹಣ ಸಹಾಯವನ್ನು ಪಡೆದುಕೊಂಡನು (2 ಕೊರಿಂಥ 11:7-9; ಫಿಲಿಪ್ಪಿ 4:10-20). [9]ನೋಡಿರಿ 1 ಕೊರಿಂಥ 3:18; ಎಫೆಸ 5:6; 2 ಥೆಸಲೋನಿಕ 2:3; 1 ಯೋಹಾನ 3:7. [10]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 660.

[11]Ben Witherington III, *Grace in Galatia: A Commentary on St Paul's Letter to the Galatians* (Grand Rapids, Mich.: Wm. B. Eerdmans Publishing Co., 1998), 431. [12]Richard N. Longenecker, *Galatians*, Word Biblical Commentary, vol. 41 (Nashville: Thomas Nelson Publishers, 1990), 280–81. [13]Bauer, 272. ಇನ್ನೊಂದು ಸಂಭವನೀಯ ಅರ್ಥನಿರೂಪಣೆ ಏನೆಂದರೆ "ಒಂದು ದೊಡ್ಡ ಸಮಸ್ಯೆಯನ್ನು ಕಂಡು ಅಂಜಿಕೊಳ್ಳುವದು." (ನೋಡಿರಿ ಲೂಕ 18:1; 2 ಕೊರಿಂಥ 4:1, 16; ಎಫೆಸ 3:13; 2 ಥೆಸಲೋನಿಕ 3:13.) [14]Ibid., 694. [15]ಈ ಕ್ರಿಯಾಪದದ ಶಬ್ದಕೋಶದ ರೂಪವು γράφω (*graphō*), ಇದರರ್ಥವು "ಬರೆ." [16]ಈ ಬಳಕೆಯನ್ನು ಪತ್ರವೊಂದರಲ್ಲಿ "ಪ್ರಿಯ" ಎಂಬುದಾಗಿ ಆರಂಭಿಸುವದರೊಂದಿಗೆ ಹೋಲಿಕೆ ಮಾಡಬಹುದಾಗಿದೆ. ನಮ್ಮಲ್ಲಿ ಅನೇಕರು ಇಂದು ಈ ವಿಧವಾದ ಸಂಬೋಧನೆಯ ಶೈಲಿಯನ್ನು ಬಳಸುತ್ತೇವೆ, ನಾವು ವೈಯಕ್ತಿಕವಾಗಿ ಪರಿಚಯ ಹೊಂದಿರದ ಜನರನ್ನು ಸಂಬೋಧಿಸಿ ಸಹ ಇದನ್ನು ಬಳಸುತ್ತೇವೆ. [17]NASBಯಲ್ಲಿ ಇದು ಸ್ಪಷ್ಟವಾಗಿ ಕಾಣಿಸುವದಿಲ್ಲವಾದರು, ತೆರ್ತ್ಯನು ಎಂಬುದು ರೋಮಾ 16:22ರಲ್ಲಿ ಒಂದು ಪತ್ರಾತ್ಮಕ ಅನಿಶ್ಚಿತಭೂತಕಾಲವಾಗಿ ಬಳಸಲ್ಪಟ್ಟಿದ್ದು ಗಲಾತ್ಯ 6:11ರಲ್ಲಿ ಪೌಲನು ಹಾಗೆಯೇ ಬಳಸಿದ್ದಾನೆ. ಒಂದು ಪ್ರಮುಖ ವ್ಯತ್ಯಾಸವು ಏನೆಂದರೆ ತೆರ್ತ್ಯನು ಎಂಬುದನ್ನು ಒಂದು ನಿಶ್ಚಿಯಾರ್ಥಕ ಕ್ರಿಯಾಪದದ ಬದಲಾಗಿ ಕೃದಂತ ರೂಪದಲ್ಲಿ ಬಳಸಲ್ಪಟ್ಟಿದೆ. [18]ಪೌಲನು "ದೊಡ್ಡ ಅಕ್ಷರಗಳಲ್ಲಿ" ಬರೆಯುವದನ್ನು ವಿವಿಧ ವೇದ ಪಂಡಿತರು ಆತನ "ದುಡಿಯುವ ಕೈಗಳು," "ಕಣ್ಣು ದೃಷ್ಟಿ ಮಂದವಾಗುವಿಕೆ," ಅಥವಾ "ಆತನು ಹೇಳಲಿಚ್ಛಿಸುವ ಅಂಶವನ್ನು ಎತ್ತಿ ತೋರಿಸುವ" ಬಯಕೆಯಿಂದಾಗಿ ಆಗಿರಬಹುದೆಂದು ಹೇಳಿರುತ್ತಾರೆ (Boles, 168). [19]Everett Ferguson, *Backgrounds of Early Christianity*, 2nd ed. (Grand Rapids, Mich.: Wm. B. Eerdmans Publishing Co., 1993), 121. [20]ಅಪೊಸ್ತಲರ ಕೃತ್ಯಗಳು 15:22-18:5ರಲ್ಲಿ "ಸೀಲ" ಎಂದು ಪರಿಚಿತನಾದ, "ಸಿಲ್ವಾನ"ನು ಬಹುಶಃ ಥೆಸಲೋನಿಕದವರಿಗೆ ಬರೆದ ಪತ್ರಿಕೆಗಳಿಗಾಗಿ ಪೌಲನ ಉಕ್ತಲೇಖಕನಾಗಿ ಇದ್ದಿರಬಹುದಾಗಿದೆ (ನೋಡಿರಿ 1 ಥೆಸಲೋನಿಕ 1:1; 2 ಥೆಸಲೋನಿಕ 1:1). ಆತನು 1 ಪೇತ್ರ 5:12ರಲ್ಲಿ ಪೇತ್ರನ ಉಕ್ತಲೇಖಕನಾಗಿರುವ ಅದೇ ವ್ಯಕ್ತಿಯಾಗಿರಬಹುದಾಗಿದೆ.

[21]ನೋಡಿರಿ 1 ಕೊರಿಂಥ 16:21; ಕೊಲೊಸ್ಸೆ 4:18; ಫಿಲೆಮೋನ 19. ಫಿಲೆಮೋನ 19ರಲ್ಲಿ ಪೌಲನ ಸ್ವಂತ ಕೈ ಬರಹವು ಎರಡು ಉದ್ದೇಶಗಳನ್ನು ನಡಿಸಿತ್ತು: ಅದು ಪತ್ರಿಕೆಯನ್ನು ಪ್ರಾಮಾಣೀಕರಿಸಿತ್ತು ಮತ್ತು ಒಂದು ವಾಯಿದೆ ಪತ್ರದ ಮೇಲೆ (ಓನೇಸಿಮನಿಂದ ಏನಾದರೂ ನಷ್ಟವಾಗಿದ್ದರೆ ಅದನ್ನು ಕೊಡುವೆನೆಂಬ ವಾಗ್ದಾನ) ಆತನ ಹಸ್ತಾಕ್ಷರವಾಗಿ ಕೆಲಸ ಮಾಡಿತ್ತು. [22]Leon Morris, *The Epistles of Paul to the Thessalonians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1956), 151. [23]Bauer,

411. [24]ನೋಡಿರಿ ಅಪೊಸ್ತಲರ ಕೃತ್ಯಗಳು 2:38, 39; ರೋಮಾ 2:28, 29; 9:6-8; ಕೊಲೊಸ್ಸೆ 2:11-14. [25]F. F. Bruce, *The Epistle to the Galatians*, The New International Greek Testament Commentary (Grand Rapids, Mich.: Wm. B. Eerdmans Publishing Co., 1982), 269. [26]Cicero *In Defense of Rabirus* 5.16. [27]J. B. Lightfoot, *The Epistle of St. Paul to the Galatians*, Classic Commentary Library (Grand Rapids, Mich.: Zondervan Publishing House, 1957), 223. Bruceನು ಸಹ "ಶಿಲುಬೆ" ಎಂಬುದಕ್ಕೆ ಪೂರ್ವಗಾಮಿ ಪದವಾಗಿರುವ ಸಾಧ್ಯತೆಯು ಅಧಿಕವಾಗಿದೆ ಎಂಬುದಾಗಿ ವಾದಿಸಿದನು. (Bruce, *Galatians*, 271.) [28]ನೋಡಿರಿ ರೋಮಾ 14; 15; 1 ಕೊರಿಂಥ 8:1-13; 10:31-33. [29]ಯೋಹಾನ 3:5ರಲ್ಲಿ "ನೀರು" ಎಂಬುದು ನಿಜಕ್ಕೂ ನೀರು ಆಗಿರುತ್ತದೆ, ಮತ್ತು ಅದನ್ನು ನೀರು ಎಂದಲ್ಲದೆ ಬೇರೆ ಇನ್ನೇನನ್ನಾದರೂ ಮಾಡುವದಕ್ಕಾಗಿ ಯಾವದೇ ತಾರ್ಕಿಕವಾದ ದಾರಿಯು ಇರುವದಿಲ್ಲ. ಶಾಸ್ತ್ರಾಧಾರಿತ ದೀಕ್ಷಾಸ್ನಾನವು ಕೇವಲ ನೀರಿನಲ್ಲಿ "ಹೂಣಲ್ಪಡುವಿಕೆ" ಆಗಿದೆಯಷ್ಟೆ (ರೋಮಾ 6:4; ಕೊಲೊಸ್ಸೆ 2:11, 12). ಇದು ಸ್ವತಃ ಕರ್ತನು ತೆಗೆದುಕೊಂಡ ದೀಕ್ಷಾಸ್ನಾನದ, ಸ್ನಾನಿಕವಾದ ಯೋಹಾನನ ಪೂರ್ವಸಿದ್ಧತಾ ಕೆಲಸದ, ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಸಿಕ್ಕುವ ಮಹಾ ಆದೇಶದಲ್ಲಿನ ದೀಕ್ಷಾಸ್ನಾನದ ಉದಾಹರಣಗಳ ರೀತಿಯಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ. ಇಂದು ಕ್ರಿಸ್ತನ ಸಂದೇಶವನ್ನು ಸಾರುವವರಾಗಿದ್ದರೂ ಯೇಸುವಿನ ಅಪೊಸ್ತಲರು ಬೋಧಿಸಿದ ಹಾಗೂ ಆಚರಣೆಯನ್ನು ಸಹ ಮಾಡಿದ ಈ ವಿಷಯದ ಕುರಿತು ಮೌನವಾಗಿ ಉಳಿಯುವ ಅಥವಾ ಅತ್ಯಂಥ ಕಲ್ಪನಾತ್ಮಕ ಅರ್ಥನಿರೂಪಣೆಗಳನ್ನು ಮಾಡುವದಕ್ಕೆ ಹುಡುಕುವವರ ವಿಷಯದಲ್ಲಿ ನಮಗೆ ನಡುಕ ಉಂಟಾಗುತ್ತದೆ. [30]ನೋಡಿರಿ *ಅನ್ವಯಿಸುವಿಕೆ: ಕ್ಯಾನೋನ್*, ಪುಟಗಳು 179-181.

[31]NASB ಹಾಗೆಯೇ, ಆಂಗ್ಲದ ಇತರ ಅನೇಕ ಆವೃತ್ತಿಗಳು ಈ ನಿರ್ದಿಷ್ಟವಾದ *ಕಾಯ್* ಎಂಬುದನ್ನು 6:16ರಲ್ಲಿ "ಮತ್ತು" ಎಂಬುದಾಗಿ ಅನುವಾದಿಸುತ್ತವೆ (KJV; ASV; NKJV; NAB; NJB; NEB; GNT; NRSV; CJB; ESV). [32]Bauer, 495; F. Blass and A. Debrunner, *A Greek Grammar of the New Testament and Other Early Christian Literature*, trans. and rev. Robert W. Funk (Chicago: University of Chicago Press, 1961), 228 (no. 442.9). [33]ಈ ಪದಗುಚ್ಛವನ್ನು "*ಅಂದರೆ,* ದೇವರ ಇಸ್ರಾಯೇಲ್ಯರು" ಅಥವಾ "*ಏನೆಂದರೆ,* ದೇವರ ಇಸ್ರಾಯೇಲ್ಯರು" ಎಂಬುದ ಸಹ ಅನುವಾದಿಸಬಹುದಾಗಿದೆ. ಇತರ ತರ್ಜುಮೆಗಳು ಸಂಬಂಧಾವ್ಯವನ್ನು ಕೈ ಬಿಡುವ ಮೂಲಕ ಅದೇ ಅರ್ಥಕ್ಕೆ ಬರುತ್ತವೆ (RSV; REB; CEV; NLT). [34]R. Alan Cole, *The Epistle of Paul to the Galatians*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1965), 183–84. [35]Justin Martyr *Dialogue with Trypho* 11. [36]John Chrysostom *Commentary on Galatians* 6.15, 16. [37]ಸಭೆಯನ್ನು "ಇಸ್ರಾಯೇಲ್ಯ" ಎಂದು ಕರೆಯುವ ಇನ್ನೊಂದು ವಾಕ್ಯವು ರೋಮಾ 11:26ರಲ್ಲಿ ಸಿಕ್ಕುತ್ತದೆ, ಆದಾಗ್ಯೂ ಈ ವಾಕ್ಯಭಾಗದ ಅರ್ಥನಿರೂಪಣೆಯು ಕಷ್ಟಕರವಾಗಿರುತ್ತದೆ. [38]Longenecker, 300. [39]ಸ್ಪಷ್ಟವಾಗಿರುವಂತೆ, ಯೆಹೂದ್ಯರ ಒಡೆತನದಲ್ಲಿದ್ದ ದಾಸರಿಗೆ ಬರೆಯನ್ನು ಹಾಕಲಾಗುತ್ತಿರಲಿಲ್ಲ. ಹೇಗೂ, ಜೀವಿತಕಾಲವೆಲ್ಲಾ ದಾಸರಾಗಿರಬೇಕೆಂದು ಮನಃಪೂರ್ವಕವಾಗಿ ನಿರ್ಣಯಿಸಿಕೊಳ್ಳುವವರಿಗೆ ಸಲಾಕೆಯಿಂದ ಚುಚ್ಚುವ ಮೂಲಕ "ಕಿವಿ-ಗುರುತು" ಹಾಕಲಾಗುತ್ತಿತ್ತು (ವಿಮೋಚನಕಾಂಡ 21:5, 6; ಧರ್ಮೋಪದೇಶಕಾಂಡ 15:16, 17). [40]"ವಿನಯತೆ" ಅಥವಾ "ದೀನತೆ" ಎಂದು ಸಹ ಅನುವಾದಿಸಲ್ಪಟ್ಟಿರುವ "ಸಾಧುತ್ವ"ದ (*prautēs*) ಮನೋಭಾವವು ಸಭೆಯ ಶಿಸ್ತುಗೊಳಿಸುವಿಕೆಯ ಅಂಥ ಅಷ್ಟೊಂದು ಸೂಕ್ಷ್ಮವಾದ ಮತ್ತು ಗಂಭೀರವಾದ ವಿಷಯವನ್ನು ನಡಿಸುವವರಿಗೆ ಅವಶ್ಯಕವಾಗಿರುತ್ತದೆ. ಈ ಮುಂಚೆ ತಿಳಿಸಿದ ಪ್ರಕಾರವೇ, "ತಿದ್ದಿ ಸರಿಮಾಡು" ಎಂಬುದಕ್ಕಿರುವ ಗ್ರೀಕ್ ಪದವು (*katartizō*) ಮೂಲತಃ "ಉತ್ತಮವಾಗಿ ಕ್ರಮ ಪಡಿಸು," ಒಡೆದು ಅಥವಾ ಹರಿದು ಹೋಗಿರುವದನ್ನು "ಸರಿಪಡಿಸು" ಎಂಬ ಅರ್ಥವನ್ನು ಕೊಡುತ್ತದೆ, ಮೀನು ಹಿಡಿಯುವು ಮುಗಿದ ಬಳಿಕ ಯಾಕೋಬ ಮತ್ತು ಯೋಹಾನರು "ತಮ್ಮ ಬಲೆಗಳನ್ನು ಸರಿಮಾಡುತ್ತಿದ್ದ" ಪ್ರಕಾರವೇ (ಮತ್ತಾಯ 4:21). ಅದರ ಆತ್ಮೀಕವಾದ ಅನ್ವಯಿಕೆಯು 1 ಕೊರಿಂಥ 1:10 ಮತ್ತು 1 ಥೆಸಲೋನಿಕ 3:10ರಲ್ಲಿ ಕಾಣಿಸಿಕೊಳ್ಳುತ್ತದೆ, ಅಲ್ಲಿ ಅದು ಕರ್ತನ ಜನರು ಉತ್ತಮವಾಗಿ ಕೆಲಸ ಮಾಡುತ್ತಾ ಲೋಕದಲ್ಲಿ ಧ್ಯೇಯವನ್ನು ಸಂಪೂರ್ಣಗೊಳಿಸುವಂತಾಗುವ ಹಾಗೆ ಸಭೆಯಲ್ಲಿ "ಸರಿಪಡಿಸುವ" ಅಗತ್ಯವಿರುವ ಸಂಬಂಧಗಳನ್ನು ಸೂಚಿಸುತ್ತದೆ. ಬಲೆಗಳು ಹರಿದು ಹೋಗಿದ್ದರೆ ಹೇಗೆ ಮೀನುಗಳನ್ನು ಸಂಗ್ರಹಿಸಲಾರವೋ, ಹಾಗೆಯೇ ಸಭೆಯು ಪಂಗಡಗಳಿಂದ ಮತ್ತು ಪಕ್ಷಗಳಿಂದಾಗಿ ಅನ್ಯೋನ್ಯತೆಯನ್ನು ಹರಿದುಕೊಂಡಿರುವದಾದರೆ ಮನುಷ್ಯರನ್ನು "ಹಿಡಿಯುವ" ದೈವಿಕ ಯೋಜನೆಯನ್ನು ನೆರವೇರಿಸುವದಕ್ಕೆ ಶಕ್ತವಾಗದೆ ಇರಬಹುದು (ನೋಡಿರಿ ಮತ್ತಾಯ 5:14-16; ಯೋಹಾನ 13:34, 35).

[41]ಸಭೆಯ ಶಿಸ್ತು ಮತ್ತು ಅನ್ಯೋನ್ಯತೆಯಿಂದ ದೂರವಿರುವಿಕೆಯ ವಿಷಯದಲ್ಲಿ, ನೋಡಿರಿ 1 ಕೊರಿಂಥ 5:5, 11; 2 ಥೆಸಲೋನಿಕ 3:6, 13-15; ತೀತನಿಗೆ 3:9-11; 2 ಯೋಹಾನ 9, 10. [42]NASB, ಮಾತ್ರವಲ್ಲದೆ ಅನೇಕ ಇತರ ತರ್ಜುಮೆಗಳು, ಎರಡೂ ಪದಗುಚ್ಛಗಳನ್ನು "the" ಎಂಬ ನಿರ್ದಿಷ್ಟ ಗುಣವಾಚಿಯೊಂದಿಗೆ ಅನುವಾದಿಸುತ್ತವೆ, ಆದಾಗ್ಯೂ ಅದು ಗ್ರೀಕ್ ವಾಕ್ಯದಲ್ಲಿ ಕಾಣಿಸುವದಿಲ್ಲ. [43]Henry George Liddell and Robert Scott, *A Greek-English Lexicon*, 9th ed., rev. and aug. with supplement, rev. Henry Stuart Jones and Roderick Jackenzie (Oxford: Clarendon Press, 1968), 570. [44]W. Gutbrod, "ἔννομος," in *Theological Dictionary of the*

*New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1967), 4:1087. [45]ನೋಡಿರಿ ಮತ್ತಾಯ 22:36-40; ಯೋಹಾನ 13:34, 35; ರೋಮಾ 13:8-10; ಯಾಕೋಬ 2:8, 12. [46]ನೋಡಿರಿ ಮತ್ತಾಯ 16:27; 25:31-46; 2 ಕೊರಿಂಥ 5:10; ಎಫೆಸ 6:5-9; ಪ್ರಕಟನೆ 20:11-13; 22:12. [47]W. Gutbrod, "ἀνομία," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1967), 4:1086. [48]ನೋಡಿರಿ ಮತ್ತಾಯ 7:12; 22:36-40; ರೋಮಾ 13:8-10. [49]ನೋಡಿರಿ ಅಪೊಸ್ತಲರ ಕೃತ್ಯಗಳು 2:44-47; 4:32-37; 6:1-6. [50]Fred A. Fillmore, "Sowing the Seed of the Kingdom," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994).

[51]Knowles Shaw, "Bringing in the Sheaves," *Songs of the Church*, comp. and ed. Alton H. Howard (West Monroe, La.: Howard Publishing Co., 1977). [52]ನೋಡಿರಿ ಗಲಾತ್ಯ 1:6-10; ರೋಮಾ 16:17; 1 ತಿಮೊಥೆ 6:3-5; 2 ಯೋಹಾನ 10. [53]ನೋಡಿರಿ ರೋಮಾ 14:1-15:7; 1 ಕೊರಿಂಥ 8:1-13; 10:23-33. [54]ನೋಡಿರಿ ಅಪೊಸ್ತಲರ ಕೃತ್ಯಗಳು 24:17; ರೋಮಾ 15:25-28; 1 ಕೊರಿಂಥ 16:1, 2; 2 ಕೊರಿಂಥ 8; 9. [55]ನೋಡಿರಿ ಯೆಶಾಯ 22:22; ಮತ್ತಾಯ 16:18, 19; ಅಪೊಸ್ತಲರ ಕೃತ್ಯಗಳು 2:14, 37-41. [56]"ಪೇತ್ರ" ಎಂಬುದು ಅರಾಮಿಕ್ ಭಾಷೆಯ "ಕೇಫ" ಎಂಬುದಕ್ಕೆ ಸಮಾನವಾದ ಗ್ರೀಕ್ ಪದವಾಗಿತ್ತು. ಎರಡೂ ಪದಗಳ ಅರ್ಥವು "ಬಂಡೆ." [57]ನೋಡಿರಿ ಧರ್ಮೋಪದೇಶಕಾಂಡ 10:12-16; 30:4-6; ಯೆರೆಮೀಯ 9:25, 26; ಫಿಲಿಪ್ಪಿ 3:2, 3; ಕೊಲೊಸ್ಸೆ 2:11-14. [58]ಗ್ರೀಕ್ ಸಂಪ್ರದಾಯಿಕ ಸಭೆಯು ದೀಕ್ಷಾಸ್ನಾನವನ್ನು ಮುಳುಗಿಸುವಿಕೆ ಮಾತ್ರವೇ ಎಂದು ಸರಿಯಾಗಿಯೇ ಅರ್ಥಮಾಡಿಕೊಂಡಿರುತ್ತದಾದರೂ, ಅದರ ಸದಸ್ಯರು ಅನೇಕ ಸಾರಿ ತಪ್ಪಾದ ವ್ಯಕ್ತಿಗಳಿಗೆ (ಪಾಪವಿಲ್ಲದ ಮತ್ತು ನಂಬುವದಕ್ಕೆ ಅಸಮರ್ಥರಾದ ಶಿಸುಗಳಿಗೆ) ದೀಕ್ಷಾಸ್ನಾನ ಮಾಡಿಸುತ್ತಾರೆ. [59]ನೋಡಿರಿ ರೋಮಾ 6:1-8; ಗಲಾತ್ಯ 3:26-29; ಕೊಲೊಸ್ಸೆ 2:9-13. [60]ನೋಡಿರಿ ಅಪೊಸ್ತಲರ ಕೃತ್ಯಗಳು 2:21, 37-41; 22:16; 1 ಕೊರಿಂಥ 6:11; ಇಬ್ರಿಯ 10:19-23.

[61]ಈ ಪದಗುಚ್ಛವು 1 ಕೊರಿಂಥ 10:18ರ ಗ್ರೀಕ್ ವಾಕ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಈ ವಿಚಾರವು ಗಲಾತ್ಯ 4:23, 29 ರಲ್ಲಿ ಸಹ ಸಿಕ್ಕುತ್ತದೆ. [62]D. A. Carson, Douglas J. Moo, and Leon Morris, *An Introduction to the New Testament* (Grand Rapids, Mich.: Zondervan Publishing House, 1992), 487. [63]Ibid., 492. [64]F. F. Bruce, *The Canon of Scripture* (Downers Grove, Ill.: InterVarsity Press, 1988), 158–61. [65]Eusebius *Ecclesiastical History* 3.3. [66]Athanasius *Letter* 39.5. [67]Bruce, *Canon*, 232-33.